
ಸಿಎಚ್‌ಆರ್‌ಐ 2019

# ಕಾರಾಗೃಹಗಳನ್ನು ಕುರಿತು 101 ಪ್ರಶ್ನೆಗಳು

## – ಯಾರನ್ನು ಕೇಳಬೇಕೆಂದು ನಿಮಗೆ ತಿಳಿದಿರಲಿಲ್ಲ




CHRI
Commonwealth Human Rights Initiative
working for the *practical* realisation of human rights
in the countries of the Commonwealth

# ಕಾಮನ್‌ವೆಲ್ತ್ ಮಾನವ ಹಕ್ಕುಗಳ ಉಪಕ್ರಮಗಳ ಬಗ್ಗೆ

ಕಾಮನ್‌ವೆಲ್ತ್ ಮಾನವ ಹಕ್ಕುಗಳ ಉಪಕ್ರಮ (ಸಿ.ಎಚ್.ಆರ್.ಐ.) ಎನ್ನುವ ಸಂಸ್ಥೆ ಒಂದು ಸ್ವತಂತ್ರ, ಲಾಭ ರಹಿತ, ಪಕ್ಷಪಾತ ರಹಿತ, ಅಂತರರಾಷ್ಟ್ರೀಯ ಸರ್ಕಾರೇತರ ಸಂಸ್ಥೆಯಾಗಿದ್ದು, ಮಾನವ ಹಕ್ಕುಗಳ ಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಕರ್ತವ್ಯವನ್ನು ನಿರ್ವಹಿಸುತ್ತಿರುವ ಸಂಸ್ಥೆಯಾಗಿದೆ. 1987 ರಲ್ಲಿ ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿನ ಕೆಲವು ಪ್ರಮುಖ ವೃತ್ತಿಪರ ಸಂಘಟನೆಗಳು ಸೇರಿ ಸಿ.ಎಚ್.ಆರ್.ಐ. ಯನ್ನು ಸ್ಥಾಪಿಸಿದವು. ಅಲ್ಲಿಂದ, 53 ಕಾಮನ್‌ವೆಲ್ತ್ ರಾಷ್ಟ್ರಗಳು ತಮ್ಮ ಒಡನಾಟದ ಸಂಘಟನೆಯಲ್ಲಿ ಮಾನವ ಹಕ್ಕುಗಳ ಕುರಿತಾಗಿ ಸಾಕಷ್ಟು ಗಮನ ಹರಿಸದಿದ್ದಾಗ್ಯೂ, ಕಾಮನ್‌ವೆಲ್ತ್ ಮಾನವ ಹಕ್ಕುಗಳ ಉಪಕ್ರಮವು (ಸಿ.ಎಚ್.ಆರ್.ಐ.) ತನ್ನ ಸದಸ್ಯ ರಾಷ್ಟ್ರಗಳಿಗೆ ಸಾಮಾನ್ಯ ಕಾನೂನುಗಳ ಆಧಾರವನ್ನು ಒದಗಿಸುತ್ತಾ ಬಂದಿದೆ.

ಮಾನವ ಹಕ್ಕುಗಳ ಪ್ರಗತಿಗಳು ಮತ್ತು ಹಿನ್ನಡೆಗಳ ಬಗ್ಗೆ ಸಿ.ಎಚ್.ಆರ್.ಐ. ಯು ನಿರಂತರವಾಗಿ ತನ್ನ ವರದಿಗಳು ಮತ್ತು ಕಾಲಾಕಾಲಕ್ಕೆ ನಡೆಸಿದ ಆವರ್ತಕ ಅನ್ವೇಷಣೆಗಳ ಮೂಲಕ ಕಾಮನ್‌ವೆಲ್ತ್‌ನ ರಾಷ್ಟ್ರಗಳಿಗೆ ತನ್ನ ಕಡೆಗೆ ಗಮನವನ್ನು ಸೆಳೆಯುವಂತೆ ಮಾಡುತ್ತಿದೆ. ಮಾನವ ಹಕ್ಕುಗಳ ಉಲ್ಲಂಘನೆಯನ್ನು ತಡೆಗಟ್ಟುವ ವಿಧಾನಗಳು ಮತ್ತು ಕ್ರಮಗಳಿಗಾಗಿ ವಕಾಲತ್ತನ್ನು ವಹಿಸುತ್ತಿದೆ. ಮಾತ್ರವಲ್ಲದೆ ಸಿ.ಎಚ್.ಆರ್.ಐ. ಯು ಕಾಮನ್ವೆಲ್ತ್ ಸೆಕ್ರೆಟರಿಯೇಟ್ ಮತ್ತು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸಮಿತಿಯ ಸದಸ್ಯರು, ಮಾಧ್ಯಮದವರು ಹಾಗೂ ನಾಗರಿಕ ಸಮಾಜವನ್ನು ಒಗ್ಗೂಡಿಸುತ್ತದೆ. ಸಿ.ಎಚ್.ಆರ್.ಐ. ಯು ಸಾರ್ವಜನಿಕ ಶೈಕ್ಷಣಿಕ ಕಾರ್ಯಕ್ರಮಗಳು, ನೀತಿ, ಸಂವಾದ, ತುಲನಾತ್ಮಕ ಸಂಶೋಧನೆಗಳು, ವಕಾಲತ್ತು ಹಾಗೂ ಮಾಹಿತಿಗಳು ಮತ್ತು ನ್ಯಾಯಕ್ಕೆ ಪ್ರವೇಶಾವಕಾಶದ ಸಮಸ್ಯೆಗಳ ಬಗ್ಗೆ ನೆಟ್‌ವರ್ಕಿಂಗ್ ಮಾಡುತ್ತಿದೆ.

ಸಿ.ಎಚ್.ಆರ್.ಐ. ಯು ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆ ಮತ್ತು ಕಾಮನ್‌ವೆಲ್ತ್ ಹರಾರೆ ತತ್ವಗಳು ಹಾಗೂ ಇತರೆ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲಾದ ಮಾನವ ಹಕ್ಕುಗಳ ಮಾನ್ಯತೆ ಪಡೆದ ಸಾಧನಗಳು ಹಾಗೂ ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ಮಾನವ ಹಕ್ಕುಗಳನ್ನು ಬೆಂಬಲಿಸುವ ದೇಶಿಯ ಸಾಧನಗಳನ್ನು ಉತ್ತೇಜಿಸಲು ಪ್ರಯತ್ನಿಸುತ್ತದೆ.

ಸಿ.ಎಚ್.ಆರ್.ಐ. ನ ಪ್ರಧಾನ ಕಛೇರಿಯು ಭಾರತದ ನವದೆಹಲಿಯಲ್ಲಿ ಸ್ಥಾಪಿತಗೊಂಡಿದ್ದು, ಇದರ ಶಾಖಾ ಕಛೇರಿಗಳು ಯು.ಕೆ. ಯ ಲಂಡನ್ ಮತ್ತು ಘಾನಾದ ಅಕ್ರಾದಲ್ಲಿ ಸ್ಥಾಪಿಸಲ್ಪಟ್ಟಿದೆ.


**ಅಂತರಾಷ್ಟ್ರೀಯ ಸಲಹಾ ಆಯೋಗ:** ಯಶ್‌ಪಾಲ್ ಘಾಯ್, ಅಧ್ಯಕ್ಷರು. **ಸದಸ್ಯರು:** ಆಲಿಸನ್ ಡುಕ್ಸ್‌ಬರಿ, ವಜಾಹತ್ ಹಬಿಬುಲ್ಲಾ, ವಿವೇಕ್ ಮಾರು, ಎಡ್ವರ್ಡ್ ಮಾರ್ಟಿಮರ್, ಸ್ಯಾಮ್ ವಕುಡ್‌ಜ್ಹೆಟೋ ಮತ್ತು ಸಂಜಯ್ ಹಝಾರಿಕಾ.

**ಕಾರ್ಯಕಾರಿ ಸಮಿತಿ (ಭಾರತ):** ವಜಾಹತ್ ಹಬಿಬುಲ್ಲಾ, ಅಧ್ಯಕ್ಷರು. **ಸದಸ್ಯರು:** ಬಿ. ಕೆ. ಚಂದ್ರಶೇಖರ್, ಜಯಂತೋ ಚೌಧರಿ, ಮಜಾ ಧಾರುವಾಲ, ನಿತಿನ್ ದೇಸಾಯ್, ಕಮಲ್ ಕುಮಾರ್, ಪೂನಮ್ ಮುಖರ್ಜಿ, ಜಾಕೋಬ್ ಪುನ್ನೋಸೇ, ವಿನಿತಾ ರೈ, ನಿಧಿ ರಾಜ್ದಾನ್, ಎ. ಪಿ. ಷಾ ಮತ್ತು ಸಂಜಯ್ ಹಝಾರಿಕಾ.

**ಕಾರ್ಯಕಾರಿ ಸಮಿತಿ (ಘಾನಾ):** ಸಾಮ್ ಒಕುಡ್‌ಜೆಟೊ, ಅಧ್ಯಕ್ಷರು. **ಸದಸ್ಯರು:** ಅಕೊಟೊ ಆಂಪಾವ್, ಯಶ್‌ಪಾಲ್ ಘಾಯ್, ವಜಾಹತ್ ಹಬೀಬುಲ್ಲಾ, ಕೊಫ್ಹಿ ಕ್ವಾಷಿಗಾಹ್, ಜುಲಿಯಟ್ ಟುಆಕ್ಲಿ ಮತ್ತು ಸಂಜಯ್ ಹಝಾರಿಕಾ.

**ಕಾರ್ಯಕಾರಿ ಸಮಿತಿ (ಯು.ಕೆ.):** ಜೊ ಅನ್ನಾ ಎವಾರ್ಟ್– ಜೇಮ್ಸ್, ಅಧ್ಯಕ್ಷರು. **ಸದಸ್ಯರು:** ರಿಚರ್ಡ್ ಬ್ರೌನೆ, ಪ್ರಲಾಬ್ ಬರುವಾ, ಟೋನಿ ಫೋರ್ಮೆನ್, ನೆವಿಲ್ ಲಿಂಟನ್, ಸುಝಾನೆ ಲ್ಯಾಂಬರ್ಟ್ ಮತ್ತು ಸಂಜಯ್ ಹಝಾರಿಕಾ.

ಸಂಜಯ್ ಹಝಾರಿಕಾ, ಅಂತಾರಾಷ್ಟ್ರೀಯ ನಿರ್ದೇಶಕರು.



ಐಎಸ್‌ಬಿಎನ್: 978–93–81241–65–3



©2019. ಈ ವರದಿಯ ಯಾವುದೇ ಭಾಗವನ್ನು ಉಪಯೋಗಿಸುವುದಾದರೆ ಅದರ ಮೂಲದ ಆಭಾರವನ್ನು ಮನ್ನಿಸಬೇಕಾಗುತ್ತದೆ.




**ಸಿ.ಎಚ್.ಆರ್.ಐ. ಯ ಪ್ರಧಾನ ಕಛೇರಿ, ನವದೆಹಲಿ:**
55ಎ, 3ನೇ ಮಹಡಿ, ಸಿದ್ಧಾರ್ಥ ಚೇಂಬರ್ಸ್,
ಕಾಲು ಸರಾಯ್, ನವದೆಹಲಿ 110017, ಭಾರತ.
Tel: +91 11 4318 0200, ಫ್ಯಾಕ್ಸ್: +91 11 2686 4688
ಇ–ಮೇಲ್: info@humanrightsinitiative.org

**ಸಿ.ಎಚ್.ಆರ್.ಐ. ಲಂಡನ್:**
ಕೊಠಡಿ ಸಂಖ್ಯೆ. 219, ಸ್ಕೂಲ್ ಆಫ್ ಅಡ್ವಾನ್ಸ್ಡ್ ಸ್ಟಡಿ,
ಸೌಥ್ ಬ್ಲಾಕ್, ಸೆನೇಟ್ ಹೌಸ್, ಮಾಲೆಟ್ ಸ್ಟ್ರೀಟ್,
ಲಂಡನ್ WCIE 7HU, ಯುನೈಟೆಡ್ ಕಿಂಗ್‌ಡಂ.
ಇ–ಮೇಲ್: london@humanrightsinitiative.org

**ಸಿ.ಎಚ್.ಆರ್.ಐ. ಆಫ್ರಿಕಾ, ಅಕ್ರಾ:**
ಮನೆ ಸಂಖ್ಯೆ. 9, ಸಮೋರಾ ಮಕೆಲ್ ಸ್ಟ್ರೀಟ್, ಅಸೈಲಂ ಡೌನ್,
ಬೆವರ್ಲಿ ಹಿಲ್ಸ್ ಹೋಟೆಲ್ ಎದುರು,
ಟ್ರಸ್ಟ್ ಟವರ್ಸ್, ಆಕ್ರಾ, ಘಾನಾ.
ದೂರವಾಣಿ/ಫ್ಯಾಕ್ಸ್: 233 302971170
ಇ–ಮೇಲ್: chriafrica@humanrightsinitiative.org

**www.humanrightsinitiative.org**




## ಈ ಪುಸ್ತಕದ ಬಗ್ಗೆ

ಕಾರಾಗೃಹಗಳು ಮುಚ್ಚಿದ ಸ್ಥಳಗಳು. ಬಾಹ್ಯ ಜಗತ್ತಿಗೆ ಕಾರಾಗೃಹ ವಾಸಿಗಳ (ಬಂದಿಗಳ) ದೈನಂದಿನ ಜೀವನ ಹಾಗೂ ಚಟುವಟಿಕೆಗಳ ಬಗ್ಗೆ ಅಲ್ಪವಾದ ಮಾಹಿತಿ ಲಭ್ಯವಿರುವುದನ್ನು ಕಾಣಬಹುದು. ಇದಲ್ಲದೆ ಕಾರಾಗೃಹಗಳ ಬಗೆಗಿನ ಮಾಹಿತಿಯನ್ನು ತಿಳಿಯಲು ಬಹಳ ಕಡಿಮೆ ಜನರಿಗೆ ಆಸಕ್ತಿ ಇರುವುದನ್ನು ಕಾಣಬಹುದು. ಆದರೆ ಅವರುಗಳು ಕಾರಾಗೃಹದಲ್ಲಿ ತಾವೇ ಇದ್ದರೆ ವಿನಃ ಅದನ್ನು ಕಂಡುಕೊಳ್ಳುವುದಿಲ್ಲ. ಇದರ ಅರ್ಥವೇನೆಂದರೆ, ಕಾರಾಗೃಹಗಳ ಬಗ್ಗೆ ಜನರಿಗೆ ಆಸಕ್ತಿಯಿಂದಾಗಲಿ ಅಥವಾ ಅವಶ್ಯಕತೆಯಿಂದಾಗಲಿ ಇರುವಂತಹ ಬಹಳಷ್ಟು ಪ್ರಶ್ನೆಗಳಿಗೆ ಉತ್ತರ ಇಲ್ಲದಿರುವುದನ್ನು ಕಾಣಬಹುದು. ಈ ಪುಸ್ತಕದಲ್ಲಿ ಕಾರಾಗೃಹಗಳು ಮತ್ತು ಅದರಲ್ಲಿನ ಬಂದಿನಿವಾಸಿಗಳ ಕುರಿತು ಸಾಮಾನ್ಯವಾಗಿ ಮತ್ತು ಆಗಾಗ್ಗೆ ಮಾಹಿತಿ ಕೇಳುವಂತಹ 101 ಪ್ರಶ್ನೆಗಳಿಗೆ ಉತ್ತರ ನೀಡುವ ಪ್ರಯತ್ನವನ್ನು ಮಾಡಲಾಗಿದೆ.

ಭಾರತೀಯ ಕಾರಾಗೃಹಗಳನ್ನು ವಿದೇಶಿ ಕಾರಾಗೃಹಗಳಿಗೆ ಹೋಲಿಸಿದರೆ ವಿಭಿನ್ನ ರೀತಿಯ ಆಡಳಿತಾತ್ಮಕ ಹಾಗೂ ನಿಯಮಾವಳಿಗಳನ್ನು ಹೊಂದಿರುವುದನ್ನು ಹಾಗೂ ಸಾಕಷ್ಟು ಪ್ರಮಾಣದಲ್ಲಿ ಭಿನ್ನತೆಗಳಿರುವುದನ್ನು ಕಾಣಬಹುದು. ಇದರಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ, ಬಹಳಷ್ಟು ಪ್ರಶ್ನೆಗಳಿಗೆ ಸಮಂಜಸವಾದ ಮತ್ತು ಸಮರ್ಪಕವಾದ ಉತ್ತರಗಳು ದೊರೆಯುವುದಿಲ್ಲ ಮತ್ತು ಬಂದಿಯು ಯಾವ ರಾಜ್ಯದ ಕಾರಾಗೃಹದಲ್ಲಿದ್ದಾನೋ, ಆಯಾ ರಾಜ್ಯಗಳ ಕಾರಾಗೃಹಗಳ ಕೈಪಿಡಿಯ ಉಲ್ಲೇಖಗಳನ್ನು ಪರಿಶೀಲಿಸಬೇಕಾಗಬಹುದು. ಆದರೆ ಎಲ್ಲಾ ಕೈಪಿಡಿಗಳಲ್ಲಿ ಆಧಾರವಾಗಿರುವ ತತ್ವಗಳು ಭಾಗಶಃ ಒಂದೇ ಆಗಿರುತ್ತವೆ ಮತ್ತು ಈ ಮೇಲಿನ ಎಲ್ಲಾ ಅಂಶಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಈ ಕಿರುಪುಸ್ತಕವನ್ನು ಸಿದ್ಧಪಡಿಸಲಾಗಿದೆ. ಸಿ.ಎಚ್.ಆರ್.ಐ. ನಲ್ಲಿರುವ ಪ್ರಶ್ನೆಗಳಿಗೆ ಸಂಬಂಧಿಸಿದ ಉತ್ತರಗಳನ್ನು ಬಹಳಷ್ಟು ರಾಜ್ಯಗಳಲ್ಲಿನ ಕಾರಾಗೃಹದ ವ್ಯವಸ್ಥೆಗಳ ಅಪಾರ ಅನುಭವಗಳನ್ನು ಕ್ರೋಢಿಕರಿಸಿ ನೀಡಲಾಗಿದೆ. ಆದಾಗ್ಯೂ ಕಾರಾಗೃಹಗಳ ನಿಯಮಾವಳಿಗಳಲ್ಲಿ, ರಾಜ್ಯ-ರಾಜ್ಯಗಳ ನಡುವೆ ಸಾಕಷ್ಟು ಪ್ರಮಾಣದಲ್ಲಿ ವ್ಯತ್ಯಾಸವಿರುವುದರಿಂದ ಸಾಕಷ್ಟು ಮುಂಜಾಗ್ರತೆ ವಹಿಸಿ ಈ ಕೈಪಿಡಿಯನ್ನು ಅನುಸರಿಸಬೇಕಾಗುತ್ತದೆ ಹಾಗೂ ಆಯಾ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವಂತಹ ಕೈಪಿಡಿಯನ್ನು ಪರಿಶೀಲಿಸಬೇಕಾಗಬಹುದು. ಕೆಲವೊಂದು ವಿಷಯಾಂಶಗಳಲ್ಲಿ ಲೋಪ-ದೋಷಗಳು ಇದ್ದಾಗ್ಯೂ ಕೂಡ ಅವು ಉದ್ದೇಶಪೂರ್ವಕವಾಗಿರುವುದಿಲ್ಲ. ಸಾರ್ವಜನಿಕವಾಗಿ ದೊರಕಿದ ಮಾಹಿತಿಗಳು ಹಾಗೂ ಬಹಳ ಪರಿಶ್ರಮದೊಂದಿಗೆ ವಿಶ್ಲೇಷಿಸಿದ ಸಂಶೋಧಿತ ಮಾಹಿತಿಗಳನ್ನು ಈ ಪುಸ್ತಕವು ಒಳಗೊಂಡಿದೆ.

# ಸ್ವೀಕೃತಿಗಳು



ಕಾಮನ್‌ವೆಲ್ತ್ ಮಾನವ ಹಕ್ಕುಗಳ ಉಪಕ್ರಮ (ಸಿ.ಎಚ್.ಆರ್.ಐ.) ಈ ಕೈಪಿಡಿಯ ರಚನೆಗಾಗಿ ಬಹಳಷ್ಟು ಕೊಡುಗೆದಾರರಿಂದ ಮಾಹಿತಿಯನ್ನು ಸಂಗ್ರಹಿಸುವುದರ ಮೂಲಕ ರೂಪಿಸಲಾಗಿದೆ. ಮಾಹಿತಿ ಒದಗಿಸಿದ ಎಲ್ಲರಿಗೂ ಈ ಮೂಲಕ ಧನ್ಯವಾದಗಳನ್ನು ಸಿ.ಎಚ್.ಆರ್.ಐ. ಯು ತಿಳಿಸುತ್ತದೆ. ಪ್ರಸ್ತುತ ಪಡಿಸಿರುವ ಈ ಕೈಪಿಡಿಯು, ಸಿ.ಎಚ್.ಆರ್.ಐ. ನ "101 things you wanted to know about the Police in India but were afraid to ask" ಎಂಬ ಕೈಪಿಡಿಯ ಮಾದರಿಯಲ್ಲಿದೆ. ಇದನ್ನು ಮಜಾ ದಾರೂವಾಲಾ, ಪ್ರಸ್ತುತ ವರಿಷ್ಠ ಸಲಹೆಗಾರರು, ಇವರು ಸಿ.ಎಚ್.ಆರ್.ಐ. ಸಂಸ್ಥೆಯ ನಿರ್ದೇಶಕರಾಗಿದ್ದಾಗ ಹಾಗೂ ಇವರೊಂದಿಗೆ ನವಾಜ಼್ ಕೋತ್ವಾಲ್, ಪೊಲೀಸ್ ಸುಧಾರಣಾ ಕಾರ್ಯಕ್ರಮದ ಸಂಯೋಜಕರು ಮತ್ತು ಸಾನಾ ದಾಸ್, ಮಾಜಿ ಸಂಯೋಜಕರು, ಕಾರಾಗೃಹ ಸುಧಾರಣಾ ಕಾರ್ಯಕ್ರಮ, ಇವರೆಲ್ಲರೂ ಸಿ.ಎಚ್.ಆರ್.ಐ. ಜೊತೆಗೂಡಿ ಈ ಕೈಪಿಡಿಯನ್ನು ರೂಪಿಸಿದರು. ಸಂಜಯ್ ಹಜ಼ಾರಿಕಾ, ಅಂತರಾಷ್ಟ್ರೀಯ ನಿರ್ದೇಶಕರು, ಸಿ.ಎಚ್.ಆರ್.ಐ., ಅವರಿಗೂ ಕೂಡ ನಮ್ಮ ಕೃತಜ್ಞತೆಗಳು. ಅವರು ಸಾಕಷ್ಟು ಕಾಲ ಸುಪ್ತವಾಗಿದ್ದ ಮತ್ತು ಸ್ಥಗಿತವಾಗಿದ್ದ ವಿಷಯದ ಬಗ್ಗೆ ಪ್ರಸ್ತುತದ ಪರಿಸ್ಥಿತಿಯನ್ನು ಅರಿತು ಅದರ ಪ್ರಚಾರ ಮತ್ತು ಪ್ರಕಟಣೆಯ ಸಂದರ್ಭವನ್ನು ಪ್ರೋತ್ಸಾಹಿಸಿ ಅದರ ವಿನ್ಯಾಸ ಮತ್ತು ಮಾಹಿತಿ ಸಂಗ್ರಹಣೆಯ ಬಗ್ಗೆ ಮಹತ್ವದ ಕಾಳಜಿ ವಹಿಸಿದರು. ರಿಚಾ, ಸಂವಹನ ನಿರ್ದೇಶಕರು, ಸಿ.ಎಚ್.ಆರ್.ಐ., ಸಂಕಲನಕ್ಕಾಗಿ ಬಹಳಷ್ಟು ಸಲಹೆ–ಸೂಚನೆಗಳನ್ನು ನೀಡಿದರು. ಮಧುರಿಮಾ ಧನುಕಾ, ಕಾರ್ಯಕ್ರಮದ ಮುಖ್ಯಸ್ಥರು, ಕಾರಾಗೃಹ ಪರಿಷ್ಕರಣಾ ಕಾರ್ಯಕ್ರಮ, ಸಿ.ಎಚ್.ಆರ್.ಐ., ಇವರೂ ಕೂಡ ಈ ಕೈಪಿಡಿಗೆ ಬಹಳಷ್ಟು ಪರಿಷ್ಕರಣೆಗಳನ್ನು ಸೂಚಿಸಿದರು. ನಾವು ವಿಶೇಷವಾಗಿ ಸುಗಂಧ ಶಂಕರ್, ವರಿಷ್ಠ ಕಾರ್ಯಕ್ರಮ ಅಧಿಕಾರಿ, ಕಾರಾಗೃಹ ಪರಿಷ್ಕರಣಾ ಕಾರ್ಯಕ್ರಮ, ಜಯಶ್ರೀ ಸೂರ್ಯನಾರಾಯಣ, ಮಾಜಿ ಸಲಹೆಗಾರರು, ಕಾರಾಗೃಹ ಪರಿಷ್ಕರಣಾ ಕಾರ್ಯಕ್ರಮ ಹಾಗೂ ರುಚಿಕಾ ನಿಕಮ್, ಮಾಜಿ ಸಲಹೆಗಾರರು, ಕಾರಾಗೃಹ ಪರಿಷ್ಕರಣಾ ಕಾರ್ಯಕ್ರಮ ಇದರ ಮೂಲ ಪ್ರತಿಯನ್ನು ರೂಪಿಸಲು ಶ್ರಮಿಸಿದ್ದರು. ಕೈಪಿಡಿಯನ್ನು ಪೂರ್ಣಗೊಳಿಸಲು ವಿನುಸಂಪತ್ ಕುಮಾರ್, ಮುಖ್ಯಸ್ಥರು, ಕಾರ್ಯತಂತ್ರ ನಿರ್ವಹಣೆ ಮತ್ತು ಸಂಯೋಜನೆ ಮತ್ತು ರಾಜ ಬಗ್ಗಾ, ವರಿಷ್ಠ ವಕಾಲತ್ತು ಮತ್ತು ಸಂಶೋಧನಾ ಅಧಿಕಾರಿ, ಸಿ.ಎಚ್.ಆರ್.ಐ. ಲಂಡನ್ ಇವರ ಪಾತ್ರವೂ ಬಹಳ. ನಾವು ಈ ಕೈಪಿಡಿಯನ್ನು ಪೂರ್ಣಗೊಳಿಸಲು ಶ್ರಮಿಸಿದ ಕಾರಾಗೃಹ ಪರಿಷ್ಕರಣಾ ಕಾರ್ಯಕ್ರಮದ ಇತರೆ ಅಧಿಕಾರಿಗಳಿಗೂ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಚೆಂಥಿಲ್ ಕುಮಾರ್ ಈ ಕೈಪಿಡಿ– 101 ರ ಸೃಜನಶೀಲ ವಿನ್ಯಾಸ ಮತ್ತು ತಯಾರಿಕೆಯಲ್ಲಿ ಪಾಲ್ಗೊಂಡಿದ್ದರು.

ಕನ್ನಡದಲ್ಲಿ ಈ ಪ್ರಕಟಣೆಯ ಅನುವಾದಕ್ಕಾಗಿ ಶ್ರೀ ಎನ್. ಎಸ್. ಮೇಘರಿಖ್, ಐ.ಪಿ.ಎಸ್., ಮಾನ್ಯ ಮಹಾ ನಿರ್ದೇಶಕರು, ಕಾರಾಗೃಹ ಮತ್ತು ಸುಧಾರಣಾ ಸೇವೆ, ಕರ್ನಾಟಕ; ಶ್ರೀ ಮಹೇಶ್ ಕುಮಾರ್ ಎಸ್. ಜಿಗಣಿ, ಪ್ರಾಂಶುಪಾಲರು, ಕಾರಾಗೃಹ ಸಿಬ್ಬಂದಿ ತರಬೇತಿ ಸಂಸ್ಥೆ, ಮೈಸೂರು; ಶ್ರೀ ಹೆಚ್. ಎಸ್. ಮಲ್ಲಿಕಾರ್ಜುನ ಶಾಸ್ತ್ರಿ, ನಿವೃತ್ತ ಪ್ರಾಂಶುಪಾಲರು, ಇನ್ಸ್ಟಿಟ್ಯೂಟ್ ಆಫ್ ಎಜುಕೇಶನ್ (ಬಿ.ಎಡ್. ಕಾಲೇಜು), ಮೈಸೂರು ಹಾಗೂ ಡಾ. ಪಿ. ಪ್ರದೀಪ್ ಕುಮಾರ್, ಮುಖ್ಯ ವೀಕ್ಷಕರು, ಕಾರಾಗೃಹ ಸಿಬ್ಬಂದಿ ತರಬೇತಿ ಸಂಸ್ಥೆ, ಮೈಸೂರು ಇವರಿಗೆ ಧನ್ಯವಾದಗಳು.

# ಸಾಮಾನ್ಯ

**1. ಕಾರಾಗೃಹಗಳೆಂದರೇನು?**

ಕಾರಾಗೃಹ ಎಂಬುದು ಬಂಧನಕ್ಕೆ ಒಳಪಡಿಸುವಂತಹ ಸ್ಥಳ. ಇದನ್ನು ರಾಜ್ಯ ಸರ್ಕಾರವು ನಿರ್ವಹಿಸುತ್ತದೆ, ಇಲ್ಲಿಗೆ ಆರೋಪಿಗಳನ್ನು/ಅಪರಾಧಿಗಳನ್ನು ದಂಡಾದೇಶವನ್ನು ಅನುಭವಿಸಲು ಕಳುಹಿಸಲಾಗುತ್ತದೆ ಅಥವಾ ಅವರ ಮೇಲಿನ ವಿಚಾರಣೆ ಕಾಯ್ದಿರಿಸಿದಾಗ ಬಂಧಿಸಿಡುವ ಸ್ಥಳ.

**2. ಕಾರಾಗೃಹಗಳು ಮತ್ತು ಪೊಲೀಸ್ ಲಾಕ್–ಅಪ್‌ಗಳು ಒಂದೇ ಆಗಿರುತ್ತದೆಯೇ?**

ಇಲ್ಲ, ಪೊಲೀಸ್ ಲಾಕ್–ಅಪ್ ಸ್ಥಳೀಯ ಪೊಲೀಸರು ಶಂಕಿತ ಆರೋಪಿಗಳನ್ನು ವಿಚಾರಣೆ ಮಾಡುವ ಅಥವಾ ಬಂಧನ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಮುನ್ನ ತಾತ್ಕಾಲಿಕ ತಡೆ ಮಾಡುವಂತಹ ಸ್ಥಳವಾಗಿದೆ. ಈ ತಾತ್ಕಾಲಿಕ ತಡೆಯಲ್ಲಿ ಪೊಲೀಸರ ವಶದಲ್ಲಿರುವ ವ್ಯಕ್ತಿಯನ್ನು 24 ತಾಸುಗಳಿಗಿಂತ ಹೆಚ್ಚು ಕಾಲ ತಡೆ ಹಿಡಿಯುವಂತಿಲ್ಲ.

**3. ಕಾರಾಗೃಹಗಳಿಗೆ ಯಾರನ್ನಾದರೂ ಕಳುಹಿಸಬಹುದೇ?**

ಇಲ್ಲ, ಒಬ್ಬ ವ್ಯಕ್ತಿಯನ್ನು ವಾರೆಂಟ್ ಅಥವಾ ಅಧಿಪತ್ರ ಎಂದು ಕರೆಯಲಾಗುವ ನ್ಯಾಯಾಂಗ ಆಜ್ಞೆ ಇಲ್ಲದೆ ಕಾರಾಗೃಹಗಳಿಗೆ ಕಳುಹಿಸಲು ಸಾಧ್ಯವಾಗುವುದಿಲ್ಲ. ಸೂಕ್ತ ವಾರೆಂಟ್ ಅಥವಾ ಅಧಿಪತ್ರ ಇಲ್ಲದೆ ಯಾರನ್ನಾದರೂ ಕಾರಾಗೃಹಕ್ಕೆ ಕಳುಹಿಸುವುದು ಕಾನೂನು ಬಾಹಿರ. ಭಾರತದಲ್ಲಿ 18 ವರ್ಷದ ಕೆಳಗಿರುವ ಆರೋಪಿತ ಅಥವಾ ಅಪರಾಧ ಮಾಡಿರುವ ವ್ಯಕ್ತಿಯನ್ನು ಯಾವ ಕಾರಾಗೃಹದಲ್ಲೂ ಇಡುವಂತಿಲ್ಲ.


**4. ಭಾರತದಲ್ಲಿ ಯಾವ ಕಾನೂನುಗಳು ಕಾರಾಗೃಹಗಳಿಗೆ ಅನ್ವಯಿಸುವುದು?**

ಕಾರಾಗೃಹಗಳು ಪ್ರಿಸನ್ಸ್ ಆ್ಯಕ್ಟ್ 1894 ರ ಅನ್ವಯ ಕೇಂದ್ರೀಯ ಕಾನೂನುಗಳಿಂದ ಆಡಳಿತಾತ್ಮಕವಾಗಿ ನಿರ್ವಹಿಸಲ್ಪಡುತ್ತದೆ. ಆದರೆ ಕಾರಾಗೃಹಗಳು ರಾಜ್ಯ ಪಟ್ಟಿಯ ಏಳನೇ ಶೆಡ್ಯೂಲ್‌ನಲ್ಲಿ ಬರುವುದರಿಂದ ಆಯಾ ರಾಜ್ಯಗಳು ಅದರದೇ ಆದ ಬದ್ಧತೆ ಹಾಗೂ ನಿಯಮಗಳನ್ನು ಸ್ಥಾಪಿತಗೊಳಿಸಿವೆ, ಅವುಗಳನ್ನು ಕಾರಾಗೃಹಗಳ ಕೈಪಿಡಿಯಲ್ಲಿ ಕ್ರೋಢಿಕರಿಸಲಾಗಿದೆ. ಈ ನಿಯಮಾವಳಿಗಳು ಕಾರಾಗೃಹಗಳ ನಿರ್ವಹಣೆ ಹಾಗೂ ಬಂದಿಗಳ ಹಕ್ಕು ಮತ್ತು ಕರ್ತವ್ಯಗಳನ್ನು ದೃಢಪಡಿಸಿದೆ. "The Transfer of Prisoners Act- 1950", ಹಾಗೂ "The Repatriation of Prisoners Act-2003" ಇವು ಕಾರಾಗೃಹಗಳನ್ನು ನಿರ್ವಹಣೆಗೊಳಿಸುವ ಕಾನೂನುಗಳಾಗಿವೆ.

ಭಾರತದ ಸಂವಿಧಾನ, ಭಾರತ ದಂಡ ಸಂಹಿತೆ– 1860 ಮತ್ತು ದಂಡ ಪ್ರಕ್ರಿಯಾ ಸಂಹಿತೆ– 1973 ಇವುಗಳ ಆಧಾರದ ಮೇಲೆ ಕಾರಾಗೃಹದಲ್ಲಿರುವ ಬಂದಿಗಳನ್ನು ಪ್ರಾಥಮಿಕವಾಗಿ ನಿರ್ವಹಣೆ ಮಾಡಲಾಗುತ್ತದೆ. ಇದರ ಜೊತೆಗೆ ಇನ್ನೂ ಇತರೆ ಕೇಂದ್ರ ಮತ್ತು ರಾಜ್ಯಗಳ ಅಧಿನಿಯಮಗಳಿದ್ದು, ಇವುಗಳು ಕೂಡ ಕಾರಾಗೃಹಗಳನ್ನು ನಿರ್ವಹಣೆ ಮಾಡುವ ಅಧಿಕಾರಗಳನ್ನು ಹೊಂದಿದೆ.

**5. ಕಾರಾಗೃಹಗಳ ಕಾರ್ಯನಿರ್ವಹಣೆಯನ್ನು ಯಾರು ಮಾಡುವರು? ಕಾರಾಗೃಹಗಳ ಸಾಂಸ್ಥಿಕ ರಚನೆ ಹೇಗೆ?**

ಕಾರಾಗೃಹಗಳ ದಿನವಿಡೀ ಆಡಳಿತಾತ್ಮಕ ನಿರ್ವಹಣೆ, ಭದ್ರತೆ ಹಾಗೂ ಇತರೆ ಎಲ್ಲಾ ಕರ್ತವ್ಯಗಳನ್ನು ಕಾರಾಗೃಹ ಸಿಬ್ಬಂದಿವರ್ಗದವರು ನೆರವೇರಿಸುವರು. ಸಾಧಾರಣವಾಗಿ ಡೈರೆಕ್ಟರ್ ಜನರಲ್ (ಡಿ.ಜಿ.), ಹೆಚ್ಚುವರಿ ಡೈರೆಕ್ಟರ್ ಜನರಲ್ (ಎ.ಡಿ.ಜಿ.) ಅಥವಾ ಇನ್ಸ್‌ಪೆಕ್ಟರ್ ಜನರಲ್ (ಐ.ಜಿ.) ಕಾರಾಗೃಹಗಳ ಮುಖ್ಯಸ್ಥರಾಗಿರುತ್ತಾರೆ. ಅವರು ಆಯಾ ರಾಜ್ಯದ ಗೃಹ ಇಲಾಖೆಯ ನಿಯಂತ್ರಣದಲ್ಲಿ ಕಾರ್ಯನಿರ್ವಹಣೆ ಮಾಡುತ್ತಾರೆ. ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಾರಾಗೃಹಗಳು ಕೇಂದ್ರ ಸರ್ಕಾರದ ಗೃಹ ಇಲಾಖೆಯಿಂದ ನಿರ್ವಹಿಸಲ್ಪಡುತ್ತದೆ. ಡಿ.ಜಿ., ಎ.ಡಿ.ಜಿ. ಹಾಗೂ ಐ.ಜಿ. ಇವರ ಕೆಳಗೆ ಉಪ–ಇನ್ಸ್‌ಪೆಕ್ಟರ್ ಜನರಲ್ (ಡಿ.ಐ.ಜಿ.) ಇರುವರು. ಇವರು ಸಹಾಯಕ ಇನ್ಸ್‌ಪೆಕ್ಟರ್ ಜನರಲ್ (ಎ.ಐ.ಜಿ.) ಮೇಲಿನ ಅಧಿಕಾರಿ, ಇವರ ಕೆಳಗೆ ಆಯಾ ಕಾರಾಗೃಹಗಳ ಅಧೀಕ್ಷಕರು ಇರುವರು. ಸಾಧಾರಣವಾಗಿ ಅಧೀಕ್ಷಕರುಗಳು ಆಯಾ ಕಾರಾಗೃಹದ ಮುಖ್ಯಸ್ಥರಾಗಿರುತ್ತಾರೆ ಹಾಗೂ ಆಯಾ ಕಾರಾಗೃಹದ ಆಡಳಿತಾತ್ಮಕ ಕಾರ್ಯಗಳು ಮತ್ತು ಬಂದಿಗಳ ಕಲ್ಯಾಣ ಕಾರ್ಯಕ್ರಮಗಳನ್ನು ನೋಡಿಕೊಳ್ಳುತ್ತಾರೆ. ಇವರ ಅಧೀನದಲ್ಲಿ ಇತರೆ ಕಾರ್ಯನಿರ್ವಾಹಕ ಅಧಿಕಾರಿಗಳು ಅಂದರೆ, ಸಹಾಯಕ ಅಧೀಕ್ಷಕರು, ಜೈಲರ್, ಉಪ ಜೈಲರ್ ಮತ್ತು ಸಹಾಯಕ ಜೈಲರ್ ಇದಾದ ನಂತರ ಕ್ರಮಾನುಗತವಾಗಿ ಚೀಫ್ ವಾರ್ಡರ್, ಹೆಡ್ ವಾರ್ಡರ್ ಹಾಗೂ ವಾರ್ಡರ್/ಗಾರ್ಡ್ ಇರುವರು. ಕೆಳಹಂತದಲ್ಲಿ ವಾರ್ಡರ್/ಗಾರ್ಡ್ ಇವರು ಕಾರಾಗೃಹದ ಶಿಸ್ತುಕ್ರಮ, ಬಂದಿಗಳ ಎಣಿಕೆ ಹಾಗೂ ನಿಷೇಧಿತ ವಸ್ತುಗಳನ್ನು


PRISON
WANTED
POLICE
VAN

ಪತ್ತೆಹಚ್ಚುವ ಕಾರ್ಯ, ಕಾರಾಗೃಹ ಹಾಗೂ ಬಂದಿಗಳ ನೈರ್ಮಲ್ಯ ಮತ್ತು ಬಂದಿಗಳ ಕಲ್ಯಾಣ ಕಾರ್ಯಕ್ರಮಗಳು, ಊಟ, ಕೆಲಸ ಮತ್ತು ವಸತಿಯ ವೀಕ್ಷಣೆಯನ್ನು ಮಾಡುವರು. ಇದರೊಂದಿಗೆ ಕಾರ್ಯನಿರ್ವಾಹಕ ಸಿಬ್ಬಂದಿಗಳ ಸಹಾಯಕ್ಕೆ ಕಲ್ಯಾಣ (welfare) ಅಧಿಕಾರಿಗಳು, ಪರೀಕ್ಷಾರ್ಥ (Probation) ಅಧಿಕಾರಿಗಳು, ವೃತ್ತಿಪರ ತರಬೇತುದಾರರು, ಕಾರ್ಖಾನೆ ಮೇಲ್ವಿಚಾರಕರು, ಶಿಕ್ಷಕರು, ಸಾಮಾಜಿಕ ಕಾರ್ಯಕರ್ತರು, ಮನಃಶಾಸ್ತ್ರಜ್ಞರು ಮತ್ತು ವೈದ್ಯಕೀಯ ಅಧಿಕಾರಿಗಳು ಮತ್ತು ಪ್ಯಾರಾ-ಮೆಡಿಕಲ್ ಸಿಬ್ಬಂದಿಗಳು ಹಾಗೂ ಆಡಳಿತಾತ್ಮಕ ಸಿಬ್ಬಂದಿಗಳು ಹಾಗೂ ಇತರ ಸಿಬ್ಬಂದಿವರ್ಗದವರು ಇರುತ್ತಾರೆ.

**6. ಭಾರತೀಯ ಕಾರಾಗೃಹಗಳ ಸೇವೆ ಇದೆಯೇ?**

ಇಲ್ಲ, ಭಾರತೀಯ ಪೊಲೀಸ್ ಸೇವೆ ಹಾಗೂ ಭಾರತೀಯ ಆಡಳಿತಾತ್ಮಕ ಸೇವೆ ಅಸ್ತಿತ್ವದಲ್ಲಿ ಇರುವ ಹಾಗೆ ಭಾರತೀಯ ಕಾರಾಗೃಹಗಳ ಸೇವೆ ಅಸ್ತಿತ್ವದಲ್ಲಿ ಇಲ್ಲ. ಕಾರಾಗೃಹ ಇಲಾಖೆಗೆ ಮುಖ್ಯಸ್ಥರಾಗಿ ಇಂಡಿಯನ್ ಪೊಲೀಸ್ ಸೇವೆಯಿಂದ (ಡಿ.ಜಿ, ಎ.ಡಿ.ಜಿ., ಮತ್ತು ಐ.ಜಿ) ಪಡೆದುಕೊಳ್ಳಲಾಗಿದೆ. ಅಧೀಕ್ಷಕರು, ಸಹಾಯಕ ಅಧೀಕ್ಷಕರು ಮತ್ತು ವಾರ್ಡರ್‌ಗಳನ್ನು ಆಯಾ ರಾಜ್ಯಗಳ ಕಾರಾಗೃಹ ಇಲಾಖೆಯಿಂದಲೇ ನೇಮಕ ಮಾಡಿಕೊಳ್ಳಲಾಗುತ್ತದೆ.

**7. ಯಾವ ಯಾವ ತರಹದ ಕಾರಾಗೃಹಗಳಿವೆ?**

ಕಾರಾಗೃಹಗಳು ಬಂದಿಗಳನ್ನು ಹೊಂದುವ ಸಾಮರ್ಥ್ಯ, ಭದ್ರತೆ, ಮೂಲಸೌಕರ್ಯ, ಸಿಬ್ಬಂದಿವರ್ಗದವರು ಹಾಗೂ ವಸತಿ ಸೌಕರ್ಯಗಳನ್ನು ಗಮನಿಸಿ ಏಳು ವಿಭಾಗಗಳಾಗಿ ವಿಂಗಡಿಸಲಾಗಿದೆ.

**ಕೇಂದ್ರ ಕಾರಾಗೃಹ:** ಇಲ್ಲಿ ಶಿಕ್ಷಿತ/ದಂಡಾದೇಶ ಹೊಂದಿದ ಅಪರಾಧಿಗಳು ಮತ್ತು ಕಾನೂನು ಪ್ರಕ್ರಿಯೆ ಮುಗಿಯದ ಅಪರಾಧಿಗಳನ್ನು ಇರಿಸುತ್ತಾರೆ.

**ಜಿಲ್ಲಾ ಕಾರಾಗೃಹ:** ಇಲ್ಲಿ ಪ್ರಾಥಮಿಕವಾಗಿ ವಿಚಾರಣಾಧೀನ ಬಂದಿಗಳನ್ನು ಇರಿಸುತ್ತಾರೆ. ಇವರು ನ್ಯಾಯಾಲಯದಿಂದ ದಂಡಾದೇಶ ಅಥವಾ ಶಿಕ್ಷೆ ವಿಧಿಸಲ್ಪಟ್ಟ ನಂತರ ಇವರನ್ನು ಕೇಂದ್ರ ಕಾರಾಗೃಹಕ್ಕೆ ವರ್ಗಾಯಿಸಲಾಗುವುದು.

**ಉಪ ಕಾರಾಗೃಹ:** ಇಲ್ಲಿ ಕಾನೂನು ಪ್ರಕ್ರಿಯೆ ಮುಗಿಯದ ಆರೋಪಿಗಳನ್ನು ಇರಿಸುತ್ತಾರೆ.

**ಮಹಿಳಾ ಕಾರಾಗೃಹ:** ಇಲ್ಲಿ ಮಹಿಳಾ ವಿಚಾರಣಾಧೀನ ಬಂದಿಗಳನ್ನು ಮಾತ್ರ ಇರಿಸುತ್ತಾರೆ.

**ಅರೆ ಬಯಲು ಮತ್ತು ಬಯಲು ಬಂದೀಖಾನೆ:** ಇದು ಸಜಾ ಬಂದಿಗಳಿಗಾಗಿಯೇ ಇರುವ ಬಂದೀಖಾನೆಯಾಗಿದೆ. ಇಲ್ಲಿ ಬಂದಿಗಳು ಕೆಲಸ ಮಾಡಿ ಜೀವನ ಸಾಗಿಸಬಹುದು.

**ಬೋರ್ಸ್ಟಲ್ ಶಾಲೆ:** ಇಲ್ಲಿ 18 ರಿಂದ 21 ವಯೋಮಾನದ ಯುವ ಬಂದಿಗಳನ್ನು ಇರಿಸುತ್ತಾರೆ.

**ವಿಶೇಷ ಕಾರಾಗೃಹಗಳು:** ರಾಜ್ಯಗಳು ಕೆಲವೊಂದು ಕಾರಾಗೃಹಗಳನ್ನು ವಿಶೇಷ ಕಾರಾಗೃಹಗಳು ಎಂದು ಘೋಷಿಸುತ್ತವೆ. ಆದರೆ ಈ ಕಾರಾಗೃಹಗಳ ಕುರಿತು ಕ್ರಮಬದ್ಧವಾಗಿ ವಿವರಿಸುವಂತಹ ಯಾವ ಮಾನದಂಡವೂ ಎಲ್ಲೂ ಅಧಿಕೃತವಾಗಿ ದಾಖಲಾಗಿಲ್ಲ.

**8. ಯಾವ ಯಾವ ತರಹದ ಬಂದಿಗಳಿದ್ದಾರೆ?**

ಬಂದಿಗಳನ್ನು ಅವರವರ ಮೇಲಿರುವ ಆರೋಪದ ಕಾನೂನಾತ್ಮಕ ಪ್ರಕರಣವನ್ನಾಧರಿಸಿ ವಿಂಗಡಿಸಲಾಗುವುದು.

**ಸಜಾ ಬಂದಿ:** ಕಾನೂನಾತ್ಮಕ ಪ್ರಕ್ರಿಯೆಯಲ್ಲಿ ದೋಷ ಸಾಬೀತಾದ ನಂತರ ಕಾರಾಗೃಹ ಶಿಕ್ಷೆಗೆ ಒಳಪಡಿಸಿದವರು.

**ವಿಚಾರಣಾ ಬಂದಿ:** ಕಾನೂನಾತ್ಮಕ ಪ್ರಕ್ರಿಯೆ ಮುಗಿಯದೇ ಕಾರಾಗೃಹದಲ್ಲಿ ಇರಿಸಲಾಗಿರುವ ಬಂದಿಗಳು.

**ಸ್ಥಾನಬದ್ಧ ಬಂದಿ:** ನಿರ್ಬಂಧನೆಗೆ ಒಳಪಟ್ಟು ಕಾನೂನಿನಡಿ ಕಾರಾಗೃಹದಲ್ಲಿ ಇರಿಸಲಾಗಿರುವ ಬಂದಿಗಳು.

**ಬಿಡುಗಡೆಗಾಗಿ ಕಾಯುತ್ತಿರುವ ಬಂದಿ:** ಕಾರಾಗೃಹ ಶಿಕ್ಷೆ ಮುಗಿಸಿದ್ದರೂ ಕಾರಣಾಂತರಗಳಿಂದ ಬಿಡುಗಡೆ ಆಗದೇ ಇರುವ ಬಂದಿಗಳು. ಈ ಪ್ರಕರಣದಲ್ಲಿ ಬಂದಿಗಳು ಸಾಧಾರಣವಾಗಿ ವಿದೇಶಿ ಬಂದಿಗಳಾಗಿರುತ್ತಾರೆ.

**ಸಿವಿಲ್ ಬಂದಿ:** ಮೇಲೆ ಹೇಳಿರುವ ಯಾವುದೇ ತರಹದ ಬಂದಿಯಲ್ಲದೇ ಕಾನೂನು ಪ್ರಕರಣದಲ್ಲಿ ಜುಲ್ಮಾನೆ ಕಟ್ಟಲು ವಿಫಲರಾಗಿರುವ ಬಂದಿಗಳು ಅಥವಾ ನಾಗರೀಕ ಆರ್ಥಿಕ ಹೊಣೆಗಾರಿಕೆಯಿಂದ ಕಾರಾಗೃಹಗಳಲ್ಲೇ ಇರಬೇಕಾದವರು.

**9. ಬೇರೆ ಬೇರೆ ತರಹದ ಬಂದಿಗಳಿಗೆ ವ್ಯತ್ಯಾಸದ ನಿಯಮಗಳು ಉಂಟೇ?**

ಹೌದು, ಕಾರಾಗೃಹಗಳಲ್ಲಿನ ವಿವಿಧ ರೀತಿಯ ಬಂದಿಗಳಿಗೆ, ವಿವಿಧ ಪ್ರಕಾರದ ನಿಯಮಗಳಿವೆ. ಸಾಮಾನ್ಯವಾಗಿ ಸಜಾ ಬಂದಿಗಳು, ವಿಚಾರಣಾ ಬಂದಿಗಳು, ಸ್ಥಾನಬದ್ಧ ಬಂದಿಗಳು ಮತ್ತು ಸಿವಿಲ್ ಬಂದಿಗಳಿಗೆ ಪ್ರತ್ಯೇಕವಾದ ನಿಯಮಾಳಿಗಳಿರುವುದನ್ನು ಕಾಣಬಹುದು. ಸಿವಿಲ್ ಬಂದಿಗಳಿಗೆ ನಿಯಮಗಳು ಸ್ವಲ್ಪ ಸಡಿಲವಾಗಿರುತ್ತದೆ.



## ದಾಖಲಾತಿ ವಿಧಾನಗಳು

**10. ನ್ಯಾಯಾಲಯವು ಬಂದಿಗಳನ್ನು ಕಾರಾಗೃಹಕ್ಕೆ ಕಳುಹಿಸಿದ ನಂತರ ಏನಾಗುತ್ತದೆ?**

ಕಾರಾಗೃಹಕ್ಕೆ ಪ್ರವೇಶಿಸಿದ ನಂತರ ಕೆಲವೊಂದು ಅವಶ್ಯಕ ಪ್ರಕ್ರಿಯೆಗಳು ನಿಯಮಾನುಸಾರ ನಡೆಯುತ್ತದೆ. ಕಾರಾಗೃಹದ ಮುಖ್ಯ ದ್ವಾರದಲ್ಲಿ ನ್ಯಾಯಾಲಯದ ಅಧಿಪತ್ರವನ್ನು ಪರಿಶೀಲಿಸುವುದು ಮಾತ್ರವಲ್ಲದೆ ಬಂದಿಯ ವೈಯಕ್ತಿಕ ಗುರುತುಗಳನ್ನು ಪರೀಕ್ಷಿಸಿ ಖಚಿತಪಡಿಸಿಕೊಳ್ಳಲಾಗುತ್ತದೆ. ನಂತರ ಬಂದಿಯ ಬೇರೆ-ಬೇರೆ ಕಾರ್ಯವಿಧಾನಗಳು ಎಂದರೆ- ದಾಖಲಾತಿ, ದೈಹಿಕ ಪರೀಕ್ಷೆ, ವೈದ್ಯಕೀಯ ಪರೀಕ್ಷೆ ಮತ್ತು ಮೂಲಭೂತ ಸವಲತ್ತುಗಳನ್ನು ಪಡೆಯುವ ಪ್ರಕ್ರಿಯೆಗಳಿಗೆ ಒಳಪಡಿಸಲಾಗುತ್ತದೆ.

**11. ದಾಖಲಾತಿ ಸಮಯದಲ್ಲಿ ನಡೆಯುವ ಪ್ರಕ್ರಿಯೆಗಳೇನು?**

ಕಾರಾಗೃಹಕ್ಕೆ ಕಳುಹಿಸಲಾಗಿರುವ ಪ್ರತಿಯೊಬ್ಬ ಬಂದಿಯನ್ನು ಔಪಚಾರಿಕವಾಗಿ ದಾಖಲಾತಿ ಮಾಡಿಕೊಳ್ಳಲಾಗುತ್ತದೆ. ದಾಖಲಾತಿ ಕಾರ್ಯವಿಧಾನವು ಬೇರೆ-ಬೇರೆ ರಾಜ್ಯಗಳಲ್ಲಿ ವ್ಯತ್ಯಾಸವಾಗಿರುತ್ತದೆ. ಆದರೆ ಕಾರಾಗೃಹ ಆಡಳಿತಾತ್ಮಕ ರೀತಿಯ ಪ್ರಕಾರ ಬಂದಿಯ ಛಾಯಾಚಿತ್ರ ತೆಗೆದು, ಅವನ/ಅವಳ ಬೆರಳಚ್ಚು ಗುರುತು ಪಡೆದುಕೊಳ್ಳಲಾಗುವುದು. ಈ ಎಲ್ಲಾ ಮಾಹಿತಿ ಕಾರಾಗೃಹದ ಪ್ರವೇಶ ಪುಸ್ತಕದಲ್ಲಿ ದಾಖಲಾಗುವುದು. ಬಂದಿಗಳಿಗೆ ಅಗತ್ಯವಿದ್ದಲ್ಲಿ ಈ ಮಾಹಿತಿಯ ಒಂದು ಪ್ರತಿ ಅಥವಾ ಮಾಹಿತಿ ಪಡೆಯುವುದಕ್ಕೆ ಇ-ಸೌಲಭ್ಯದ ಮೂಲಕ (ಲಭ್ಯವಿದ್ದಲ್ಲಿ) ಮಾಹಿತಿ ನೀಡಲಾಗುವುದು. ಈ ಮಾಹಿತಿ ಪತ್ರದಲ್ಲಿ ಬಂದಿಯ ಎಲ್ಲಾ ವಿವರಗಳು ಅಂದರೆ, ಕಾನೂನು ಪ್ರಕ್ರಿಯೆಯ ಬಗ್ಗೆ, ಪ್ರಕರಣದ ಸಂಖ್ಯೆ, ಸಂಬಂಧಪಡುವ ನ್ಯಾಯಾಲಯ, ಬಂದಿಯ ವಿವರ, ವಿಳಾಸ, ಮುಂದಿನ ಕಾನೂನು ಪ್ರಕ್ರಿಯೆಯ ದಿನಾಂಕ ಮುಂತಾದ ವಿವರಗಳು ಲಭ್ಯವಿರುವುದು. ಈ ಮಾಹಿತಿ ಪಟ್ಟಿಯಲ್ಲಿ ಬಂದಿಯು ಕಾರಾಗೃಹದಲ್ಲಿ ಬಂದಿತನಾಗಿ ಬಿಡುಗಡೆಯಾಗುವ ದಿನದ ವರೆಗೂ ಆವನಿಗೆ/ಅವಳಿಗೆ ಸಂಬಂಧಿಸಿದ ಅವಶ್ಯಕ ಮಾಹಿತಿಗಳನ್ನು ನಿರ್ವಹಣೆ ಮಾಡುವುದರ ಮೂಲಕ ಸಂಗ್ರಹಿಸಿಡಲಾಗುವುದು. ಕೆಲವೊಂದು ರಾಜ್ಯಗಳಲ್ಲಿ ಬಂದಿಗಳಿಗೆ ದಾಖಲಾತಿ ಪಟ್ಟಿಯ ನಕಲು ಪ್ರತಿಯನ್ನು ತನ್ನ ಬಳಿಯಲ್ಲಿ ಇಟ್ಟುಕೊಳ್ಳಲು ಅನುಮತಿಯನ್ನು ಸಹ ನೀಡಲಾಗುತ್ತದೆ.

**12. ದೈಹಿಕ ತಪಾಸಣೆ ಎಂದರೇನು? ಇದನ್ನು ಯಾರು ನಡೆಸುತ್ತಾರೆ?**

ದಾಖಲಾತಿ ಪ್ರಕ್ರಿಯೆಯ ನಂತರ ಬಂದಿಯ ಹತ್ತಿರ ಇರಬಹುದಾದಂತಹ ನಿಷೇಧಿತ ವಸ್ತುಗಳ ತಪಾಸಣೆಗಾಗಿ ದೈಹಿಕ ತಪಾಸಣೆಯನ್ನು ಮಾಡಲಾಗುತ್ತದೆ. ಈ ಪ್ರಕ್ರಿಯೆಯನ್ನು ಬಂದಿಯ ವೈಯಕ್ತಿಕ ಘನತೆ, ಗೌರವಕ್ಕೆ ಧಕ್ಕೆ ಬರದಂತೆ ನಡೆಸಲಾಗುವುದು. ಮಹಿಳಾ

ಬಂದಿಯನ್ನು ಮಹಿಳಾ ಸಿಬ್ಬಂದಿಯೇ ತಪಾಸಣೆ ಮಾಡುವರು. ಈ ಪ್ರಕ್ರಿಯೆಯು ಪ್ರತ್ಯೇಕ ಕೊಠಡಿಯಲ್ಲಿ ಜರುಗುತ್ತದೆ. ನಿಷೇಧಿತ ಪದಾರ್ಥಗಳ ಪಟ್ಟಿಗಳ ವಿವರ ರಾಜ್ಯ-ರಾಜ್ಯಗಳಿಗೆ ಸಾಮಾನ್ಯವಾಗಿ ವ್ಯತ್ಯಾಸವಾಗುವುದನ್ನು ಕಾಣಬಹುದು. ಈ ಪ್ರಕ್ರಿಯೆಯು ಸಾಧಾರಣವಾಗಿ ಉಪ-ಅಧೀಕ್ಷಕರು ಅಥವಾ ಸಹಾಯಕ ಅಧೀಕ್ಷಕರ ಮೇಲ್ವಿಚಾರಣೆಯಲ್ಲಿ ನಡೆಯುತ್ತದೆ. ಬಂದಿಯ ಹತ್ತಿರವಿರುವ ಎಲ್ಲಾ ಆಭರಣಗಳು ಮತ್ತು ಹಣದ ವಿವರಗಳನ್ನು ಕಾರಾಗೃಹದ ನೋಂದಣಿ ಪುಸ್ತಕದಲ್ಲಿ ದಾಖಲು ಮಾಡಿ ಬಂದಿಯ ಸಹಿ ಅಥವಾ ಬೆರಳಚ್ಚು ಪಡೆದು ಅವುಗಳನ್ನು ಸುರಕ್ಷಿತವಾಗಿಟ್ಟು ಬಂದಿಯ ಬಿಡುಗಡೆಯ ದಿನ ಅದನ್ನು ಹಿಂತಿರುಗಿಸುತ್ತಾರೆ.

**13. ವೈದ್ಯಕೀಯ ಪರೀಕ್ಷೆ ಎಂದರೇನು? ಇದು ಕಡ್ಡಾಯವೇ?**

ಬಂದಿಯು ದಾಖಲಾದ 24 ಗಂಟೆಗಳೊಳಗಾಗಿ ವೈದ್ಯಾಧಿಕಾರಿಗಳಿಂದ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲೇಬೇಕು. ಕಾರಾಗೃಹದ ವೈದ್ಯಾಧಿಕಾರಿಯು ಒಂದು ವೈದ್ಯಕೀಯ ಪರೀಕ್ಷಾ ಪಟ್ಟಿಯನ್ನು ತಯಾರಿಸಿ ಬಂದಿಯ ವಯಸ್ಸು, ತೂಕ, ಕಾಯಿಲೆಯ ವೈಯಕ್ತಿಕ ಇತಿಹಾಸದ ಮಾಹಿತಿ ಮತ್ತು ಮಾದಕ ವಸ್ತುಗಳ ಉಪಯೋಗದ ಮಾಹಿತಿ, ಅವರ ಸಾಮಾನ್ಯ ಆರೋಗ್ಯದ ಮಾಹಿತಿ, ಲಸಿಕೆಯ ಮಾಹಿತಿ ಇತ್ಯಾದಿಗಳನ್ನು ದಾಖಲು ಮಾಡಿಕೊಳ್ಳುತ್ತಾರೆ. ವೈದ್ಯಾಧಿಕಾರಿಯು ಬಂದಿಯ ಮೈಮೇಲೆ ಇರುವ ಗಾಯ ಅಥವಾ ಗಾಯದ ಗುರುತು (ಗುರುತು ತಾಜಾ ಆಗಿದ್ದರೆ ಅದು ಬಹುಶಃ ಪೊಲೀಸರ ವಶದಲ್ಲಿ ಆಗಿರಬಹುದು), ವೈದ್ಯಕೀಯ ಪರೀಕ್ಷೆಯ ಮಾಹಿತಿಯಲ್ಲಿ ಮಹಿಳಾ ಬಂದಿಯು ಗರ್ಭಿಣಿಯಾಗಿರುವ ಬಗ್ಗೆ ಅಥವಾ ಸಾಂಕ್ರಾಮಿಕ ರೋಗಗಳು ಅಥವಾ ಕುಷ್ಠರೋಗ ಅಥವಾ ಎಚ್.ಐ.ವಿ./ಏಡ್ಸ್ ನಿಂದ ನರಳುತ್ತಿರುವ ಬಗೆಗಿನ ಮಾಹಿತಿಯನ್ನು ಸಂಗ್ರಹಿಸಲಾಗುವುದು. ಈ ವೈದ್ಯಕೀಯ ಪರೀಕ್ಷೆಗಳಿಂದ ಬಂದಿಗೆ ಮುಂದಿನ ದಿನಗಳಲ್ಲಿ ಯಾವ ಸ್ವರೂಪದ ಕೆಲಸದ ಹಂಚಿಕೆ ಮಾಡಬಹುದು ಎಂಬ ಮಾಹಿತಿ ದೊರೆಯುವುದು.

**14. ಬಂದಿಗಳಿಗೆ ಒದಗಿಸಲಾಗುವ ಮೂಲಭೂತ ಸೌಲಭ್ಯಗಳೇನು?**

ಬಂದಿಗಳಿಗೆ ಒದಗಿಸಲಾಗುವ ಮೂಲಭೂತ ಸೌಕರ್ಯಗಳು ಕಾರಾಗೃಹ ಆಡಳಿತಾತ್ಮಕ ಅಧಿಕಾರಿಗಳ ಮೂಲಕ ದೊರೆಯುತ್ತದೆ. ಹಾಗೆಯೇ ಬಂದಿಗಳು ತಮಗೆ ಬೇಕಾದ ಕೆಲವೊಂದು ವಸ್ತುಗಳನ್ನು ಕಾರಾಗೃಹದ

ಕ್ಯಾಂಟೀನ್‌ನಿಂದ ತೆಗೆದುಕೊಳ್ಳುತ್ತಾರೆ. ಆದರೆ ಈ ಸೌಕರ್ಯಗಳು ಬೇರೆ ಬೇರೆ ರಾಜ್ಯಗಳಲ್ಲಿ ಭಿನ್ನವಾಗಿರುತ್ತದೆ. ಆದ್ದರಿಂದ ಪೂರ್ಣ ವಸ್ತುಗಳ ಮಾಹಿತಿಯ ಅವಶ್ಯವಿದ್ದಲ್ಲಿ ಆಯಾ ರಾಜ್ಯಗಳ ಕಾರಾಗೃಹದ ಕೈಪಿಡಿಯನ್ನು ಗಮನಿಸಬೇಕಾಗುತ್ತದೆ. ಸಾಮಾನ್ಯವಾಗಿ ಕಾರಾಗೃಹಗಳಲ್ಲಿ ಎಲೆಕ್ಟ್ರಾನಿಕ್ ಉಪಕರಣಗಳಾದ ಮೊಬೈಲ್‌ಗಳು, ರೇಡಿಯೋಗಳು ಅಥವಾ ಮ್ಯೂಸಿಕ್ ಪ್ಲೇಯರ್‌ಗಳನ್ನು ಅನುಮತಿಸುವುದಿಲ್ಲ. ಹಾಗೆಯೇ ಸಿಗರೇಟು, ಬೀಡಿ, ತಂಬಾಕು ಅಥವಾ ಪಾನ್ ಮಸಾಲ ಇತ್ಯಾದಿಗಳನ್ನು ಅನುಮತಿಸುವುದಿಲ್ಲ. ಸಾಮಾನ್ಯವಾಗಿ ಅನುಮತಿ ಇರುವುದು ಮೂಲಭೂತ ಅವಶ್ಯಕ ವಸ್ತುಗಳಾದ- ಹಲ್ಲುಜ್ಜುವ ಬ್ರಷ್, ಹಲ್ಲು ಪುಡಿ ಅಥವಾ ಪೇಸ್ಟ್, ಸೋಪು, ಶಾಂಪೂ, ಶೌಚಾಲಯ ಪೇಪರ್, ಸ್ಯಾನಿಟರಿ ನ್ಯಾಪ್‌ಕಿನ್ ಹಾಗೂ ವೈಯಕ್ತಿಕ ವಸ್ತುಗಳಾದ ಒಳ ಉಡುಪು, ಟವಲ್, ಶೂ, ಚಪ್ಪಲಿ, ಪುಸ್ತಕಗಳು, ಪೇಪರ್, ನೋಟ್ ಪುಸ್ತಕ ಮತ್ತು ಪೆನ್ಸಿಲ್‌ಗಳು. ಕಾನೂನು ಪ್ರಕ್ರಿಯೆ ಮುಗಿಯದಿರುವ ಬಂದಿಗಳಿಗೆ ಇವಲ್ಲದೇ ಅವರವರ ಸ್ವಂತ ಉಡುಪುಗಳನ್ನು ಹಾಕಿಕೊಳ್ಳಲು ಅನುಮತಿಸಲಾಗಿದೆ. ಮಾತ್ರವಲ್ಲದೆ ಬಂದಿಗಳು ಸೀಲ್/ಪ್ಯಾಕ್ ಆಗಿರುವ ಔಷಧಿಗಳನ್ನು ಸ್ವಂತ ಉಪಯೋಗಕ್ಕಾಗಿ ವೈದ್ಯಾಧಿಕಾರಿಗಳ ಅನುಮತಿಯನ್ನು ಹೊಂದಿದ ನಂತರವೇ ಪಡೆದುಕೊಳ್ಳಬಹುದು.

**15. ಬಂದಿಗಳನ್ನು ವಾರ್ಡ್/ಬ್ಯಾರಕ್‌ಗಳಿಗೆ (ಕೊಠಡಿ) ನಿಯೋಜಿತಗೊಳಿಸುವ ಪ್ರಕ್ರಿಯೆ ಹೇಗೆ?**

ಕೊಠಡಿ ಹಂಚಿಕೆ ಮಾಡುವ ಪ್ರಕ್ರಿಯೆಯು ಪ್ರತಿಯೊಂದು ರಾಜ್ಯಗಳಿಗೆ ಮಾತ್ರವಲ್ಲದೆ, ರಾಜ್ಯದಲ್ಲಿನ ಪ್ರತಿಯೊಂದು ಕಾರಾಗೃಹಗಳಿಗೂ ಭಿನ್ನವಾಗಿರುತ್ತದೆ. ಬಂದಿಗಳ ವಯಸ್ಸು, ದೈಹಿಕ ಸ್ಥಿತಿ, ಮಾನಸಿಕ ಸ್ಥಿತಿ, ಅಪರಾಧದ ಸ್ವರೂಪ, ಕಾನೂನು ಪ್ರಕ್ರಿಯೆಯ ಸ್ಥಿತಿಗತಿಗಳು, ಕಾನೂನು ಪ್ರಕ್ರಿಯೆ ನಡೆಯುತ್ತಿರುವ ಕೋರ್ಟ್, ಅಪರಾಧದ ದಾಖಲೆ ಹಾಗೂ ಶಿಕ್ಷೆಯ ಕಾಲಾವಧಿ ಇತ್ಯಾದಿಗಳನ್ನು ಅನುಸರಿಸಬೇಕಾಗುತ್ತದೆ. ಸಾಧಾರಣವಾಗಿ ಶಿಕ್ಷೆಗೊಳಗಾದ ಬಂದಿಗಳು ಮತ್ತು ಕಾನೂನು ಪ್ರಕ್ರಿಯೆ ಮುಗಿಯದ ಬಂದಿಗಳನ್ನು ಪ್ರತ್ಯೇಕಿಸಲಾಗುತ್ತದೆ. ಹಾಗೆಯೇ ಪುರುಷ ಮತ್ತು ಮಹಿಳಾ ಬಂದಿಗಳನ್ನು ಕೂಡ ಪ್ರತ್ಯೇಕಿಸಲಾಗುತ್ತದೆ. ರೂಢಿಗತ ಬಂದಿಗಳು ಹಾಗೂ ಪ್ರಥಮ ಬಾರಿ ಅಪರಾಧಿಯಾದವರನ್ನೂ ಕೂಡ ಪ್ರತ್ಯೇಕವಾಗಿ ಇರಿಸಲಾಗುತ್ತದೆ. 20 ರಿಂದ 50 ಬಂದಿಗಳನ್ನು ಒಂದು ವಾರ್ಡ್/ಬ್ಯಾರಕ್‌ನಲ್ಲಿ ಹಿಡಿಯುವಂತೆ, ಲಭ್ಯವಿರುವ ಮೂಲಭೂತ ಸೌಕರ್ಯಗಳನ್ನು ಅನುಸರಿಸಿ ಸಾಮಾನ್ಯವಾಗಿ ಇರಿಸಲಾಗುತ್ತದೆ. ಈ ವ್ಯವಸ್ಥೆಯು ಕಾರಾಗೃಹಗಳು ಹಾಗೂ ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತದೆ.



## ಕಾರಾಗೃಹದಲ್ಲಿನ ಜೀವನ

**16. ಬಂದಿಗಳು ಕಾರಾಗೃಹದ ಕೊಠಡಿಗಳಲ್ಲಿ ಇಡೀ ದಿವಸ ಇರುವುದು ಕಡ್ಡಾಯವೇ?**

ಇಲ್ಲ, ಪ್ರತಿಯೊಂದು ಕಾರಾಗೃಹಗಳಲ್ಲೂ ಬಂದಿಗಳನ್ನು ಕೊಠಡಿಗಳಿಂದ ಹೊರ ಬಿಡುವ ಮತ್ತು ಕೊಠಡಿಯಲ್ಲಿ ಬಂಧನ ಮಾಡುವ ನಿರ್ದಿಷ್ಟ ಸಮಯವಿರುತ್ತದೆ. ಸಾಮಾನ್ಯವಾಗಿ ಸೂರ್ಯಾಸ್ತಮಾನದಿಂದ ಸೂರ್ಯೋದಯವಾಗುವವರೆಗೂ ಬಂದಿಗಳನ್ನು ಬಂದೋಬಸ್ತಿನಲ್ಲಿ ಕೊಠಡಿಗಳಲ್ಲಿ ಬಂಧಿಸಿ ಇಡುವುದರಿಂದ ಹೊರ ಭಾಗದಲ್ಲಿ ಓಡಾಡುವುದು ನಿಷಿದ್ಧವಾಗಿರುತ್ತದೆ. ಹಗಲಿನ ನಿಗದಿತ ಸಮಯದಲ್ಲಿ ಬಂದಿಗಳು




ಕಾರಾಗೃಹದ ನಿರ್ದಿಷ್ಟ ಭಾಗದಲ್ಲಿ ಓಡಾಡಬಹುದು. ಸ್ನಾನ ಮಾಡಲು ಹಾಗೂ ಮನರಂಜನಾ ಚಟುವಟಿಕೆಗಳಿಗಾಗಿ ಕಾರಾಗೃಹದ ಆವರಣದಲ್ಲಿ ಬಿಡಲಾಗುವುದು. ಆಯಾ ಕಾರಾಗೃಹದ ನಿಯಮಗಳಂತೆ ಬಂದಿಗಳನ್ನು ದಿನದಲ್ಲಿ ಅನೇಕ ಸಲ ಎಣಿಕೆ ಮಾಡಲಾಗುವುದು.

**17. ಬಂದಿಗಳಿಗೆ ತಮ್ಮ ತಮ್ಮ ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳಲು ಅವಕಾಶವಿದೆಯೇ?**

ಹೌದು, ಬಂದಿಗಳಿಗೆ ತಮ್ಮ ತಮ್ಮ ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳಲು ಅವಕಾಶವಿದೆ. ಆದರೆ ಅವರು ಕೆಲವು ಧಾರ್ಮಿಕ ವಸ್ತುಗಳನ್ನು ತಮ್ಮ ಬಳಿಯಲ್ಲಿ ಇಟ್ಟುಕೊಳ್ಳುವಂತಿಲ್ಲ. ಉದಾಹರಣೆಗೆ– ಕೃಪಾಣ್ ಹಾಗೂ ನಿಷೇಧಿತ ಪಟ್ಟಿಯಲ್ಲಿರುವ ಇತರೆ ವಸ್ತುಗಳನ್ನು ಇಟ್ಟುಕೊಳ್ಳುವ ಹಾಗಿಲ್ಲ. ಕಾರಾಗೃಹದ ವೇಳಾಪಟ್ಟಿಯ ಅಥವಾ ನಿಯಮಗಳ ವಿರುದ್ಧವಾಗಿ ನಡೆಸುವ ಆಚರಣೆಗಳು ಕೂಡ ಸ್ವೀಕೃತವಲ್ಲ. ಬಂದಿಗಳಿಗೆ ತಮಗೆ ಬೇಕಾದ ಧಾರ್ಮಿಕ ಆಚರಣೆಯನ್ನು ಅನುಸರಿಸಲು ಅಗತ್ಯವಿರುವ ವಿಶೇಷ ಜಾಗದ ವ್ಯವಸ್ಥೆಯನ್ನು ಮತ್ತು ವಿಶೇಷ ತಿನಿಸುಗಳನ್ನು ಅವರವರ ಧಾರ್ಮಿಕ ನಂಬಿಕೆಗಳಿಗೆ ಅನುಗುಣವಾಗಿ ವಿಶೇಷ ಪರಿಗಣನೆಯಲ್ಲಿ ಒದಗಿಸಲಾಗುತ್ತದೆ.

**18. ಬಂದಿಗಳ ಆಹಾರ ವ್ಯವಸ್ಥೆ ಹೇಗೆ?**

ಬಂದಿಗಳಿಗೆ ದಿನಕ್ಕೆ 3 ರಿಂದ 5 ಬಾರಿ ಆಹಾರ ಒದಗಿಸಲಾಗುವುದು. ಇದರಲ್ಲಿ ಚಹಾ, ಲಘು ತಿಂಡಿ ಹಾಗೂ ಮೂರು ಊಟದ ವ್ಯವಸ್ಥೆ ಹೊಂದಿರುತ್ತದೆ. ಆಹಾರದ ವಿಧಗಳ (ಡಯೆಟ್) ಪಟ್ಟಿಯನ್ನು ಆಯಾ ಕಾರಾಗೃಹದ ಆವರಣದಲ್ಲಿ ಪ್ರದರ್ಶಿಸಲಾಗುತ್ತದೆ ಅಥವಾ ಕಾರಾಗೃಹದ ಅಧಿಕಾರಿಯಿಂದ ಮತ್ತು ಕಾರಾಗೃಹದ ಕೈಪಿಡಿಯಿಂದ ಪಡೆಯಬಹುದು. ಸರಳ ಮತ್ತು ಸಮತೋಲನವಾಗಿರುವ ಆಹಾರ ಅಂದರೆ, ಬೇಳೆ (ಧಾಲ್) ಮತ್ತು ಚಪಾತಿ ಹಾಗೂ ಅನ್ನ ಮತ್ತು ತರಕಾರಿ ಪದಾರ್ಥಗಳು– ವಾರಕ್ಕೊಮ್ಮೆ ಮಾಂಸ ಮತ್ತು ಮೊಟ್ಟೆ ನೀಡಲಾಗುತ್ತದೆ. ಇದು ಪ್ರದೇಶ ಮತ್ತು ರಾಜ್ಯ–ರಾಜ್ಯಗಳ ನಡುವೆ ಭಿನ್ನವಾಗಿರಬಹುದು. ಕೆಲವೊಂದು ಬಂದಿಗಳಿಗೆ ವೈದ್ಯಾಧಿಕಾರಿಗಳ ಆದೇಶದಂತೆ ವಿಶೇಷ ಆಹಾರವನ್ನು ಅಂದರೆ, ಅವರ ದೈಹಿಕ ಸ್ಥಿತಿ, ಕೆಲಸ ನಿರ್ವಹಿಸುವಿಕೆ ಮತ್ತು ಧಾರ್ಮಿಕ ನಂಬಿಕೆಯಂತೆ ನೀಡಲಾಗುತ್ತದೆ. ಅನಾರೋಗ್ಯದಿಂದ ನರಳುತ್ತಿರುವ ಹಾಗೂ ಆಸ್ಪತ್ರೆಯಲ್ಲಿ ದಾಖಲಾಗಿರುವ ಬಂದಿಗಳಿಗೆ ವಿಶೇಷವಾದ ಆಹಾರವನ್ನು ನೀಡಲಾಗುತ್ತದೆ. ಮಾತ್ರವಲ್ಲದೆ ಗರ್ಭಿಣಿಯರಿಗೆ ಹಾಗೂ ಹಾಲು ಉಣಿಸುವ ತಾಯಂದಿರಿಗೆ ಪ್ರತ್ಯೇಕ ಆಹಾರ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ.



**19. ಬಂದಿಗಳು ಹೊರಗಿನಿಂದ ಆಹಾರ ತರಿಸಿಕೊಳ್ಳಬಹುದೇ?**

ವಿಚಾರಣಾಧೀನ ಬಂದಿಗಳು ಅಧೀಕ್ಷಕರ ಅನುಮತಿಯನ್ನು ಪಡೆದು ಹೊರಗಿನ ಆಹಾರ ಪದಾರ್ಥಗಳನ್ನು ತರಿಸಿಕೊಳ್ಳಬಹುದು. ಕೆಲವೊಂದು ಕಾರಾಗೃಹಗಳಲ್ಲಿ ಕ್ಯಾಂಟೀನ್ ವ್ಯವಸ್ಥೆ ಕೂಡ ಇರುವುದರಿಂದ ಬಂದಿಗಳು ನಿಯಮಾನುಸಾರ ಆಹಾರ ವಸ್ತುಗಳನ್ನು ಪಡೆಯಬಹುದು. ಕ್ಯಾಂಟೀನ್‌ಗಳಲ್ಲಿ ಬಿಸ್ಕತ್ತು, ಖಾರಾ ತಿಂಡಿ, ಬ್ರೆಡ್, ಬೆಣ್ಣೆ ಇತ್ಯಾದಿಗಳನ್ನು ಮಾರಾಟ ಮಾಡಲಾಗುತ್ತದೆ. ಕೆಲವೊಮ್ಮೆ ಸಮೋಸ, ಕಚೋರಿ ಮುಂತಾದ ತಿನಿಸುಗಳು ಕೂಡ ದೊರೆಯಬಹುದು.

**20. ಕಾರಾಗೃಹದ ಸ್ವಚ್ಛತೆ ಹಾಗೂ ನೈರ್ಮಲ್ಯದ ಹೊಣೆ ಯಾರದ್ದು?**

ಕಾರಾಗೃಹ ಕೈಪಿಡಿಯಲ್ಲಿ ಸ್ವಚ್ಛತೆ, ನೈರ್ಮಲ್ಯ ಹಾಗೂ ಶುದ್ಧತೆಯ ಬಗ್ಗೆ ಉಲ್ಲೇಖವಿದೆ. ಕಾರಾಗೃಹದ ಅಧಿಕಾರಿವರ್ಗ ಹಾಗೂ ಸಿಬ್ಬಂದಿವರ್ಗದವರು ಬಂದಿಗಳ ಸಹಯೋಗದೊಂದಿಗೆ ಅವರವರ ಕರ್ತವ್ಯದ ಭಾಗವಾಗಿ ಸ್ವಚ್ಛತೆ ಹಾಗೂ ನೈರ್ಮಲ್ಯದ ಹೊಣೆಯನ್ನು ನಿರ್ವಹಿಸತಕ್ಕದ್ದು. ಕಾರಾಗೃಹ ವಾಸಿಗಳು ತಮ್ಮ ವಾಸಸ್ಥಳಗಳ ಸ್ವಚ್ಛತೆ, ನೈರ್ಮಲ್ಯತೆ ಹಾಗೂ ಶುದ್ಧತೆಯಯನ್ನು ಕಾಪಾಡಬೇಕು. ಸಾಮಾನ್ಯವಾಗಿ ಎಲ್ಲರೂ ಉಪಯೋಗಿಸುವಂತಹ ಸ್ಥಳಗಳನ್ನು ಸಜಾಬಂದಿಗಳು ತಮಗೆ ಹಂಚಿಕೆ ಮಾಡಲ್ಪಟ್ಟಂತೆ ನಿರ್ವಹಿಸುತ್ತಾರೆ ಮತ್ತು ಕಾರಾಗೃಹದ ಅಧಿಕಾರಿಗಳು ನಿಯೋಜಿಸಿದಂತಹ ಸಜಾಬಂದಿಗಳಿಂದ (ಕಾರ್ಮಿಕರು) ಮಾತ್ರ ಕರ್ತವ್ಯ ನಿರ್ವಹಣೆಯನ್ನು ಮಾಡಿಸಲಾಗುತ್ತದೆ. ಈ ಸಜಾಬಂದಿಗಳು (ಕಾರ್ಮಿಕರು) ಶೌಚಾಲಯ ಮತ್ತು ಸ್ನಾನಗೃಹಗಳನ್ನು ಸ್ವಚ್ಛ ಮಾಡುತ್ತಾರೆ.

**21. ಕಾರಾಗೃಹಗಳಲ್ಲಿ ಸ್ವಚ್ಛ ಕುಡಿಯುವ ನೀರಿನ ಸೌಲಭ್ಯ ಇದೆಯೇ?**

ಕಾರಾಗೃಹವಾಸಿಗಳಿಗೆ ಸ್ವಚ್ಛ ಕುಡಿಯುವ ನೀರು ಪಡೆಯುವ ಹಕ್ಕು ಇರುವುದರಿಂದ ಕಾರಾಗೃಹಗಳಲ್ಲಿ ಇದಕ್ಕೆ ಸರಿಯಾದ ರೀತಿಯಲ್ಲಿ ಸಮರ್ಪಕ ವ್ಯವಸ್ಥೆಗಳನ್ನು ಮಾಡಿರುತ್ತಾರೆ. ಬಹುತೇಕ ಕಾರಾಗೃಹಗಳಲ್ಲಿ ರಿವರ್ಸ್ ಓಸ್ಮೋಸಿಸ್ (ಆರ್.ಓ.) ಉಪಕರಣಗಳು ಇದ್ದರೆ, ಮತ್ತೆ ಕೆಲವು ಕಡೆ ಸ್ವಚ್ಛಗೊಳಿಸದ, ಕುಡಿಯಲು ಯೋಗ್ಯವಲ್ಲದಂತಹ ನೀರು ಸರಬರಾಜಾಗುತ್ತದೆ. ನೀರಿನ ಗುಣಮಟ್ಟ ಸರಿಯಿಲ್ಲದಿದ್ದಲ್ಲಿ ಕಾರಾಗೃಹಗಳ ಅಧಿಕಾರಿಗಳಿಗೆ, ಕಾನೂನು ಸೇವಾ ಅಧಿಕಾರಿಗಳಿಗೆ ಅಥವಾ ಸಂದರ್ಶಕ ಮಂಡಳಿಯ ಸದಸ್ಯರಿಗೆ ದೂರುಗಳನ್ನು ಕೊಡಬಹುದು.

**22. ಕಾರಾಗೃಹವಾಸಿಗಳಿಗೆ ವೈದ್ಯಕೀಯ ತಪಾಸಣೆಯ ವ್ಯವಸ್ಥೆಗಳೇನು?**

ಕಾರಾಗೃಹಗಳಲ್ಲಿ ವೈದ್ಯಾಧಿಕಾರಿಗಳು ಲಭ್ಯರಿದ್ದರೆ ಬಂದಿಗಳು ಅವರಲ್ಲಿಗೆ ಹೋಗಿ ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳತಕ್ಕದ್ದು. ಕಾರಾಗೃಹಗಳಲ್ಲಿ ವೈದ್ಯಾಧಿಕಾರಿಗಳು ಇಲ್ಲದಿದ್ದರೆ ಬಂದಿಗಳು ಕಾರಾಗೃಹದ ಮುಖ್ಯಸ್ಥರಿಗೆ ವೈದ್ಯಕೀಯ ಚಿಕಿತ್ಸೆಗಾಗಿ ಮನವಿ ಮಾಡಿಕೊಳ್ಳತಕ್ಕದ್ದು, ಕಾರಾಗೃಹದ ಅಧಿಕಾರಿಗಳು ತಪ್ಪದೆ ಅನಾರೋಗ್ಯ ಪೀಡಿತ ಬಂದಿಗಳನ್ನು ವೈದ್ಯಾಧಿಕಾರಿಗಳ ಬಳಿ ಭೇಟಿ ಮಾಡಿಸಿ ಅವರು ಕೊಡುವಂತಹ ಔಷಧೋಪಚಾರದ ಚೀಟಿಯನ್ನು ಪಡೆದು ಮುಂದಿನ ಕ್ರಮವನ್ನು ಕೈಗೊಳ್ಳಬೇಕು ಅಥವಾ ಇನ್ನೂ ಹೆಚ್ಚಿನ ಚಿಕಿತ್ಸೆಗಾಗಿ ಕಾರಾಗೃಹದ ಆಸ್ಪತ್ರೆಗೆ ದಾಖಲು ಮಾಡುವ ಆದೇಶವನ್ನು ವೈದ್ಯಾಧಿಕಾರಿಗಳು ನೀಡಬಹುದು. ವೈದ್ಯಾಧಿಕಾರಿಗಳು ಬಂದಿಗಳ ರೋಗ ಲಕ್ಷಣಗಳನ್ನು ಪರೀಕ್ಷಿಸಿ ಅವರು ನಿರ್ವಹಿಸುತ್ತಿರುವಂತಹ ಕೆಲಸದ ಮಾದರಿಯನ್ನು ಅಥವಾ ಅವರ ಆಹಾರ ಪದ್ಧತಿಯನ್ನು ಬದಲಿಸಲು ಆದೇಶ ನೀಡಬಹುದು. ರೋಗ ಪತ್ತೆಯ ವೈದ್ಯಕೀಯ ತಪಾಸಣೆಯನ್ನು ಕಾರಾಗೃಹದಲ್ಲೇ ನಡೆಸುವರು. ಬಂದಿಗಳಿಗೆ ಕಾರಾಗೃಹ ಇಲಾಖೆಯ ವತಿಯಿಂದ ಔಷಧಿಗಳನ್ನು ಉಚಿತವಾಗಿ ನೀಡಲಾಗುವುದು.

**23. ಬಂದಿಗಳು ಇತರೆ ಆಸ್ಪತ್ರೆಗಳಿಂದ ಚಿಕಿತ್ಸೆ ಪಡೆಯಬಹುದೇ?**

ಹೌದು, ಬಂದಿಗಳು ಇತರೆ ಆಸ್ಪತ್ರೆಗಳಿಂದ ಚಿಕಿತ್ಸೆ ಪಡೆಯಲು ಅನುಮತಿಸಬಹುದು. ವೈದ್ಯಾಧಿಕಾರಿಗಳು ಸ್ಥಳೀಯ ಆಸ್ಪತ್ರೆಯಲ್ಲಿ ವಿಶೇಷ ಚಿಕಿತ್ಸೆ ಪಡೆಯಲು ಶಿಫಾರಸ್ಸು ಮಾಡಬಹುದು ಅಥವಾ ಮತ್ತೊಂದು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯಲು ಅನುಮತಿ ಬಯಸಿ ಬಂದಿಯು ಸಂಬಂಧಿಸಿದ ಕಾರಾಗೃಹದ ಅಧಿಕಾರಿಗೆ ಪತ್ರವನ್ನು ಬರೆಯಬಹುದು. ಮಾತ್ರವಲ್ಲದೆ ಅವರು ಯಾವ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆಯೋ ಆ ನ್ಯಾಯಾಲಯಕ್ಕೆ ತಮ್ಮ ವಕೀಲರ ಮೂಲಕ ಅರ್ಜಿಯನ್ನು ಸಲ್ಲಿಸಿ ಅನುಮತಿಯನ್ನು ಪಡೆಯಬಹುದು. ಬಂದಿಗೆ ವಕೀಲರಿಲ್ಲದಿದ್ದಲ್ಲಿ, ಕಾರ್ಯದರ್ಶಿಗಳು, ಕಾನೂನು ಸೇವಾ ಪ್ರಾಧಿಕಾರ ಅಥವಾ ಕಾನೂನು ಸ್ವಯಂಸೇವಕರ ಸಹಾಯ ಅಥವಾ ಕಾನೂನು ಸೇವಾ ಪ್ರಾಧಿಕಾರದ ಮೂಲಕ ಕಾರಾಗೃಹಗಳಿಗೆ ಭೇಟಿ ನೀಡುವಂತಹ ವಕೀಲರಿಗೆ ಪತ್ರವನ್ನು ಬರೆದುಕೊಳ್ಳಬಹುದು.

**24. ಕಾರಾಗೃಹಗಳಲ್ಲಿನ ಬಂದಿಗಳಿಗೆ ಮಾನಸಿಕ ಆರೋಗ್ಯದ ಸೌಲಭ್ಯಗಳೇನಿವೆ?**

ಮಾನಸಿಕ ರೋಗದ ಶೀಘ್ರ ಪತ್ತೆಯ ಖಾತ್ರಿಗೆ ಅಥವಾ ತಡೆಗಟ್ಟುವುದಕ್ಕೆ ಕಾರಾಗೃಹದಲ್ಲಿನ ಎಲ್ಲಾ ಬಂದಿಗಳಿಗೆ ಕಾರಾಗೃಹ ಇಲಾಖೆಯಿಂದ ಮನೋಚಿಕಿತ್ಸೆ ಮತ್ತು ಮಾನಸಿಕ ಆರೋಗ್ಯದ ಕುರಿತಾದ ಮಾರ್ಗದರ್ಶನ ನೀಡಲಾಗುತ್ತದೆ. ಪ್ರತಿ ಕೇಂದ್ರ ಮತ್ತು ಜಿಲ್ಲಾ ಕಾರಾಗೃಹಗಳು ಮನೋವಿಜ್ಞಾನಿಗಳನ್ನು ಮತ್ತು ಮನೋಚಿಕಿತ್ಸೆಯಲ್ಲಿ ತರಬೇತಿ ಹೊಂದಿರುವ ಸಮಾಜ ಸೇವಕರ ಸಹಾಯವನ್ನು, ಅರ್ಹತೆಯುಳ್ಳ ಮನೋಚಿಕಿತ್ಸಕರ ಸೇವೆಯನ್ನು ಪಡೆಯಬೇಕು. ಕೇಂದ್ರ ಮತ್ತು ಜಿಲ್ಲಾ ಕಾರಾಗೃಹಗಳು ಮಾನಸಿಕ ವೈಪರೀತ್ಯಗಳಿಗೆ ಪ್ರಾರಂಭಿಕ ಹಂತದ ಚಿಕಿತ್ಸೆಯನ್ನು ನೀಡುವ ಸೌಲಭ್ಯಗಳನ್ನು ಹೊಂದಿರಬೇಕು. ಉಪ–ಕಾರಾಗೃಹಗಳು ಮಾನಸಿಕ ಸಮಸ್ಯೆಯಿರುವಂತಹ ಬಂದಿಗಳನ್ನು ಸಮೀಪದ ಮಾನಸಿಕ ಚಿಕಿತ್ಸಾ ಸೌಲಭ್ಯವಿರುವಲ್ಲಿಗೆ ಕರೆದೊಯ್ಯಬೇಕು ಅಥವಾ ಅವರನ್ನು ಜಿಲ್ಲಾ ಅಥವಾ ಕೇಂದ್ರ ಕಾರಾಗೃಹಗಳಿಗೆ ವರ್ಗಾವಣೆಗೆ ಕೋರಬೇಕು. ಎಲ್ಲಾ ಕಾರಾಗೃಹಗಳು ಔಪಚಾರಿಕವಾಗಿ ಸಮೀಪದ ಮಾನಸಿಕ ಆಸ್ಪತ್ರೆಯೊಂದಿಗೆ ಸಂಬಂಧವನ್ನು ಹೊಂದಿರಬೇಕು. ಮುಂದುವರೆದಂತೆ, ಮಾನಸಿಕ ರೋಗವಿರುವಂತಹ ಬಂದಿಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಸೂಕ್ತವಾದ ಮಾನಸಿಕ ಆರೋಗ್ಯ ಸಂಸ್ಥೆಗಳಿಗೆ ವರ್ಗಾಯಿಸಬಹುದು.

**25. ಕಾರಾಗೃಹಗಳಲ್ಲಿ ಬಂದಿಗಳು ಕೆಲಸಮಾಡಬಹುದೇ? ಅವರಿಗೆ ಮಜೂರಿಯನ್ನು (ವೇತನ) ನೀಡಲಾಗುತ್ತದೆಯೇ?**

ಕಠಿಣ ಕಾರಾಗೃಹದ ಶಿಕ್ಷೆಗೆ ಒಳಗಾಗಿರುವ ಸಜಾಬಂದಿಗಳು, ದಂಡಾದೇಶದ ಅವಧಿಯಲ್ಲಿ ಕೆಲಸ ಮಾಡಲೇಬೇಕೆಂಬ ನಿಯಮಗಳನ್ನು ರೂಪಿಸಲಾಗಿದೆ. ಕಾರಾಗೃಹದ ಅಧಿಕಾರಿಗಳು ಅಥವಾ ಕಾರಾಪಾಲರು (ಜೈಲರ್) ಬಂದಿಗಳಿಗೆ ಕೆಲಸವನ್ನು ನಿಯೋಜಿಸುತ್ತಾರೆ. ದೀರ್ಘಾವಧಿ ಶಿಕ್ಷೆಗೆ ಒಳಗಾದ ಬಂದಿಗಳನ್ನು ಅಥವಾ ಶಿಕ್ಷಣ ಪಡೆದಿರುವ ಬಂದಿಗಳನ್ನು ಕೆಲವೊಮ್ಮೆ ಕಾರಾಗೃಹದ ಆಡಳಿತದ ಸಹಾಯದ ಕೆಲಸಕ್ಕೆ ನೇಮಿಸಬಹುದು. ಅವರನ್ನು ಸಜಾ ಅಧಿಕಾರಿಗಳು ಅಥವಾ ಸಜಾ ವಾರ್ಡರ್‌ಗಳೆಂದು ಸ್ಥಳೀಯ ಭಾಷೆಯಲ್ಲಿ ಕರೆಯಬಹುದು. ಬಂದಿಗಳನ್ನು ಸಾಮಾನ್ಯವಾಗಿ ಫ್ಯಾಕ್ಟರಿ ಅಥವಾ ಉತ್ಪಾದನಾ ಘಟಕಗಳಿಗೆ, ಅಡುಗೆಮನೆಗೆ, ಸ್ವಚ್ಛತಾ ಕಾರ್ಯಗಳಿಗೆ, ಭದ್ರತೆಗೆ ಅಥವಾ ಕಟ್ಟಡ ನಿರ್ವಹಣಾ ಕೆಲಸಕ್ಕೆ ನಿಯೋಜಿಸಬಹುದು. ಕೆಲವು ಬಂದಿಗಳನ್ನು ಅರೆಕಾನೂನು ಅಧಿಕಾರಿಗಳಾಗಿ ತರಬೇತುಗೊಳಿಸಿ ಕಾರಾಗೃಹದ ಕಾನೂನು ಸೇವಾ ಪ್ರಾಧಿಕಾರದ ಕೇಂದ್ರಗಳಲ್ಲಿ ಕೆಲಸಕ್ಕೆ ನಿಯೋಜಿಸಬಹುದು. ಬಂದಿಗಳ ಮಜೂರಿ (ವೇತನ) ಯು

ಕೌಶಲ್ಯ, ಅರೆಕೌಶಲ್ಯ ಅಥವಾ ಕೌಶಲ್ಯರಹಿತರಿಗೆ ಭಿನ್ನವಾಗಿರುತ್ತದೆ. ಆದರೆ ಅದು ಸರ್ಕಾರ ನಿಗದಿಪಡಿಸಿರುವುದಕ್ಕಿಂತ ಕಡಿಮೆ ಇರಬಾರದು. ಬಂದಿಗಳಿಗೆ ನೀಡಲಾಗುವ ಮಜೂರಿಯ (ವೇತನ) ಪ್ರಮಾಣವು ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸವಿರುವುದನ್ನು ಕಾಣಬಹುದು.

ವಿಚಾರಣಾಧೀನ ಬಂದಿಗಳಿಗೆ ಕಾರಾಗೃಹಗಳಲ್ಲಿ ಕೆಲಸಮಾಡಲು ಒತ್ತಾಯಿಸುವಂತಿಲ್ಲ. ಮಾತ್ರವಲ್ಲದೆ ಸಾದಾ ಕಾರಾಗೃಹ ವಾಸಕ್ಕೆ ಒಳಗಾಗಿರುವ ಬಂದಿಗಳನ್ನು ಕೂಡ ಕೆಲಸಕ್ಕೆ ಒಳಪಡಿಸುವಂತಿಲ್ಲ. ಹೀಗಿದ್ದರೂ, ಕೆಲಸ ಮಾಡಲು ಅವರು ಸ್ವಯಂಪ್ರೇರಿತರಾಗಿ ಇಚ್ಛಿಸಿದ್ದಲ್ಲಿ ಕಾರಾಗೃಹದ ಅಧಿಕಾರಿಗಳಿಂದ ಅನುಮತಿ ಪಡೆಯಬಹುದು. ಕಾರಾಗೃಹದ ಅಧಿಕಾರಿಗಳು ಅನುಮತಿ ನೀಡಬಹುದು ಅಥವಾ ನೀಡದಿರಬಹುದು.

**26. ಕಾರಾಗೃಹದಲ್ಲಿ ಬಂದಿಯು ಮರಣ ಹೊಂದಿದರೆ ಏನಾಗುತ್ತದೆ?**

ಕಾರಾಗೃಹದಲ್ಲಿ ಉಂಟಾಗುವ ಮರಣವನ್ನು ಅಭಿರಕ್ಷೆಯಲ್ಲಿನ ಮರಣ ಎನ್ನಲಾಗುತ್ತದೆ. ಕಾರಾಗೃಹದಲ್ಲಿನ ಎಲ್ಲಾ ಮರಣಗಳ ಮಾಹಿತಿಯನ್ನು ತಿಳಿಸಬೇಕಾಗಿರುವುದು:

(1) 1973ರ ದಂಡ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ 174 ಮತ್ತು 176 ರ ಉಪ ಸೆಕ್ಷನ್ 4 ರ ಅಡಿಯಲ್ಲಿ ಅಧಿಕಾರವಿರುವಂತಹ ಹತ್ತಿರದ ಮ್ಯಾಜಿಸ್ಟ್ರೇಟರಿಗೆ ಮಾಹಿತಿಯನ್ನು ನೀಡಬೇಕು.

(2) ಅಧಿಕಾರ ವ್ಯಾಪ್ತಿಯಲ್ಲಿರುವ ಪೊಲೀಸ್ ಠಾಣೆಯ ಠಾಣಾಧಿಕಾರಿಗೆ ಮಾಹಿತಿಯನ್ನು ನೀಡಬೇಕು.

(3) ಮರಣವಾದ 24 ಘಂಟೆಗಳ ಒಳಗಾಗಿ ರಾಷ್ಟ್ರೀಯ ಮತ್ತು ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಮಾಹಿತಿಯನ್ನು ನೀಡಬೇಕು.

ಬಂದಿಯು ಮರಣ ಹೊಂದಿರುವಾಗ, ಅವರ ಮರಣದ ಕಾರಣ ದೃಢಪಡಿಸಿಕೊಳ್ಳಲು, ಅದು ಸಹಜ ಮರಣವೇ ಅಥವಾ ಅಸಹಜ ಮರಣವೇ ಎಂದು ತಿಳಿದುಕೊಳ್ಳಲು ವಿಚಾರಣೆಯನ್ನು ನಡೆಸಬೇಕು. ಪ್ರಾಥಮಿಕ ಹಂತದಲ್ಲಿ ವೈದ್ಯಕೀಯ ಗಮನದ ಅಗತ್ಯವಿತ್ತೇ ಹಾಗೂ ನೀಡಲ್ಪಟ್ಟಿತ್ತೇ ಹಾಗೂ ಒಂದು ವೇಳೆ ಕಾರಾಗೃಹದ ಅಧಿಕಾರಿಗಳಿಂದ ನಿಂದನೆ ಅಥವಾ ನಿರ್ಲಕ್ಷ್ಯವಿತ್ತೇ ಎಂಬುದನ್ನು ದೃಢಪಡಿಸಿಕೊಳ್ಳಬೇಕು. ಕೂಡಲೇ ಬಂದಿಯ ಕುಟುಂಬಕ್ಕೆ ಮರಣದ ಬಗ್ಗೆ ತಿಳಿಸುವುದು ಕಾರಾಗೃಹ ಇಲಾಖೆಯ ಜವಾಬ್ದಾರಿಯಾಗಿದೆ.

**27. ಬಂದಿಗಳಿಗೆ ಹಕ್ಕು ಮತ್ತು ಕರ್ತವ್ಯಗಳಿವೆಯೇ?**

ಹೌದು, ಭಾರತದ ಸಂವಿಧಾನವು ನೀಡಿರುವ ಎಲ್ಲಾ ಮೂಲಭೂತ ಹಕ್ಕುಗಳು, ಬಂಧನದಿಂದಾಗಿ ಮಿತಿಗೊಳಪಟ್ಟಿರುವುದನ್ನು ಹೊರತುಪಡಿಸಿ ಇತರ ಎಲ್ಲಾ ಹಕ್ಕುಗಳಿವೆ ಮಾತ್ರವಲ್ಲದೆ ಅವರಿಗೆ ಕರ್ತವ್ಯಗಳೂ ಇವೆ. ಕಾನೂನಿಗೆ ಒಳಪಡುವುದು, ಕಾರಾಗೃಹದ ಅಧಿಕಾರಿಗಳು ನೀಡಿದ ಎಲ್ಲಾ ಕಾನೂನುಬದ್ಧ ಆದೇಶಗಳನ್ನು ಅನುಸರಿಸುವುದು, ಶಿಸ್ತು ಮತ್ತು ಆದೇಶಗಳ ಪರಿಪಾಲನೆ ಎಲ್ಲಾ ಬಂದಿಗಳ ಕರ್ತವ್ಯವಾಗಿದೆ. ಇನ್ನಿತರ ಬಂದಿಗಳ, ಕಾರಾಗೃಹದ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರ ಹಕ್ಕುಗಳನ್ನು ಅವರು ಗೌರವಿಸಬೇಕು. ಸುಳ್ಳು ಆರೋಪ ಹೊರೆಸುವುದು ಅಥವಾ ಇತರರ ಧಾರ್ಮಿಕ ನಂಬಿಕೆಗಳನ್ನು ನಿಂದಿಸುವಂತಹ ಕಾರ್ಯಗಳನ್ನು ಯಾವುದೇ ಕಾರಣಕ್ಕೂ ಮಾಡಬಾರದು ಹಾಗೂ ಸರ್ಕಾರಿ ಆಸ್ತಿಗೆ ಹಾನಿಯನ್ನುಂಟು ಮಾಡಬಾರದು. ಎಲ್ಲಾ ಬಂದಿಗಳು ನೈರ್ಮಲ್ಯ ಮತ್ತು ಸ್ವಚ್ಛತೆಯ ನಿರ್ದೇಶಿತ ಮಟ್ಟವನ್ನು ಕಾಪಾಡುವ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ. ವಿವರವಾದ ಹಕ್ಕು ಮತ್ತು ಕರ್ತವ್ಯಗಳಿಗಾಗಿ ಪುಟ ಸಂಖ್ಯೆ 36 ನ್ನು ನೋಡಿ.



## ಕುಟುಂಬ, ಸ್ನೇಹಿತರು ಮತ್ತು ವಕೀಲರೊಂದಿಗೆ ಸಂಪರ್ಕ

**28. ಕಾರಾಗೃಹದಲ್ಲಿರುವ ಬಂದಿಗಳನ್ನು ಯಾರು ಮತ್ತು ಎಷ್ಟು ಸಲ ಭೇಟಿಯಾಗಬಹುದು?**

ಬಂದಿಗಳು ನಿರ್ದಿಷ್ಟ ದಿನಗಳಂದು, ನಿರ್ದಿಷ್ಟ ಸಮಯದಲ್ಲಿ ಕಾರಾಗೃಹಗಳ ನಿಯಮಗಳಿಗನುಸಾರವಾಗಿ ತಮ್ಮ ಕುಟುಂಬ, ಸ್ನೇಹಿತರು ಮತ್ತು ವಕೀಲರನ್ನು ಭೇಟಿಯಾಗಬಹುದು. ಭೇಟಿಯ ಆವೃತ್ತಿಯು ವಾರಕ್ಕೆ ಎರಡರಿಂದ ವಾರಕ್ಕೆ ಒಂದು ದಿನದವರೆಗೂ ಇರಬಹುದು. ಇದು ಬಂದಿಯು ವಿಚಾರಣಾಧೀನ ಬಂದಿಯೇ, ಸ್ಥಾನಬದ್ಧ ಬಂದಿಯೇ, ಸಿವಿಲ್ ಬಂದಿಯೇ, ಸಜಾ ಬಂದಿಯೇ ಎನ್ನುವುದನ್ನು ಅವಲಂಬಿಸಿರುತ್ತದೆ. ಕಾರಾಗೃಹದಲ್ಲಿ ಭೇಟಿಯಾಗುವುದನ್ನು ಮುಲಾಖಾತ್ (ಭೇಟಿ/ಸಂದರ್ಶನ) ಎನ್ನಲಾಗುತ್ತದೆ.

**29. ಮುಲಾಖಾತ್ (ಸಂದರ್ಶನ) ಹೇಗೆ ನಡೆಯುತ್ತದೆ?**

ಮುಲಾಖಾತ್ ಸಾಮಾನ್ಯವಾಗಿ ಗಾಜು ಅಥವಾ ಕಂಬಿಗಳಿಂದ ಅಥವಾ ಜಾಲರಿಯಿಂದ ಸಂದರ್ಶಕರನ್ನು ಬಂದಿಯಿಂದ ಪ್ರತ್ಯೇಕಿಸಲ್ಪಟ್ಟಿರುವ ಸ್ಥಳದಲ್ಲಿ ನಡೆಸಲಾಗುತ್ತದೆ. ಸಂದರ್ಶನ ಅವಧಿಯು ಅನ್ವಯಿಸಬಹುದಾದ ನಿಯಮಗಳಿಗೆ ಅನುಗುಣವಾಗಿ 10 ರಿಂದ 30 ನಿಮಿಷಗಳ ಅವಧಿಯದ್ದಾಗಿರುತ್ತದೆ. ಕೆಲವು ಕಾರಾಗೃಹಗಳು ಸಂದರ್ಶನದ ದಿನಗಳನ್ನು ಪೂರ್ವಭಾವಿಯಾಗಿ ನಿರ್ಧರಿಸರಬಹುದು. ಭೇಟಿಗೆ ಮೊದಲು ಕಾರಾಗೃಹದ ಸಿಬ್ಬಂದಿವರ್ಗದವರು ಸಂದರ್ಶಕರನ್ನು ತಪಾಸಣೆ ಮಾಡಬಹುದು. ನಿಷೇಧಿತ ವಸ್ತುಗಳ ತಡೆಗಾಗಿ ಸಂದರ್ಶನಕ್ಕೆ ಮೊದಲು ಮತ್ತು ಸಂದರ್ಶನದ ನಂತರ ಬಂದಿಯ ತಪಾಸಣೆ ಮಾಡಬಹುದು.

**30. ಸಂದರ್ಶಕರು ಮುಲಾಖಾತ್‌ಗೆ (ಸಂದರ್ಶನ) ಹೇಗೆ ಅರ್ಜಿಸಲ್ಲಿಸಬಹುದು?**

ಸಂದರ್ಶನಕ್ಕಾಗಿ ಕಾರಾಗೃಹಗಳು ವಿಭಿನ್ನವಾದ ನಿಯಮಗಳನ್ನು ಹೊಂದಿರಬಹುದು. ಫೋನಿನ ಮೂಲಕ ಅಥವಾ ವೆಬ್-ಪೋರ್ಟಲ್ ಮೂಲಕ ಕೆಲವು ನಿರ್ಧಾರಿತ ಸಂದರ್ಶನಕ್ಕೆ ಅವಕಾಶ ನೀಡಿರಬಹುದು. ಇನ್ನೂ ಕೆಲವು ವೇಳೆ ಸಂದರ್ಶಕರು ಸಂದರ್ಶನಕ್ಕಾಗಿ ಕಾರಾಗೃಹಕ್ಕೆ ಹೋಗಬೇಕಾಗಬಹುದು ಅಥವಾ ಬಂದಿಯನ್ನು ಭೇಟಿಯಾಗಲು ಸರದಿ ಸಾಲಿನಲ್ಲಿ ಕಾಯಬೇಕಾಗಬಹುದು. ಕಾರಾಗೃಹಗಳಲ್ಲಿ ನಿಗದಿಪಡಿಸಿದ ಸೂಕ್ತ ದಾಖಲೆಗಳನ್ನು ಅಂದರೆ, ಬಂದಿಗಳ ಸಂದರ್ಶನಕ್ಕೆ ಬರುವಂತಹ ವ್ಯಕ್ತಿಗಳು ಪಡಿತರ ಚೀಟಿ, ಆಧಾರ್ ಕಾರ್ಡ್, ಮತದಾರರ ಗುರುತು ಚೀಟಿ ಇತ್ಯಾದಿಯನ್ನು ತೆಗೆದುಕೊಂಡು ಹೋಗಿರಬೇಕು.

**31. ಮುಲಾಖಾತ್‌ನ (ಸಂದರ್ಶನ) ಸಂದರ್ಭದಲ್ಲಿ ಸಂದರ್ಶಕರು ಬಂದಿಗಳಿಗೆ ಆಹಾರ, ಬಟ್ಟೆ ಅಥವಾ ಔಷಧಿಗಳನ್ನು ಕೊಡಬಹುದೇ?**

ಸಂದರ್ಶಕರು ಬಂದಿಗಳಿಗೆ ನೀಡಲು ಅನುಮತಿಸಿದಂತಹ ಕೆಲವು ವಸ್ತುಗಳನ್ನು ತೆಗೆದುಕೊಂಡು ಹೋಗಬಹುದು. ಆದರೆ ಸುರಕ್ಷತೆಯ ಕಾರಣದಿಂದಾಗಿ ಅವುಗಳನ್ನು ಮುಲಾಖಾತ್ತಿನ ಸಮಯದಲ್ಲಿ ನೇರವಾಗಿ ಕೊಡುವಂತಿಲ್ಲ. ಸಾಮಾನ್ಯವಾಗಿ ಇವುಗಳನ್ನು ಕಾರಾಗೃಹದ ಮುಖ್ಯದ್ವಾರದ ಬಳಿ ಕಾರಾಗೃಹದ ಆಡಳಿತದವರಿಗೆ ನೀಡಿ, ಅವುಗಳು ತಪಾಸಣೆಗೊಂಡ ನಂತರವೇ ಬಂದಿಗಳಿಗೆ ನೀಡಬಹುದು. ಕ್ಯಾಂಟೀನ್ ಸೌಲಭ್ಯವಿರುವಂತಹ ಕಾರಾಗೃಹದಲ್ಲಿ, ಸಂದರ್ಶಕರು ಬಂದಿಗಳಿಗೆ ನೀಡುವಂತಹ ಹಣವನ್ನು ಠೇವಣಿ ಇಡಲು ಅಥವಾ ಬಂದಿಗಳ ಖಾತೆಗೆ ವರ್ಗಾಯಿಸಲು ಅನುಮತಿಸಬಹುದು. ಇದರಿಂದ ಬಂದಿಗಳು ಕ್ಯಾಂಟೀನ್‌ನಿಂದ ತಮಗೆ ಅವಶ್ಯಕವಿರುವಂತಹ ಅಗತ್ಯ ವಸ್ತುಗಳನ್ನು ಕೊಂಡುಕೊಳ್ಳಬಹುದು.

**32. ದೂರವಾಣಿ ಕರೆ ಮಾಡಲು ಬಂದಿಗಳಿಗೆ ಅನುಮತಿಸಬಹುದೇ? ಈ ಕರೆಯ ವೆಚ್ಚವನ್ನು ಯಾರು ಭರಿಸುತ್ತಾರೆ?**

ಹೌದು, ದೂರವಾಣಿ ಸೌಲಭ್ಯವಿರುವಂತಹ ಕಾರಾಗೃಹಗಳಲ್ಲಿ ಮಾತ್ರ ಬಂದಿಗಳು ದೂರವಾಣಿ ಕರೆಯನ್ನು ಮಾಡಬಹುದು. ಇದನ್ನು "ಕಾರಾಗೃಹ ಬಂದಿಗಳ ಕರೆ ವ್ಯವಸ್ಥೆ" ಎಂದು ಸಾಮಾನ್ಯವಾಗಿ ಕರೆಯಲಾಗುತ್ತದೆ. ಈಗಾಗಲೇ "ಕಾರಾಗೃಹ ಬಂದಿಗಳ ಕರೆ ವ್ಯವಸ್ಥೆ" ಯಲ್ಲಿ ದಾಖಲಾಗಿರುವಂತಹ ದೂರವಾಣಿ ಸಂಖ್ಯೆಗಳಿಗೆ ಮಾತನಾಡಲು ಮಾತ್ರ ಬಂದಿಗಳು ಇದನ್ನು ಬಳಸಬಹುದು. ಈ ವ್ಯವಸ್ಥೆಯು ಬಂದಿಗಳು ತಮ್ಮ ಕುಟುಂಬದವರೊಂದಿಗೆ, ಸ್ನೇಹಿತರೊಂದಿಗೆ, ಸಂಬಂಧಿಕರೊಂದಿಗೆ ಮತ್ತು ವಕೀಲರೊಂದಿಗೆ ಮಾತನಾಡುವ ಸೌಲಭ್ಯ ಒದಗಿಸುತ್ತದೆ. ಸಾಮಾನ್ಯವಾಗಿ ಈ ವೆಚ್ಚವನ್ನು ಬಂದಿಗಳೇ ಭರಿಸಬೇಕು. ಕರೆಯ ಅವಧಿ ಮತ್ತು ಆವರ್ತನವು ಕಾರಾಗೃಹಗಳ ನಿಯಮಾವಳಿಗಳನ್ನು ಅವಲಂಬಿಸಿರುತ್ತದೆ.

**33. ಬಂದಿಗಳಿಗೆ ಪತ್ರ ಬರೆಯಲು ಅನುಮತಿ ನೀಡಲಾಗುತ್ತದೆಯೇ? ವೆಚ್ಚವನ್ನು ಯಾರು ಭರಿಸುತ್ತಾರೆ?**

ಬಂದಿಗಳು ತಮ್ಮ ಕುಟುಂಬದವರೊಂದಿಗೆ, ಸ್ನೇಹಿತರಿಗೆ ಮತ್ತು ಸಂಬಂಧಿಕರುಗಳಿಗೆ ಕಾರಾಗೃಹದಿಂದ ಪತ್ರವನ್ನು ಬರೆಯುವ ಮತ್ತು ಸ್ವೀಕರಿಸುವ, ಫೋಟೊಗಳನ್ನು ಮತ್ತು ದಾಖಲೆಗಳನ್ನು ಪಡೆಯುವ ಅನುಮತಿಯಿದೆ. ಇವುಗಳನ್ನು ಕಾರಾಗೃಹದ ಅಧಿಕಾರಿಗಳು ಪರಿಶೀಲಿಸಿ ಸೆನ್ಸಾರ್‌ಶಿಪ್‌ಗೆ ಒಳಪಡಿಸಬಹುದು. ಪತ್ರದಲ್ಲಿರುವಂತಹ ಯಾವುದೇ ಅಪರಾಧಿಕಾ ಅಥವಾ ಸಾಂಕೇತಿಕ ವಿಷಯಗಳನ್ನು ಸೆನ್ಸಾರ್ ಮಾಡಬಹುದು ಅಥವಾ ಅಂತಹ ಕಾಗದಗಳನ್ನು ತಡೆಹಿಡಿಯಬಹುದು. ಕೆಲವು ಕಾರಾಗೃಹಗಳು ಬರವಣಿಗೆಯ ಸಾಮಗ್ರಿಗಳನ್ನು, ಅಂಚೆ ಪತ್ರಗಳು ಹಾಗೂ ಸ್ಟಾಂಪುಗಳನ್ನು ಪೂರೈಸುತ್ತವೆ. ಕಾರಾಗೃಹಗಳ ಅಧೀಕ್ಷಕರು ಅಂತಹ ಸಂಪರ್ಕಗಳ ಆವರ್ತನವನ್ನು ಕಾರಾಗೃಹದ ನಿಯಮಾನುಸಾರ ತೀರ್ಮಾನಿಸಬಹುದು. ಕೆಲವು ಕಾರಾಗೃಹಗಳು ಉಚಿತವಾಗಿ ಕಾಗದ ಪತ್ರಗಳನ್ನು ಒದಗಿಸುತ್ತವೆ. ಇನ್ನಿತರ ಕಡೆಗಳಲ್ಲಿ ಬಂದಿಗಳು ಈ ವೆಚ್ಚವನ್ನು ಭರಿಸಬೇಕಾಗುತ್ತದೆ.

**34. ಬಂದಿಗಳು ವೀಡಿಯೊ ಕಾನ್ಫರೆನ್ಸ್ ಮೂಲಕ ತಮ್ಮ ಕುಟುಂಬವನ್ನು ಸಂಪರ್ಕಿಸಲು ಅನುಮತಿ ಇದೆಯೇ?**

ಹೌದು, ಸೌಲಭ್ಯಗಳು ಇರುವಲ್ಲಿ ಕಾರಾಗೃಹದ ಅಧಿಕಾರಿವರ್ಗದವರು ಬಂದಿಗಳು ತಮ್ಮ ಕುಟುಂಬದವರನ್ನು ವೀಡಿಯೊ ಕಾನ್ಫರೆನ್ಸಿನ ಮೂಲಕ ಸಂಪರ್ಕಿಸಲು ಅನುಮತಿ ನೀಡಬಹುದು. ಇದಕ್ಕೆ ಸಂಬಂಧಿಸಿದಂತೆ ಬಂದಿಯು ಅಧಿಕಾರಿಗಳ ಹತ್ತಿರ ಅನುಮತಿ ಕೇಳಿರಬೇಕು. ಕಾರಾಗೃಹದ ಅಧಿಕಾರಿಗಳು ಅನುಮತಿ ನೀಡಿರದಿದ್ದರೆ, ನ್ಯಾಯಾಲಯದಿಂದ ಅನುಮತಿಯನ್ನು ಪಡೆಯಬಹುದು. ಅನುಮತಿ ದೊರಕಿದರೆ ವೀಡಿಯೊ ಕಾನ್ಫರೆನ್ಸಿನ ಮೂಲಕ ತಮ್ಮ ಸಂಬಂಧಿಗಳನ್ನು ಭೇಟಿಯಾಗುವ ವ್ಯವಸ್ಥೆಯನ್ನು ಕಾರಾಗೃಹದಲ್ಲಿ ಮಾಡಬಹುದು. ಇ-ಪ್ರಿಸನ್ ಸೂಟ್ ಅಂತಹ ಕೆಲವು ಕಾರಾಗೃಹ ನಿರ್ವಹಣಾ ವ್ಯವಸ್ಥೆಗಳ ಜಾಲತಾಣಗಳನ್ನು ಬಳಸಿ ಆನ್‌ಲೈನಲ್ಲಿ ಸಮಯವನ್ನು ಗೊತ್ತುಪಡಿಸಿಕೊಳ್ಳಬಹುದು.

**35. ಬಂದಿಗಳಿಗೆ ಬೇರೆ ಕಾರಾಗೃಹದಲ್ಲಿರುವಂತಹ ತಮ್ಮ ಸಂಗಾತಿಯನ್ನು ಭೇಟಿಮಾಡುವ ಅವಕಾಶವನ್ನು ಕಲ್ಪಿಸಬಹುದೇ?**

ಹೌದು, ಕಾರಾಗೃಹದ ಅಧಿಕಾರಿಗಳು ಈ ಪ್ರಕಾರದ ಭೇಟಿಗೆ ಅವಕಾಶ ನೀಡಬಹುದು. ಆದರೆ ಇದಕ್ಕಾಗಿ ಸಮುಚಿತ ಮಾರ್ಗದ ಮೂಲಕ ಅನುಮತಿಯನ್ನು ಬಂದಿಯು ಪಡೆದಿರಬೇಕು. ಒಂದೇ ಕಾರಾಗೃಹದಲ್ಲಿರುವ ಅಥವಾ ಒಂದೇ ನಗರದ ಕಾರಾಗೃಹಗಳಲ್ಲಿರುವಂತಹ ಬಂದಿ ಸಂಗಾತಿಗಳಿಗೆ ಮುಲಾಖಾತ್‌ನ (ಸಂದರ್ಶನ) ಮೂಲಕ ಅನುಮತಿಯನ್ನು ನೀಡಬಹುದು.



**36. ಬಂದಿಗಳು ತಮ್ಮ ಮಕ್ಕಳನ್ನು ಭೇಟಿಯಾಗಲು ಅನುಮತಿ ಇದೆಯೇ?**


ಹೌದು, ಬಂದಿಗಳು ತಮ್ಮ ಮಕ್ಕಳನ್ನು ಭೇಟಿಯಾಗಬಹುದು. ಕೆಲವು ಕಾರಾಗೃಹಗಳಲ್ಲಿ ಬಂದಿಗಳು ತಮ್ಮ ಮಕ್ಕಳೊಂದಿಗೆ ನೇರವಾಗಿ ಭೇಟಿಯಾಗಲು ಕಛೇರಿಯ ಒಂದು ಆವರಣದಲ್ಲಿ ಅವಕಾಶವನ್ನು ಕಲ್ಪಿಸಬಹುದು. ಜೊತೆಗೆ, ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಕಾರಾಗೃಹದಲ್ಲಿ ತಮ್ಮ ತಾಯಿಯೊಂದಿಗೆ ಇರಲು ಅನುಮತಿ ಇದೆ. ಕೆಲವು ರಾಜ್ಯಗಳು ತಂದೆಯೊಂದಿಗಿರಲೂ ಕೂಡ ಅನುಮತಿ ನೀಡುತ್ತಿವೆ. ಮಕ್ಕಳು ಆಶ್ರಯ ಗೃಹದಲ್ಲಿದ್ದರೆ ಬಂದಿಯು ತನ್ನ ಮಕ್ಕಳನ್ನು ನಿರಂತರ ಭೇಟಿಯಾಗುವುದನ್ನು ಖಾತರಿಪಡಿಸಿಕೊಳ್ಳಲು ಕಾರಾಗೃಹದಲ್ಲಿನ ಅಧಿಕಾರಿಗಳಿಂದ ಮತ್ತು ಆಶ್ರಯ ಗೃಹದ ಅಧಿಕಾರಿಗಳಿಂದ ಅನುಮತಿಯನ್ನು ಪಡೆಯಲೇಬೇಕು.

**37. ಬಂದಿಗಳ ಕುಟುಂಬ ದೂರದಲ್ಲಿದ್ದರೆ ಕುಟುಂಬದೊಂದಿಗೆ ಸಂಪರ್ಕ ಇಟ್ಟುಕೊಳ್ಳುವುದನ್ನು ಖಾತರಿಪಡಿಸಿಕೊಳ್ಳಲು ಇರುವ ಪರ್ಯಾಯ ವಿಧಾನಗಳು ಯಾವುವು?**

ಇಂತಹ ಸಂದರ್ಭಗಳಲ್ಲಿ ಬಂದಿಯು ತಮ್ಮ ಮನೆಗೆ ಹತ್ತಿರವಾದ ಕಾರಾಗೃಹಕ್ಕೆ ವರ್ಗಾವಣೆಯನ್ನು ಕೇಳಬಹುದು. ಇದಕ್ಕಾಗಿ ಒಂದು ಅರ್ಜಿಯನ್ನು ಕಾರಾಗೃಹದ ಅಧಿಕಾರಿಗೆ ಬರೆಯಬೇಕು. ಅವರು ಸುರಕ್ಷತೆ, ಬಂದಿಯ ಕಲ್ಯಾಣ ಮತ್ತು ಆಡಳಿತಾತ್ಮಕ ಅನುಕೂಲಗಳನ್ನು ಪರಿಗಣಿಸಿ ತೀರ್ಮಾನ ತೆಗೆದುಕೊಳ್ಳುತ್ತಾರೆ. ಮತ್ತೊಂದು ಪರ್ಯಾಯ ವ್ಯವಸ್ಥೆ ಎಂದರೆ, ಕುಟುಂಬದ ಸದಸ್ಯರೊಂದಿಗಿನ ಸಂಪರ್ಕಕ್ಕಾಗಿ ವೀಡಿಯೊ ಕಾನ್ಫರೆನ್ಸ್ ಅಥವಾ ಟೆಲಿಫೋನಿನ ಬಳಕೆಯ ಸೌಲಭ್ಯವನ್ನು ಸಹ ನೀಡಬಹುದು.

**38. ವಕೀಲರು ತಮ್ಮ ಕಕ್ಷಿದಾರನನ್ನು ಭೇಟಿಯಾಗಬಹುದೇ? ಅವರ ಭೇಟಿಯ ಕ್ರಮವೂ ಅದೇ ರೀತಿಯದ್ದೇ?**

ಹೌದು, ವಕೀಲರಿಗೆ ಅಗತ್ಯಬಿದ್ದಾಗ ತಮ್ಮ ಕಕ್ಷಿದಾರನನ್ನು ಭೇಟಿಯಾಗುವ ಕರ್ತವ್ಯವಿರುತ್ತದೆ. ಸಾಮಾನ್ಯವಾಗಿ, ವಕೀಲರ ಭೇಟಿಗೆ ಕಡಿಮೆ ತಡೆಗಳಿರುತ್ತವೆ. ಕೆಲವು ಕಾರಾಗೃಹಗಳು ಇವರ ಭೇಟಿಗಾಗಿ ಪ್ರತ್ಯೇಕವಾದ ಸ್ಥಳವನ್ನು ಅಥವಾ ಕೊಠಡಿಯನ್ನು ಹೊಂದಿರುತ್ತವೆ. ವಕೀಲರು ತಮ್ಮ ಭೇಟಿಯ ದಿನಾಂಕ ಮತ್ತು ಸಮಯಕ್ಕಾಗಿ ಕಾರಾಗೃಹದ ಅಧಿಕಾರಿಗಳನ್ನು ಸಂಪರ್ಕಿಸಬೇಕು.



## ಮನರಂಜನೆ ಮತ್ತು ಇತರ ಸೌಲಭ್ಯಗಳು

**39. ಕಾರಾಗೃಹದಲ್ಲಿ ದಿನಪತ್ರಿಕೆ ಮತ್ತು ಇತರ ಪುಸ್ತಕಗಳನ್ನು ಓದಲು ಬಂದಿಗಳಿಗೆ ಅನುಮತಿ ಇದೆಯೇ?**

ಕಾರಾಗೃಹದ ಅಧಿಕಾರಿಗಳ ಅನುಮತಿಯೊಂದಿಗೆ ಪುಸ್ತಕಗಳನ್ನು ತಮ್ಮ ಬಳಿಯಲ್ಲಿ ಇಟ್ಟುಕೊಳ್ಳುವ ಅವಕಾಶವು ಬಂದಿಗಳಿಗಿದೆ. ಕಾರಾಗೃಹದ ಗ್ರಂಥಾಲಯದಿಂದ ಬಂದಿಗಳು ಪುಸ್ತಕಗಳನ್ನು, ಸುದ್ದಿಪತ್ರಿಕೆಗಳನ್ನು ಎರವಲು ಪಡೆಯಬಹುದು.

**40. ಬಂದಿಗಳು ಸಂಗೀತವನ್ನು ಕೇಳಬಹುದೇ ಅಥವಾ ಇನ್ನಿತರ ಮನರಂಜನಾ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಕೊಳ್ಳಬಹುದೇ?**

ಮನರಂಜನಾ ಸೌಲಭ್ಯಗಳು ಕಾರಾಗೃಹದಿಂದ ಕಾರಾಗೃಹಕ್ಕೆ ತುಂಬಾ ವಿಭಿನ್ನವಾಗಿರುವುದನ್ನು ಕಾಣಬಹುದು. ಕೆಲವು ಕಾರಾಗೃಹಗಳಲ್ಲಿ ಕೇಂದ್ರೀಕೃತ ನಿಯಂತ್ರಣ ಹೊಂದಿರುವಂತಹ ಸಾಮಾನ್ಯ ರೇಡಿಯೊ ಅಥವಾ ಟಿವಿಗಳನ್ನು ಬ್ಯಾರಕ್‌ಗಳಲ್ಲಿ ನಿರ್ದಿಷ್ಟ ಸಮಯದಲ್ಲಿ ಬಳಸುವ ಸೌಲಭ್ಯವನ್ನು ನೀಡಲಾಗಿದೆ. ಇನ್ನೂ ಕೆಲವೆಡೆ ಬಂದಿಗಳ ಬ್ಯಾಂಡ್ ಅಥವಾ ಬಂದಿಗಳ ನಾಟಕ ತಂಡಕ್ಕೆ ಅವಕಾಶವನ್ನು ಒದಗಿಸಿವೆ. ಇದು ಬಂದಿಗಳ ಆಸಕ್ತಿ ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿರುತ್ತದೆ. ಇನ್ನೂ ಕೆಲವು ಕಡೆ ಕ್ರಿಕೆಟ್, ಫುಟ್‌ಬಾಲ್, ವಾಲಿಬಾಲ್ ಮುಂತಾದವುಗಳನ್ನು ಅಥವಾ ಒಳಾಂಗಣ ಕ್ರೀಡೆಗಳಾದ ಕೇರಂ, ಚೆಸ್ ಇತ್ಯಾದಿಗಳನ್ನು ಆಡಲು ಬಂದಿಗಳಿಗೆ ಅನುಕೂಲ ಕಲ್ಪಿಸಲಾಗಿದೆ.

**41. ಬಂದಿಗಳಿಗೆ ಶಿಕ್ಷಣದ ಕೋರ್ಸುಗಳನ್ನು ಮುಂದುವರೆಸುವ ಅವಕಾಶವಿದೆಯೇ?**


ಹೌದು, ಬಂದಿಗಳಿಗೆ ತನ್ನ ಶಿಕ್ಷಣವನ್ನು ಮುಂದುವರೆಸುವ ಅಥವಾ ಪ್ರಾರಂಭಿಸುವ ಅವಕಾಶವಿರುತ್ತದೆ. ಯಾವುದೇ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಅವಕಾಶವನ್ನು ನೀಡಲಾಗಿದೆ. ಶಿಕ್ಷಣದ ಕೋರ್ಸುಗಳನ್ನು ತೆಗೆದುಕೊಂಡಿರುವ ಬಂದಿಗಳು ತಮ್ಮ ಕುಟುಂಬದಿಂದ ಅಥವಾ ಗೆಳೆಯರಿಂದ ಅಥವಾ ಸರ್ಕಾರ ಒದಗಿಸಿರುವ ಪುಸ್ತಕಗಳನ್ನು ಮತ್ತು ಬರಹ ಸಾಮಗ್ರಿಗಳನ್ನು ಪಡೆದುಕೊಳ್ಳಲು ಅಥವಾ ತಾವೇ ಖರೀದಿಸಲು ಅನುಮತಿ ಇದೆ. ಕೆಲವು ಕಾರಾಗೃಹಗಳು ಇಂದಿರಾಗಾಂಧಿ ನ್ಯಾಷನಲ್ ಓಪನ್ ಯೂನಿವರ್ಸಿಟಿ (ಇಗ್ನೊ), ವಯಸ್ಕರ ಶಿಕ್ಷಣ ಯೋಜನೆ ಮತ್ತು ಮಾಹಿತಿ ತಂತ್ರಜ್ಞಾನ (ಐಟಿ) ಕೋರ್ಸುಗಳ ಅಧ್ಯಯನ ಕೇಂದ್ರಗಳನ್ನು ಹೊಂದಿವೆ. ಬಂದಿಗಳು ತಮ್ಮ ಅಧ್ಯಯನವನ್ನು ಮುಂದುವರೆಸಲು ಕಾರಾಗೃಹ ಅಧಿಕಾರಿಗಳ ಅನುಮತಿಯನ್ನು ಪಡೆಯಬೇಕಾಗುತ್ತದೆ.

**42. ಕಾರಾಗೃಹದಲ್ಲಿರುವಾಗ ಬಂದಿಗಳು ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯಬಹುದೇ?**

ಹೌದು, ಬಂದಿಗಳು ಬ್ಯಾಂಕ್ ಖಾತೆಯನ್ನು ತೆರೆಯಲು ಅನುಮತಿ ನೀಡಲಾಗಿದೆ. ಕೆಲವು ರಾಜ್ಯಗಳು ಎಲ್ಲಾ ಬಂದಿಗಳಿಗೆ ಬ್ಯಾಂಕ್ ಖಾತೆಯನ್ನು ತೆರೆದಿವೆ. ಬ್ಯಾಂಕ್ ಖಾತೆಯನ್ನು ಮಜೂರಿಯ (ವೇತನ) ಠೇವಣಿ ಇಡಲು ಉಪಯೋಗಿಸಬಹುದು ಅಥವಾ ಸೌಲಭ್ಯ ಇರುವ ಕಡೆ ಬಂದಿಗಳು ಕ್ಯಾಂಟೀನ್‌ನಿಂದ ಅಗತ್ಯ ವಸ್ತುಗಳನ್ನು ಕೊಂಡುಕೊಳ್ಳಲು ಇದನ್ನು ಉಪಯೋಗಿಸಬಹುದು.

**43. ಕಾರಾಗೃಹದಲ್ಲಿರುವಾಗ ಬಂದಿಗಳು ಮತಚಲಾವಣೆ ಮಾಡಬಹುದೇ?**

ದಂಡಾದೇಶವಾಗಿರದ ಬಂದಿಗಳು ಕಾರಾಗೃಹದಲ್ಲಿದ್ದಾಗ ಮತಚಲಾಯಿಸಲು ಅವಕಾಶವಿಲ್ಲ. ಆದರೆ ಚುನಾವಣೆಯಲ್ಲಿ ಸ್ಪರ್ಧಿಸಬಹುದು.



## ಕಾನೂನು ಪ್ರಾತಿನಿಧ್ಯದ ಅವಕಾಶಗಳು

**44. ಬಂದಿಗಳಿಗೆ ವಕೀಲರನ್ನು ನೇಮಿಸಿಕೊಳ್ಳುವ ಹಕ್ಕಿದೆಯೇ?**

ಹೌದು, ಪ್ರತಿಯೊಬ್ಬ ಬಂದಿಯೂ ತನ್ನನ್ನು ಪ್ರತಿನಿಧಿಸುವಂತಹ ವಕೀಲರನ್ನು ನೇಮಿಸಿಕೊಳ್ಳುವ ಹಕ್ಕಿದೆ. ಬಂಧನ ಆಗುತ್ತಿದ್ದಂತೆಯೇ ಈ ಹಕ್ಕು ಬರುತ್ತದೆ. ವಕೀಲರು ವಿಚಾರಣೆಯ ಸಮಯದಲ್ಲಿ, ಜಾಮೀನಿಗೆ ಅರ್ಜಿಯನ್ನು ಹಾಕಲು ಮತ್ತು ಪ್ರತಿವಾದಕ್ಕೆ ಬಂದಿಯ ಸಾಕಷ್ಟು ಸಿದ್ಧತೆಯನ್ನು ಮಾಡಿಕೊಳ್ಳಲು ತಿಳಿಸಬಹುದು. ವಕೀಲರು ತಮ್ಮ ಕಕ್ಷಿದಾರನನ್ನು ಕಾರಾಗೃಹದಲ್ಲಿ ಭೇಟಿಯಾಗಿ ಅವರ ಪ್ರಕರಣದಲ್ಲಾಗುವಂತಹ ಬೆಳವಣಿಗೆಯನ್ನು ತಿಳಿಸಿ, ಅವರ ಪರ ವಾದಕ್ಕೆ ಸಿದ್ಧವಾಗಲು ಅವರೊಂದಿಗೆ ಚರ್ಚಿಸಬಹುದು.

**45. ವಕೀಲರನ್ನು ನೇಮಿಸಿಕೊಳ್ಳುವ ಸಾಮರ್ಥ್ಯವನ್ನು ಬಂದಿ ಹೊಂದಿಲ್ಲದಿದ್ದರೆ ಏನು ಮಾಡುವುದು?**

ಎಲ್ಲಾ ಬಂದಿಗಳು ಕಾನೂನು ಸೇವಾ ಪ್ರಾಧಿಕಾರದ ಆಕ್ಟ್ 1887 ರ ವಿಭಾಗ 12 (ಜಿ) ಪ್ರಕಾರ ರಾಜ್ಯ ಪ್ರಾಯೋಜಿತ ಕಾನೂನು ಸಹಾಯಕ್ಕೆ ಅರ್ಹರಾಗಿರುತ್ತಾರೆ. ಸಂಬಂಧಿಸಿದ ಕಾನೂನು ಸೇವಾ ಪ್ರಾಧಿಕಾರಿಗಳು ಬಂದಿಯ ಪ್ರತಿವಾದಕ್ಕಾಗಿ ವಕೀಲನನ್ನು ಗೊತ್ತುಪಡಿಸಬೇಕು. ಇದು ಹಾಜರುಪಡಿಸುವ ಮತ್ತು ವಿಚಾರಣಾ ಸಮಯದಲ್ಲಿ ಶುಲ್ಕರಹಿತವಾದ ಸೌಲಭ್ಯವಾಗಿರುತ್ತದೆ.

**46. ಕಾನೂನು ಸೇವಾ ಪ್ರಾಧಿಕಾರ ಎಂದರೇನು?**

ಕಾನೂನು ಸೇವಾ ಪ್ರಾಧಿಕಾರವನ್ನು ರಾಷ್ಟ್ರ, ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಹಂತಗಳಲ್ಲಿ ಅಭಿರಕ್ಷೆಯಲ್ಲಿರುವವರನ್ನೂ ಒಳಗೊಂಡಂತೆ ಎಲ್ಲಾ ಅರ್ಹ ವ್ಯಕ್ತಿಗಳಿಗೆ ಮುಕ್ತ ಕಾನೂನು ಸಹಾಯವನ್ನು ಒದಗಿಸಲು ಸರ್ಕಾರ ನೇಮಿಸಿದೆ. ಇದು ನ್ಯಾಯಾಲಯದ ಮುಂದೆ ಮೊದಲ ಬಾರಿ ಹಾಜರುಪಡಿಸಿದ ಪ್ರತಿಯೊಬ್ಬ ವ್ಯಕ್ತಿಗೂ ಬಂಧನ ಮಾಡಿದ 24 ಗಂಟೆಗಳೊಳಗಾಗಿ ವಕೀಲರನ್ನು ಒದಗಿಸುವ ಹೊಣೆಗಾರಿಕೆ ಹೊಂದಿದೆ. ಮೊದಲ ಬಾರಿಗೆ ನ್ಯಾಯಾಲಯಕ್ಕೆ ಬಂದಾಗ ಬಂದಿಗೆ ವಕೀಲರಿರದಿದ್ದರೆ ಮ್ಯಾಜಿಸ್ಟ್ರೇಟರು ಬಂದಿಯ ಪ್ರತಿವಾದಕ್ಕಾಗಿ ಕಾನೂನು ಸೇವಾ ಪ್ರಾಧಿಕಾರದ ವಕೀಲರನ್ನು ನೇಮಿಸುವುದು ಕಡ್ಡಾಯವಾಗಿದೆ.

ಈ ಎಲ್ಲಾ ಎಚ್ಚರಿಕೆಯ ಹೊರತಾಗಿಯೂ ವಕೀಲರಿಲ್ಲದೆ ಬಂದಿಯನ್ನು ಕಾರಾಗೃಹದಲ್ಲಿ ದಾಖಲುಮಾಡುವುದು ಅಥವಾ ನೇಮಿಸಲ್ಪಟ್ಟ ವಕೀಲರು ಬಾರದಿರುವುದು ಕಂಡುಬಂದಲ್ಲಿ, ಬಂದಿಯು ಕಾನೂನು ಸೇವಾ ಕೇಂದ್ರದ ಅಥವಾ ಕಾರಾಗೃಹದ ಅಧಿಕಾರಿಯನ್ನು ಸಂಪರ್ಕಿಸಬಹುದು. ಆಗ ಅವರು ಕಾನೂನು ಸೇವೆಗಳ ಸಹಾಯಕ್ಕಾಗಿ ಬಂದಿಗಳ ಮೂಲಕ ಅರ್ಜಿಯನ್ನು ಸಲ್ಲಿಸಿ ಸೂಕ್ತವಾದ ಕ್ರಮ ತೆಗೆದುಕೊಳ್ಳಬಹುದು.

**47. ಕಾನೂನು ಸೇವಾ ಪ್ರಾಧಿಕಾರದ ವಕೀಲರಿಗಾಗಿ ಬಂದಿಯು ಹೇಗೆ ಕೋರಬಹುದು?**

ಬಂದಿಗಳು ಕಾನೂನು ಸ್ವಯಂ ಸೇವಕರನ್ನು ಅಥವಾ ಕಾರಾಗೃಹದ ಕಾನೂನು

ಸೇವಾ ಕೇಂದ್ರಕ್ಕೆ ಭೇಟಿ ನೀಡುವಂತಹ ವಕೀಲರನ್ನು ಸಂಪರ್ಕಿಸಬಹುದು. ಇಲ್ಲವೇ, ಕಾನೂನು ಸೇವಾ ಪ್ರಾಧಿಕಾರದ ಗಮನಕ್ಕೆ ತರಲು ಕರ್ತವ್ಯದಲ್ಲಿರುವಂತಹ ಕಾರಾಗೃಹ ಅಧಿಕಾರಿಗಳನ್ನು ಅಥವಾ ಕರ್ತವ್ಯದಲ್ಲಿರುವಂತಹ ಸಂಬಂಧಿಸಿದ ಕಲ್ಯಾಣ ಸೇವಾ ಅಧಿಕಾರಿಯನ್ನು ಸಂಪರ್ಕಿಸಬೇಕು.

**48. ಕಾನೂನು ಸೇವಾ ಪ್ರಾಧಿಕಾರವು ಯಾವ ಯಾವ ಸೇವೆಗಳನ್ನು ಉಚಿತವಾಗಿ ಒದಗಿಸುತ್ತದೆ?**

**ಉಚಿತ ಕಾನೂನು ಸೇವೆಗಳು:**

(1) ನ್ಯಾಯಾಲಯಗಳ ಶುಲ್ಕ ಪಾವತಿ ಮತ್ತು ಇತರ ಎಲ್ಲಾ ಕಾರ್ಯಕಲಾಪಗಳ ಶುಲ್ಕ ಪಾವತಿ.

(2) ನ್ಯಾಯಾಲಯದಲ್ಲಿ ಬಂದಿಯ ಪ್ರಾತಿನಿಧಿತ್ವ ವಹಿಸುವಿಕೆ.

(3) ನ್ಯಾಯಾಲಯದ ಮೂಲಕ ಪ್ರಮಾಣೀಕರಿಸಿದ ಎಲ್ಲಾ ಆದೇಶಗಳು ಮತ್ತು ಅವಶ್ಯಕ ದಾಖಲೆಗಳನ್ನು ಪಡೆಯುವುದು.

(4) ಕಾನೂನು ಕ್ರಮಕ್ಕೆ ಸಂಬಂಧಿಸಿದ ಎಲ್ಲಾ ಮುದ್ರಿತ ಮತ್ತು ಅನುವಾದಿತ ಪತ್ರಗಳನ್ನು ಮತ್ತು ಪುಸ್ತಕಗಳನ್ನು ಒಳಗೊಂಡಂತೆ ಮೇಲ್ಮನವಿಯ ಸಿದ್ಧತೆಯ ಸಹಾಯವನ್ನು ಪಡೆಯಬಹುದು.

**49. ಕಾನೂನು ಸೇವಾ ಪ್ರಾಧಿಕಾರದ ವಕೀಲರಿಗೆ ಶುಲ್ಕ ಪಾವತಿಸಬೇಕೇ?**

ಇಲ್ಲ, ಕಾನೂನು ಸೇವಾ ಪ್ರಾಧಿಕಾರದ ವಕೀಲರಿಗೆ ಬಂದಿಗಳು ಹಣ ಸಂದಾಯ ಮಾಡಬೇಕಾಗಿಲ್ಲ. ವಕೀಲರು ಹಣವನ್ನು ಕೇಳಿದರೆ, ಬಂದಿಯು ಸಂಬಂಧಿಸಿದ ಕಾನೂನು ಸೇವಾ ಪ್ರಾಧಿಕಾರದ ಗಮನಕ್ಕೆ ತರಬೇಕು.

**50. ಬಂದಿಯು ತನಗಾಗಿ ಕಾನೂನು ಸೇವಾ ಪ್ರಾಧಿಕಾರದ ವಕೀಲರನ್ನು ನೇಮಿಸಲಾಗಿದೆ ಎಂದು ಹೇಗೆ ತಿಳಿಯುವನು?**


ವಕೀಲರ ನೇಮಕವಾದ ಮೇಲೆ, ಕಾನೂನು ಸೇವಾ ಪ್ರಾಧಿಕಾರವು ಕಾರಾಗೃಹದ ಆಡಳಿತ ಅಥವಾ ಕಾನೂನು ಸ್ವಯಂ ಸೇವಕರ ಅಥವಾ ಕಾರಾಗೃಹಕ್ಕೆ ಭೇಟಿ ನೀಡುವ ವಕೀಲರ ಮೂಲಕ ಇದನ್ನು ತಿಳಿಸಬೇಕು. ಬಂದಿಗೆ ನೀಡಲಾಗುವ ಪತ್ರದಲ್ಲಿ ವಕೀಲರ ಹೆಸರನ್ನು ಮತ್ತು ಸಂಬಂಧಿಸಿದ ಸಮರ್ಪಕ ವಿವರಗಳನ್ನು ತಿಳಿಸಿರಬೇಕು.

**51. ಬಂದಿಗಳು ತಮ್ಮ ಕೇಸಿನ ವಿವರಗಳನ್ನು ಚರ್ಚಿಸಲು ಹಾಗೂ ವಿಚಾರಣೆಗೆ ಸಿದ್ಧಗೊಳ್ಳಲು ವಕೀಲರನ್ನು ಭೇಟಿಯಾಗಬಹುದೇ?**

ಹೌದು, ತಮ್ಮ ಕೇಸನ್ನು ಚರ್ಚಿಸಲು, ಜಾಮೀನಿಗೆ ಅರ್ಜಿ ಸಲ್ಲಿಸಲು, ವಿಚಾರಣೆಗೆ ಸಿದ್ಧಗೊಳ್ಳಲು ಅಥವಾ ಮೇಲ್ಮನವಿ ಮಾಡಲು ಅಥವಾ ಅರ್ಜಿಯ ಪುನರ್ ಪರಿಶೀಲನೆಗೆ ಬಂದಿಯು ಕಾರಾಗೃಹದಲ್ಲಿ ತನ್ನ ವಕೀಲರನ್ನು ಭೇಟಿ ಆಗಬಹುದು. ಬಂದಿಗಳನ್ನು ವಿಚಾರಣೆಗಾಗಿ ಕೋರ್ಟಿಗೆ ಕರೆದುಕೊಂಡು ಹೋಗಿರುವಾಗಲೂ ಬಂದಿಯು ತನ್ನ ವಕೀಲರನ್ನು ಭೇಟಿಯಾಗಬಹುದು. ವೀಡಿಯೊ ಕಾನ್ಫರೆನ್ಸಿಂಗ್ ಮೂಲಕ ಬಂದಿಯನ್ನು ಹಾಜರುಪಡಿಸುತ್ತಿದ್ದರೆ, ವಿಚಾರಣೆಗೆ ಮೊದಲು ತಮ್ಮ ವಕೀಲರ ಭೇಟಿಗಾಗಿ ಬರವಣಿಗೆಯ ಮೂಲಕ ನ್ಯಾಯಾಲಯವನ್ನು ಕೇಳಿಕೊಳ್ಳಬಹುದು.

**52. ಕಾರಾಗೃಹ ಕಾನೂನು ಸೇವಾ ಪ್ರಾಧಿಕಾರದ ಕೇಂದ್ರ ಎಂದರೇನು?**

ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದ ನಿಯಮ–ನಿಬಂಧನೆಗಳ ಅನುಸಾರ ಭಾರತದ ಎಲ್ಲಾ ಕಾರಾಗೃಹಗಳಲ್ಲಿ ಕಾನೂನು ಸೇವಾ ಪ್ರಾಧಿಕಾರದ ಕೇಂದ್ರ ಇರುವುದು ಕಡ್ಡಾಯ. ಈ ಸೇವಾ ಕೇಂದ್ರಗಳು ಬಂದಿಗಳಿಗೆ ಕಾನೂನು ಸಹಾಯವನ್ನು ಒದಗಿಸುತ್ತದೆ. ಕಾನೂನು ಸ್ವಯಂಸೇವಕರು ಮತ್ತು ಕಾರಾಗೃಹಗಳಿಗೆ ಭೇಟಿ ನೀಡುವ ವಕೀಲರು ಅಧಿಕೃತವಾಗಿ ಕಾನೂನು ಸೇವಾ ಪ್ರಾಧಿಕಾರದಿಂದ ನೇಮಕಗೊಂಡಿರುತ್ತಾರೆ. ಕಾನೂನು ಸ್ವಯಂಸೇವಕರು ಸಮುದಾಯದ ಅಥವಾ ಬಂದಿಯ ಕಾನೂನು ಸ್ವಯಂ ಸೇವಕರುಗಳಾಗಿ ಇರುತ್ತಾರೆ ಅಥವಾ ಇವೆರಡಕ್ಕೂ ಸಂಬಂಧಿಸಿದವರಾಗಿರಬಹುದು. ಯಾವುದೇ ರೀತಿಯ ಕಾನೂನು ಸಹಾಯಕ್ಕೆ ಮಾತ್ರವಲ್ಲದೆ ಅವರ ವೈಯಕ್ತಿಕ ಸಿವಿಲ್ ವಿಷಯಗಳಿಗೂ ಕೂಡ ಬಂದಿಗಳು ಕಾರಾಗೃಹ ಕಾನೂನು ಸೇವೆಯ ಸಹಾಯವನ್ನು ಈ ಕೇಂದ್ರದ ಮೂಲಕ ಪಡೆಯಬಹುದು.




## ಕಾರಾಗೃಹಗಳಲ್ಲಿ ಶಿಸ್ತು

53. **ಕಾರಾಗೃಹಗಳಲ್ಲಿನ ಅಪರಾಧಗಳು ಮತ್ತು ಶಿಕ್ಷೆಗಳನ್ನು ಯಾವ ಕಾನೂನು ಮತ್ತು ನಿಯಮಾವಳಿಗಳು ನಿಯಂತ್ರಿಸುತ್ತವೆ?**

ಕಾರಾಗೃಹಗಳಲ್ಲಿನ ಅಪರಾಧಗಳು ಮತ್ತು ಅದಕ್ಕೆ ಸಂಬಂಧಿಸಿದ ಶಿಕ್ಷೆಗಳನ್ನು ಆಯಾ ರಾಜ್ಯಗಳ ಕಾರಾಗೃಹಗಳ ಕೈಪಿಡಿಗಳಲ್ಲಿ ವ್ಯಾಖ್ಯಾನಿಸಲಾಗಿದೆ. ಎಲ್ಲಾ ಬಂದಿಗಳಿಗೂ ಕಾರಾಗೃಹ ದಂಡನೆಯ ವಿರುದ್ಧದ ಹಕ್ಕಿದೆ. ಅಂದರೆ, ಬಂದಿಯು ಅಶಿಸ್ತಿನ ಆಪಾದನೆಗೆ ಒಳಗಾಗಿದ್ದರೆ,

i. ಬಂದಿಯ ನಿಯಮದ ಉಲ್ಲಂಘನೆಯ ಸ್ವರೂಪದ ಬಗ್ಗೆ ಅಧಿಕಾರಿಗಳು ನಿಖರವಾದ ಮಾಹಿತಿಯನ್ನು ನೀಡಬೇಕು.
ii. ಪ್ರತಿವಾದದ ಆಲಿಸುವಿಕೆ.
iii. ಶಿಸ್ತುಕ್ರಮದ ನಡಾವಳಿಗಳ ಬಗ್ಗೆ ಮಾಹಿತಿಯನ್ನು ನೀಡಬೇಕು.
iv. ನಿಯಮಾವಳಿಗಳ ಅನ್ವಯ ಮೇಲ್ಮನವಿ ಮಾಡಲು ಅವಕಾಶವನ್ನು ನೀಡಬೇಕು..

ಕಾರಾಗೃಹದ ಅಧಿಕಾರಿಗಳು ಬಂದಿಯ ಶಿಕ್ಷೆಯ ಪ್ರಮಾಣವನ್ನು ಪ್ರಕರಣದ ಸಂದರ್ಭ ಮತ್ತು ವಸ್ತುಸ್ಥಿತಿಗೆ ಅನುಗುಣವಾಗಿ ತೀರ್ಮಾನಿಸುತ್ತಾರೆ.

54. **ಯಾವ ಬಗೆಯ ಕಾರಾಗೃಹ ಶಿಕ್ಷೆಗಳನ್ನು ನೀಡಬಹುದು?**

ಕಾರಾಗೃಹ ಶಿಕ್ಷೆಯು ಸರಳ ಅಥವಾ ಕಠಿಣವಾಗಿರಬಹುದು. ಸರಳ ಶಿಕ್ಷೆಗಳು ಎಂದರೆ, ಎಚ್ಚರಿಕೆ ನೀಡುವಿಕೆ ಅಥವಾ ಸಾಮಾನ್ಯ ಅವಕಾಶಗಳ ಹಿಂತೆಗೆದುಕೊಳ್ಳುವಿಕೆ ಆಗಿರಬಹುದು. ಕಠಿಣ ಶಿಕ್ಷೆಗಳು ಎಂದರೆ, ಗಳಿಸಿದ ವಿನಾಯ್ತಿಗಳನ್ನು ಹಿಂಪಡೆಯುವುದು, ಮತ್ತೊಂದು ಕಾರಾಗೃಹಕ್ಕೆ ವರ್ಗಾವಣೆ ಮಾಡುವಿಕೆ, ಕಠಿಣ ಮೇಲ್ವಿಚಾರಣೆ ಮತ್ತು ಭದ್ರತೆ, ಬಂದಿಯ ಕಾರ್ಯದಿಂದ ಉಂಟಾಗಿರುವಂತಹ ನಷ್ಟವನ್ನು ಸರಿದೂಗಿಸುವುದು ಇತ್ಯಾದಿಗಳಾಗಿರುತ್ತವೆ. ಆದರೂ ಯಾವುದೇ ಶಿಕ್ಷೆಯನ್ನು ನೀಡುವಾಗ ಅಥವಾ ಹಕ್ಕುಗಳನ್ನು ಮೊಟಕುಗೊಳಿಸುವಾಗ ಮತ್ತು ಸೌಲಭ್ಯಗಳನ್ನು ನಿರಾಕರಣೆ ಮಾಡುವ ಮುನ್ನ ನ್ಯಾಯತೀರ್ಮಾನದ ಮೌಲ್ಯೀಕರಣ ಸಮರ್ಪಕವಾಗಿರಬೇಕು, ಇದಾಗದೇ ಯಾವುದೇ ರೀತಿಯ ದಂಡನೆಯನ್ನು ನೀಡುವಂತಿಲ್ಲ ಹಾಗೂ ಮತ್ತೊಂದು ಕಾರಾಗೃಹಕ್ಕೆ ವರ್ಗಾವಣೆಯನ್ನು ಮಾಡುವಂತಿಲ್ಲ. ಕಾರಾಗೃಹದ ಅಪರಾಧಗಳು ಮತ್ತು ದಂಡನೆಗಳ ಮಾಹಿತಿಯನ್ನು ಆಯಾ ರಾಜ್ಯದ ಕಾರಾಗೃಹ ಕೈಪಿಡಿಗಳಲ್ಲಿ ನೀಡಲಾಗಿದೆ. ಕೆಲವು

ರಾಜ್ಯಗಳಲ್ಲಿ ಕಾರಾಗೃಹ ಶಿಕ್ಷೆಯ ರೂಪವಾಗಿ ಏಕಾಂತ ಕಾರಾಗೃಹ ವಾಸದ ಶಿಕ್ಷೆಯನ್ನು ನೀಡುವ ಪದ್ಧತಿ ಜಾರಿಯಲ್ಲಿದೆ.

**55. ಏಕಾಂತ ಕಾರಾಗೃಹ ವಾಸ ಎಂದರೇನು?**

ಏಕಾಂತ ಕಾರಾಗೃಹ ವಾಸ ಎಂದರೆ, ಬಂದಿಯನ್ನು ದಿನದ 24 ಗಂಟೆ ಅಥವಾ ಹೆಚ್ಚು ಕಾಲ ಸಹ ಬಂದಿಗಳೊಂದಿಗೆ ಸಂಪರ್ಕವಿಲ್ಲದಂತೆ ಪ್ರತ್ಯೇಕಗೊಳಿಸುವ ಪ್ರಕ್ರಿಯೆಯಾಗಿದೆ. ಆಯಾ ರಾಜ್ಯಗಳ ಕಾರಾಗೃಹ ಕೈಪಿಡಿಗಳು ಕಾರಾಗೃಹದ ಅಧಿಕಾರಿಗಳಿಗೆ ಏಕಾಂತ ಕಾರಾಗೃಹ ಶಿಕ್ಷೆ ನೀಡುವ ಅಧಿಕಾರ ನೀಡಿದ್ದರೂ ಕೂಡ ಸರ್ವೋಚ್ಚ ನ್ಯಾಯಲಯದ ವಿವಿಧ ನಿರ್ದೇಶನಗಳ ಪ್ರಕಾರ ಅರ್ಹ ನ್ಯಾಯಾಲಯಗಳು ಮಾತ್ರ ಅದನ್ನು ವಿಧಿಸಬಹುದಾಗಿದೆ.

**56. ಬಂದಿಗಳನ್ನು ಅನಿಶ್ಚಿತ ಕಾಲದವರೆಗೂ ಏಕಾಂತ ಕಾರಾಗೃಹ ವಾಸದಲ್ಲಿಡಬಹುದೇ?**

ಭಾರತ ದಂಡ ಸಂಹಿತೆ 1860 ರ ಪ್ರಕಾರ ಏಕಾಂತ ಕಾರಾಗೃಹ ವಾಸದ ಅವಧಿಯು 14 ದಿನಗಳಿಗಿಂತ ಹೆಚ್ಚಾಗಿರಬಾರದು ಮತ್ತು ಯಾವುದೇ ಎರಡು ಏಕಾಂತ ಕಾರಾಗೃಹ ವಾಸದ ನಡುವೆ ಅಷ್ಟೇ ದಿನಗಳ ಅಂತರವಿರಬೇಕು ಎನ್ನುತ್ತದೆ. 30 ದಿನಗಳಿಗಿಂತ ಹೆಚ್ಚಿನ ಏಕಾಂತ ಕಾರಾಗೃಹ ವಾಸವನ್ನು ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರ ಅನುಮತಿ ಇಲ್ಲದೆ ನೀಡುವಂತಿಲ್ಲ. ನ್ಯಾಯಾಲಯ ನೀಡಿರುವ ಯಾವುದೇ ಏಕಾಂತ ಕಾರಾಗೃಹ ವಾಸದ ಒಟ್ಟು ಅವಧಿಯು ಮೂರು ತಿಂಗಳಿಗಿಂತ ಹೆಚ್ಚಿರಬಾರದು.

**57. ಪ್ರತ್ಯೇಕಿತ ವಾರ್ಡ್ ಮತ್ತು ಏಕಾಂತ ಕಾರಾಗೃಹ ವಾಸ ಎರಡೂ ಒಂದೇ ಆಗಿದೆಯೇ?**

ಇಲ್ಲ. ಅವು ಬೇರೆ ಬೇರೆಯಾದ ಪ್ರಕ್ರಿಯೆಯಾಗಿದೆ. ಪ್ರತ್ಯೇಕಿತ ವಾರ್ಡ್‌ನಲ್ಲಿ ಏಕಾಂತತೆ, ಸುರಕ್ಷತೆ ಅಥವಾ ಇನ್ನಿತರ ಕಾರಣಗಳಿಗಾಗಿ ಬಂದಿಯನ್ನು ಪ್ರತ್ಯೇಕವಾಗಿಡುವ ವ್ಯವಸ್ಥೆಯಾಗಿದೆ. ಅಂತಹ ಬಂದಿಗಳು ಏಕಾಂತ ಕಾರಾಗೃಹ ವಾಸದಲ್ಲಿರುವಂತಹ ನಿರ್ಬಂಧಗಳನ್ನು ಹೊಂದಿರುವುದಿಲ್ಲ.

**58. ಬಂದಿಗಳನ್ನು ದೈಹಿಕವಾಗಿ ಶಿಕ್ಷಿಸುವುದು ಮತ್ತು ಸಂಕೋಲೆಯಲ್ಲಿ ಬಂಧಿಸುವುದಕ್ಕೆ ಒಳಪಡಿಸಬಹುದೇ?**

ಇಲ್ಲ, ಯಾವುದೇ ಬಂದಿಯನ್ನು ದೈಹಿಕವಾಗಿ ಶಿಕ್ಷಿಸುವ, ಹೊಡೆಯುವ ಅಥವಾ ಸಂಕೋಲೆಯಲ್ಲಿ ಬಂಧಿಸುವಂತಹ ಪ್ರಕ್ರಿಯೆಯು ಕಾನೂನುಬಾಹಿರವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಭಾರತದ ಸರ್ವೋಚ್ಚ ನ್ಯಾಯಲಯದಿಂದ ಅನೇಕ ನಿರ್ದೇಶನಗಳಿದ್ದು ಅವು ಅಂತಹ ಶಿಕ್ಷೆಗಳನ್ನು ನಿಷೇಧಿಸುತ್ತವೆ. ಆದರೂ ಬಹುತೇಕ ರಾಜ್ಯಗಳು ಕಾರಾಗೃಹ ಕಾನೂನುಗಳನ್ನು ಪರಿಷ್ಕರಿಸಿಲ್ಲ ಹಾಗೂ ಸದರಿ ಶಿಕ್ಷೆಗಳನ್ನು ಪ್ರಸ್ತಾಪಿಸುವುದನ್ನು ಮುಂದುವರೆಸಿವೆ. ತನಗೆ ನೀಡಿರುವಂತಹ ಶಿಕ್ಷೆಗಳನ್ನು ಬಂದಿಯು ತನ್ನ ವಕೀಲರಿಗೆ ತಿಳಿಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಇದರ ಕುರಿತಾಗಿ ಪ್ರಶ್ನಿಸಬಹುದು ಮತ್ತು ಕಾರಾಗೃಹಕ್ಕೆ ಬರುವ ಸಂದರ್ಶಕ ಮಂಡಳಿಯ ಸದಸ್ಯರ ಗಮನಕ್ಕೂ ಕೂಡ ತರಬಹುದು.

**59. ಕಾರಾಗೃಹದ ಶಿಸ್ತು ನಿರ್ವಹಣೆಗೆ ಬಲ ಪ್ರಯೋಗವನ್ನು ಮಾಡಬಹುದೇ?**


ಬಲ ಪ್ರಯೋಗ ಅಥವಾ ಆಯುಧಗಳ ಬಳಕೆಯನ್ನು ಕೆಲವು ಸಂದರ್ಭಗಳಲ್ಲಿ ಮಾತ್ರ ಅನುಮತಿಸಲಾಗಿದೆ. ಅವುಗಳೆಂದರೆ,

(1) ಬಂದಿಯು ಪರಾರಿಯಾಗುತ್ತಿದ್ದು, ಕಾರಾಗೃಹ ಸಿಬ್ಬಂದಿಗಳಿಗೆ ಅದನ್ನು ತಪ್ಪಿಸಲು ಆಯುಧಗಳ ಬಳಕೆ ಅನಿವಾರ್ಯವಾದಾಗ.

(2) ಕಾರಾಗೃಹದ ಬಾಗಿಲು ಮುರಿಯಲು ಅಥವಾ ಗೋಡೆಯನ್ನು ಒಡೆಯಲು ಪ್ರಯತ್ನಿಸುತ್ತಿರುವಾಗ.

(3) ಸಾವು ಅಥವಾ ಗಂಭೀರ ಅಪಾಯಕ್ಕೆ ಒಳಗಾಗುವಂತೆ ಕಾರಾಗೃಹ ಸಿಬ್ಬಂದಿಗಳು ಅಥವಾ ಇತರರ ವಿರುದ್ಧ ಹಿಂಸಾತ್ಮಕ ಕ್ರಿಯೆಯಲ್ಲಿ ತೊಡಗಿದ್ದಾಗ ಮಾತ್ರವೇ ಬಂದಿಗಳ ಮೇಲೆ ಬಲ ಪ್ರಯೋಗ ಅಥವಾ ಆಯುಧಗಳ ಬಳಕೆ ಮಾಡಬಹುದು.

ಇದಕ್ಕೂ ಮೊದಲು ಬಂದಿಗಳಿಗೆ ಸ್ಪಷ್ಟವಾದ ಹಾಗೂ ಬಲವಾದ ಎಚ್ಚರಿಕೆಯನ್ನು ನೀಡಿದ ನಂತರವೇ ಬಲ ಪ್ರಯೋಗ ಅಥವಾ ಆಯುಧಗಳನ್ನು ಬಳಸಬಹುದು. ಕಾರಾಗೃಹ ಸಿಬ್ಬಂದಿಗಳು ಉದ್ದೇಶಿತ ಅಪರಾಧವನ್ನು ಎಸಗದಂತೆ ತಡೆಯಲು, ಕನಿಷ್ಠ ಬಲಪ್ರಯೋಗವನ್ನು ಉಪಯೋಗಿಸುವ ಮೊದಲು ಈ ಮೇಲಿನ ಎಲ್ಲಾ ಅಂಶಗಳನ್ನು ಖಾತರಿಮಾಡಿಕೊಳ್ಳಬೇಕು.




## ಕುಂದು ಕೊರತೆಗಳ ಅಹವಾಲು ಮತ್ತು ಕಾರಾಗೃಹಗಳ ಮೇಲ್ವಿಚಾರಣೆ

**60. ಕಾರಾಗೃಹಗಳಲ್ಲಿ ಎದುರಾಗುವ ಯಾವುದೇ ಸಮಸ್ಯೆಗಳ ಬಗ್ಗೆ ಬಂದಿಗಳು ದೂರನ್ನು ನೀಡಬಹುದೇ?**

ಹೌದು. ಯಾವುದೇ ಬಂದಿಯು ಕಾರಾಗೃಹ ಸಿಬ್ಬಂದಿಗಳ ಕೆಟ್ಟ ನಡವಳಿಕೆ, ಸಹಬಂದಿಗಳ ಗೂಂಡಾಗಿರಿ, ವೈದ್ಯಕೀಯ ನೆರವು ನೀಡದಿರುವ ಬಗ್ಗೆ, ಕಾನೂನು ಸೇವೆಯಲ್ಲಿನ ಸಮಸ್ಯೆಗಳು ಅಥವಾ ಆಹಾರ ಅಥವಾ ಇನ್ನಿತರ ಸಮಸ್ಯೆಗಳ ಬಗ್ಗೆ ಸೂಕ್ತ ರೀತಿಯಲ್ಲಿ ಅಧಿಕಾರಿಗಳಲ್ಲಿ ದೂರು ನೀಡಬಹುದು.

**61. ಯಾವ ಅಧಿಕಾರಿಗಳಿಗೆ ಬಂದಿಗಳು ದೂರನ್ನು ಸಲ್ಲಿಸಬಹುದು?**

ಕಾರಾಗೃಹದ ಯಾವುದೇ ಹಿರಿಯ ಅಧಿಕಾರಿಗಳಿಗೆ, ಕಾರಾಗೃಹಗಳ ಇನ್ಸಪೆಕ್ಟರ್ ಜನರಲ್‌ಗೆ, ಸರ್ಕಾರಕ್ಕೆ ಅಥವಾ ನ್ಯಾಯಾಲಯಕ್ಕೆ ದೂರು ಸಲ್ಲಿಸಬಹುದು. ಕಾರಾಗೃಹಗಳ ಮೇಲ್ವಿಚಾರಣೆಗಾಗಿಯೇ ಇರುವಂತಹ ಸಂದರ್ಶಕರ ಮಂಡಳಿಯ ಸದಸ್ಯರಿಗೆ ಅಥವಾ ತಮ್ಮ ವಕೀಲರಿಗೆ ದೂರು ಸಲ್ಲಿಸಬಹುದು. ತಮ್ಮ ದೂರುಗಳನ್ನು ತಿಂಗಳಿಗೊಮ್ಮೆ ಕಾರಾಗೃಹಕ್ಕೆ ಭೇಟಿ ನೀಡುವ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಅಥವಾ ಜಿಲ್ಲಾ ಕಾನೂನು ಸೇವೆ ಪ್ರಾಧಿಕಾರದ ಕಾರ್ಯದರ್ಶಿಗಳು ಅಥವಾ ತಾಲ್ಲೂಕು ಕಾನೂನು ಸೇವೆ ಮಂಡಳಿ ಅಥವಾ ಇನ್ನಿತರೆ ಯಾವುದೇ ನ್ಯಾಯಾಧಿಕಾರಿಗಳಿಗೆ ಸಲ್ಲಿಸಬಹುದು.

**62. ಕುಂದು ಕೊರತೆಗಳ (ಅಹವಾಲುಗಳ) ಪರಿಹಾರ ವ್ಯವಸ್ಥೆ ಎಂದರೇನು?**

2016 ರ ಮಾದರಿ ಕಾರಾಗೃಹ ಕೈಪಿಡಿಯು, ಪ್ರತೀ ಕಾರಾಗೃಹವೂ ಒಂದು ಕ್ರಿಯಾಶೀಲವಾದ ಕುಂದುಕೊರತೆಗಳ ಪರಿಹಾರ ವ್ಯವಸ್ಥೆ (Grievance Redressal System) ಯನ್ನು ಬಂದಿಗಳಿಗಾಗಿ ಹೊಂದಿರಲೇಬೇಕು ಎಂಬುದನ್ನು

ಕಡ್ಡಾಯಗೊಳಿಸಿದೆ. ಇದರ ಜೊತೆಗೆ ಬಂದಿಗಳು ತಮ್ಮ ಅಹವಾಲುಗಳನ್ನು ಸಲ್ಲಿಸಲು ಕಾರಾಗೃಹಗಳ ಕೇಂದ್ರ ಭಾಗದಲ್ಲಿ ಹಾಗೂ ಅನುಕೂಲಕರ ಸ್ಥಳದಲ್ಲಿ 'ದೂರುಪೆಟ್ಟಿಗೆ' ಯನ್ನು ಇರಿಸಲು ಸೂಚಿಸುತ್ತದೆ. ದೂರು ಪೆಟ್ಟಿಗೆಯನ್ನು ಬೀಗಹಾಕಿ ಭದ್ರಪಡಿಸಿ, ಅದರ ಬೀಗದ ಕೀಲಿಗಳನ್ನು ಸಹಾಯಕ ಅಧೀಕ್ಷಕರ ಸುಪರ್ದಿಯಲ್ಲಿ ಮಾತ್ರ ಇರಬೇಕೆಂದು ಸೂಚಿಸುತ್ತದೆ. ಇದೇ ರೀತಿಯ ದೂರು ಪೆಟ್ಟಿಗೆಗಳನ್ನು ಕಾನೂನು ಸೇವಾ ಪ್ರಾಧಿಕಾರದ ಅಧಿಕಾರಿಗಳಿಂದ ಸ್ಥಾಪಿಸಿದ್ದು, ಅದರ ಬೀಗದ ಕೀಲಿಗಳು ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಬಳಿಯಲ್ಲಿ ಇರಬೇಕೆಂದು ತಿಳಿಸುತ್ತದೆ.

**63. ಕಾರಾಗೃಹಗಳನ್ನು ಯಾರು ಪರಿವೀಕ್ಷಿಸಬಹುದು?**

ಕಾರಾಗೃಹಗಳ ಮತ್ತು ದಂಡನೀಯ ಸೇವೆಗಳ ನಿಯತಕ್ರಮ ಪರಿವೀಕ್ಷಣೆಗಳು ಎರಡು ಹಂತದ ವ್ಯವಸ್ಥೆಯಾಗಿದೆ. ದಂಡಾದೇಶಗಳು ಮತ್ತು ತಿದ್ದುಪಡಿ ಸೇವೆಗಳನ್ನು ಯಶ್ವಸಿಯಾಗಿ ನಿರ್ವಹಣೆಮಾಡುವುದರ ಜೊತೆಗೆ, ಅಸ್ತಿತ್ವದಲ್ಲಿರುವಂತಹ ನೀತಿ-ನಿಯಮಾವಳಿಗಳಿಗೆ ಅನುಗುಣವಾಗಿ ಕಾರಾಗೃಹಗಳನ್ನು ನಿರ್ವಹಿಸಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದರ ಮೂಲಕ ಬಂದಿಗಳ ಹಕ್ಕುಗಳನ್ನು ರಕ್ಷಿಸುವುದು ಇದರ ಉದ್ದೇಶವಾಗಿದೆ. ಕಾರಾಗೃಹದ ಪರಿವೀಕ್ಷಣಾ ಕಾರ್ಯವಿಧಾನಗಳು ಈ ಕೆಳಗಿನವುಗಳನ್ನು ಹೊಂದಿರಬೇಕು.

a. ರಾಜ್ಯ ಕಾರಾಗೃಹ ಇಲಾಖೆಯಿಂದ ನಿರ್ವಹಿಸಲ್ಪಡುವ ಆಂತರಿಕ ಅಥವಾ ಆಡಳಿತಾತ್ಮಕ ಪರಿವೀಕ್ಷಣೆ.

b. ಕಾರಾಗೃಹ ಆಡಳಿತದಿಂದ ಹೊರತಾದ ಒಂದು ಸ್ವತಂತ್ರವಾದ ಬಾಹ್ಯ ಪರಿವೀಕ್ಷಣೆ. ಈ ಬಾಹ್ಯ ಪರಿವೀಕ್ಷಣೆ ಒಂದು ಸಮರ್ಥ ಅಂತರಾಷ್ಟ್ರೀಯ ಅಥವಾ ವಲಯ ಸಂಸ್ಥೆಗಳನ್ನು ಒಳಗೊಂಡಿರಬಹುದು.

**64. ಕಾರಾಗೃಹ ಪರಿವೀಕ್ಷಣೆಗಳನ್ನು ಯಾವ ಬಾಹ್ಯ ವ್ಯಕ್ತಿ/ಸಂಸ್ಥೆಗಳು ಮಾಡಬಹುದು?**

ಅನೇಕ ಸಂಘ-ಸಂಸ್ಥೆಗಳು ಕಾರಾಗೃಹವನ್ನು ನಿಯತಕ್ರಮವಾಗಿ ಭೇಟಿ ಮಾಡಬಹುದಾಗಿದೆ. ಇವುಗಳಲ್ಲಿ ಕಾನೂನು ಅಧಿಕಾರಿಗಳು (ನಿರ್ದಿಷ್ಟವಾಗಿ ಜಿಲ್ಲಾ ನ್ಯಾಯಾಧೀಶರು, ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದ ಉನ್ನತ ನ್ಯಾಯಾಧಿಕಾರಿಗಳು/ನ್ಯಾಯಾಧೀಶರು), ಸಂದರ್ಶಕ ಮಂಡಳಿಯ ಸದಸ್ಯರು (BOV), ಪದನಿಮಿತ್ತ (Ex-officio) ಮತ್ತು ಅಧಿಕಾರೇತರ (Non-official) ಸಂದರ್ಶಕ ಮಂಡಳಿಯ ಸದಸ್ಯರು, ವಿಚಾರಣಾ ಬಂದಿಗಳ ಪುನರ್‌ಪರಿಶೀಲನಾ ಸಮಿತಿಯ ಸದಸ್ಯರು (UTRC), ರಾಷ್ಟ್ರೀಯ ಮತ್ತು ರಾಜ್ಯ ಕಾನೂನು ಸೇವಾ ಪ್ರಾಧಿಕಾರಗಳು (NALSA/SLSA) ಮತ್ತು ರಾಷ್ಟ್ರೀಯ ಮತ್ತು ರಾಜ್ಯ ಮಾನವ ಹಕ್ಕುಗಳ ಆಯೋಗಗಳು ಸೇರಿಸಲ್ಪಟ್ಟಿವೆ.

**65. ಸಂದರ್ಶಕ ಮಂಡಳಿಯ (BOVs) ಸದಸ್ಯರುಗಳು ಯಾರು?**

ಸಂದರ್ಶಕ ಮಂಡಳಿಯ ರಚನೆಯು ಆಯಾ ರಾಜ್ಯಗಳ ಕಾರಾಗೃಹ ನಿಯಮಗಳಿಗನುಸಾರವಾಗಿ ವ್ಯತ್ಯಾಸವಾಗುವುದನ್ನು ಕಾಣಬಹುದು. ಸಂದರ್ಶಕ ಮಂಡಳಿಯಲ್ಲಿ ಈ ಕೆಳಕಂಡವರನ್ನು 2016 ರ ಮಾದರಿ ಕಾರಾಗೃಹ ಕೈಪಿಡಿ ಅನ್ವಯ ನಿಯೋಜಿಸಲಾಗುತ್ತದೆ.

**ಅಧಿಕೃತ ಸದಸ್ಯರು:** ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು ಅಥವಾ ಉಪ-ವಿಭಾಗ ನ್ಯಾಯಿಕ ಮ್ಯಾಜಿಸ್ಟ್ರೇಟ್, ಜಿಲ್ಲಾ ದಂಡಾಧಿಕಾರಿಗಳು/ಜಿಲ್ಲಾಧಿಕಾರಿಗಳು, ಉಪ-ವಿಭಾಗಾಧಿಕಾರಿಗಳು, ಜಿಲ್ಲಾ ಪೊಲೀಸ್ ಅಧೀಕ್ಷಕರು, ಆರೋಗ್ಯ ಇಲಾಖೆಯ ಮುಖ್ಯ ವೈದ್ಯಾಧಿಕಾರಿಗಳು, ಕಾರ್ಯನಿರ್ವಾಹಕ ಇಂಜಿನಿಯರ್/ಸಹಾಯಕ ಇಂಜಿನಿಯರ್, ಜಿಲ್ಲಾ ಶಿಕ್ಷಣಾಧಿಕಾರಿಗಳು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು, ಜಿಲ್ಲಾ ಉದ್ಯೋಗ ಅಧಿಕಾರಿಗಳು, ಜಿಲ್ಲಾ ಕೃಷಿ ಅಧಿಕಾರಿಗಳು ಮತ್ತು ಜಿಲ್ಲಾ ಕೈಗಾರಿಕಾ ಅಧಿಕಾರಿಗಳು.

**ಅಧಿಕಾರೇತರ ಸದಸ್ಯರು:** ಇದರಲ್ಲಿ ರಾಜ್ಯ ಶಾಸನ ಸಭೆಯ ಮೂರು ಸದಸ್ಯರು ಇರುತ್ತಾರೆ. ಅದರಲ್ಲಿ ಒಬ್ಬರು ಮಹಿಳೆಯಾಗಿದ್ದು ರಾಜ್ಯ ಮಾನವ ಹಕ್ಕು ಆಯೋಗದಿಂದ ನಾಮನಿರ್ದೇಶನಗೊಂಡಿರುತ್ತಾರೆ. ರಾಜ್ಯ ಅಥವಾ ಉಪ-ವಿಭಾಗದಿಂದ ಇಬ್ಬರು ಸಾಮಾಜಿಕ ಕಾರ್ಯಕರ್ತರು ನಾಮನಿರ್ದೇಶನಗೊಳ್ಳುತ್ತಾರೆ, ಇವರಲ್ಲಿ ಕಾರಾಗೃಹದ ಆಡಳಿತ ಮತ್ತು ಕಾರಾಗೃಹದ ಬಂದಿಗಳ ಯೋಗಕ್ಷೇಮದಲ್ಲಿ ಆಸಕ್ತಿ ಇರುವಂತಹ ಒಬ್ಬ ಮಹಿಳಾ ಸದಸ್ಯೆ ಮಾತ್ರವಲ್ಲದೆ ವೈದ್ಯಕೀಯ, ಕಾನೂನು ಹಾಗೂ ಆಪ್ತ ಸಲಹಾ ಕ್ಷೇತ್ರಗಳಿಂದಲೂ

ಅಧಿಕಾರಿಗಳನ್ನು ನಿಯೋಜಿಸಬಹುದು. ಉಪಕಾರಾಗೃಹ, ಜಿಲ್ಲಾ ಕಾರಾಗೃಹ ಮತ್ತು ಕೇಂದ್ರ ಕಾರಾಗೃಹಗಳಿಗೆ ನೇಮಿಸಲ್ಪಡುವ ಅಧಿಕಾರೇತರ ಸದಸ್ಯರ ಸಂಖ್ಯೆಯಲ್ಲಿ ವ್ಯತ್ಯಾಸವಾಗುವುದೇ ಅಲ್ಲದೆ ಅವರ ಅಧಿಕಾರವು ನಿಗಧಿತ ಅವಧಿಯದ್ದಾಗಿರುತ್ತದೆ.

**66. ಸಂದರ್ಶಕ ಮಂಡಳಿಯ (BOVs) ಸದಸ್ಯರುಗಳ ಕಾರ್ಯಗಳೇನು?**

ಕಾರಾಗೃಹದ ಪರಿಸ್ಥಿತಿಗಳನ್ನು ಪರೀಕ್ಷಿಸುವ, ನಿಯತಕಾಲಿಕವಾಗಿ ಭೇಟಿಮಾಡಿ ಬಂದಿಗಳ ಅಹವಾಲುಗಳನ್ನು ಸ್ವೀಕರಿಸಿ ಮತ್ತು ಅದನ್ನು ಪರಿಹರಿಸುವ ಮತ್ತು ಕಾರಾಗೃಹದ ಪರಿಸ್ಥಿತಿ ಸುಧಾರಿಸಲು ಅಗತ್ಯ ಶಿಫಾರಸ್ಸುಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುವ ಕಾರ್ಯಕ್ಕಾಗಿ ನಿಯೋಜಿಸಲ್ಪಟ್ಟಿರುತ್ತಾರೆ.

ಈ ಸಮಿತಿಯು, ಕಾರಾಗೃಹಗಳಲ್ಲಿನ ಸೌಲಭ್ಯ (ಕೊಠಡಿ/ಬ್ಯಾರಕ್, ಕಾರ್ಖಾನೆ ವಿಭಾಗ ಮತ್ತು ಇತರ ಕಟ್ಟಡ) ಗಳನ್ನು, ಕಾರಾಗೃಹ ಆಹಾರದ ಗುಣಮಟ್ಟ, ಕಾರಾಗೃಹದಲ್ಲಿನ ಅಡುಗೆ ಮನೆ, ಆಸ್ಪತ್ರೆ, ನೀರು ಸರಬರಾಜು, ಶೌಚಾಲಯ ವ್ಯವಸ್ಥೆ, ಔಷಧಿಗಳ ಲಭ್ಯತೆ, ಆಸ್ಪತ್ರೆಯ ನಿರ್ವಹಣೆ, ವೈದ್ಯಕೀಯ ನಿರ್ವಹಣೆ, ಔದ್ಯೋಗಿಕ ತರಬೇತಿ, ಸಾಕ್ಷರತೆ, ಗ್ರಂಥಾಲಯ ಸೌಲಭ್ಯ, ಭದ್ರತಾ ವ್ಯವಸ್ಥೆ, ಕಾರಾಗೃಹ ಶಿಕ್ಷೆ ಮುಂತಾದವುಗಳನ್ನು ಪರಿವೀಕ್ಷಿಸುತ್ತದೆ. ಬಂದಿಗಳ ವೈಯಕ್ತಿಕ ಮತ್ತು ಸಾಮೂಹಿಕ ಅಹವಾಲುಗಳನ್ನು ಆಲಿಸಲಾಗುತ್ತದೆ ಮಾತ್ರವಲ್ಲದೆ, ಪರಿಹಾರಗಳನ್ನು ಕೂಡ ಪರಿವೀಕ್ಷಿಸಲಾಗುತ್ತದೆ. ಕಾರಾಗೃಹದ ದಾಖಲೆಗಳನ್ನು ಮೌಲ್ಯಮಾಪನ ಮಾಡಿ, ಕಾನೂನು ಕ್ರಮಗಳನ್ನು ಸರಿಯಾಗಿ ಪರಿಪಾಲಿಸಲಾಗುತ್ತಿದೆಯೇ ಎಂಬುದನ್ನು ತಮ್ಮ ನಿಯತಕಾಲಿಕ ಭೇಟಿಗಳಲ್ಲಿ ಪರಿವೀಕ್ಷಿಸಿ, ತಿದ್ದುಪಡಿ ಕಾರ್ಯಗಳಿಗೆ ಅಗತ್ಯ ಶಿಫಾರಸ್ಸುಗಳನ್ನು ನೀಡುತ್ತದೆ. ಈ ಸಮಿತಿಯ ಚಟುವಟಿಕೆಗಳು ಕಾರಾಗೃಹಗಳಲ್ಲಿನ ಆಡಳಿತಾತ್ಮಕ ಕಾರ್ಯಗಳಲ್ಲಿ ಪಾರದರ್ಶಕತೆ ಮತ್ತು ಮುಕ್ತ ವಾತಾವರಣವನ್ನು ಸೃಷ್ಟಿಸಲು ಸಹಕಾರಿಯಾಗಿದೆ.

**67. ವಿಚಾರಣಾಬಂದಿ ಪುನರ್‌ಪರಿಶೀಲನಾ ಸಮಿತಿ (UTRC) ಎಂದರೇನು?**

ಭಾರತದಾದ್ಯಂತ ಅಸ್ತಿತ್ವದಲ್ಲಿರುವಂತಹ 1382 ಕಾರಾಗೃಹಗಳಲ್ಲಿನ ಅಮಾನವೀಯ ಪರಿಸ್ಥಿತಿಗೆ ಸಂಬಂಧಿಸಿದಂತೆ ಏಪ್ರಿಲ್ 2015 ರಲ್ಲಿನ ಮನವಿ ಅರ್ಜಿಯ ಅನ್ವಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ವಿಚಾರಣಾಬಂದಿ ಪುನರ್ ಪರಿಶೀಲನಾ ಸಮಿತಿಯನ್ನು ರಚಿಸಲಾಯಿತು. ವಿಚಾರಣಾಬಂದಿ ಪುನರ್ ಪರಿಶೀಲನಾ ಸಮಿತಿಯ ಕರ್ತವ್ಯಗಳೆಂದರೆ, ಅನಾವಶ್ಯಕವಾಗಿ ಬಂಧನದಲ್ಲಿರುವ ವಿಚಾರಣಾ ಬಂದಿಗಳನ್ನು ಗುರುತಿಸುವುದು ಹಾಗೂ ಅಂತಹವರ ಬಿಡುಗಡೆಗೆ ಸೂಕ್ತ ಶಿಫಾರಸ್ಸುಗಳನ್ನು ಮಾಡುವುದು. ಈ ಸಮಿತಿಯು ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಸೇರಬೇಕು.

**68. ವಿಚಾರಣಾಬಂದಿ ಪುನರ್‌ಪರಿಶೀಲನಾ ಸಮಿತಿಯ ಸದಸ್ಯರು ಯಾರು?**

ವಿಚಾರಣಾಬಂದಿ ಪುನರ್‌ಪರಿಶೀಲನಾ ಸಮಿತಿಯು ಪ್ರತಿ ಜಿಲ್ಲೆಯಲ್ಲೂ ಅಸ್ತಿತ್ವದಲ್ಲಿದ್ದು, ಐದು ಸದಸ್ಯರ ಸಮಿತಿಯನ್ನು ಒಳಗೊಂಡಿರುತ್ತದೆ. ಅವರಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು (ಅಧ್ಯಕ್ಷರು), ಜಿಲ್ಲಾ ದಂಡಾಧಿಕಾರಿಗಳು, ಪೊಲೀಸ್ ಅಧೀಕ್ಷಕರು, ಕಾರಾಗೃಹದ ಉನ್ನತ ಅಧಿಕಾರಿ ಮತ್ತು ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಮೊದಲಾದವರು.

**69. ವಿಚಾರಣಾಬಂದಿ ಪುನರ್‌ಪರಿಶೀಲನಾ ಸಮಿತಿಯು ಎಂತಹ ವರ್ಗಗಳ ಪ್ರಕರಣಗಳನ್ನು ಪರಿಶೀಲಿಸುತ್ತದೆ?**

ವಿಚಾರಣಾಬಂದಿ ಪುನರ್‌ಪರಿಶೀಲನಾ ಸಮಿತಿಯಿಂದ ಈ ಕೆಳಕಂಡ ಬಂದಿ ವರ್ಗದವರು ಪ್ರಕರಣಗಳ ಪುನರ್‌ಪರಿಶೀಲನೆಗೆ ಅರ್ಹರು:

i. 1973ರ ದಂಡ ಪ್ರಕ್ರಿಯಾ ಸಂಹಿತೆಯ (CrPC) ಸೆಕ್ಷನ್ 436ಎ ಅಡಿಯಲ್ಲಿನ ವಿಚಾರಣಾ ಬಂದಿಗಳು ಅರ್ಹರಾಗಿರುತ್ತಾರೆ.

ii. 1973ರ ದಂಡ ಪ್ರಕ್ರಿಯಾ ಸಂಹಿತೆಯ (CrPC) ಸೆಕ್ಷನ್ 436 ರ ಅಡಿಯಲ್ಲಿನ ವಿಚಾರಣಾ ಬಂದಿಗಳು ಅರ್ಹರಾಗಿರುತ್ತಾರೆ.

iii. ನ್ಯಾಯಾಲಯದಿಂದ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುವ, ಆದರೆ ಯುಕ್ತವಾದ ಜಾಮೀನುದಾರಿಕೆ (ಷ್ಯೂರಿಟಿ) ಒದಗಿಸಲು ಸಾಧ್ಯವಿಲ್ಲದಂತಹ ಬಂದಿಗಳು ಅರ್ಹರಾಗಿರುತ್ತಾರೆ.

iv. 1973ರ ದಂಡ ಪ್ರಕ್ರಿಯಾ ಸಂಹಿತೆಯ (CrPC) ಸೆಕ್ಷನ್ 167(2)(ಎ)(1) ಮತ್ತು (2) ರ ಅಡಿಯಲ್ಲಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುವ ವಿಚಾರಣಾ ಬಂದಿಗಳು ಅರ್ಹರಾಗಿರುತ್ತಾರೆ.

ಅ) 90 ದಿನಗಳಲ್ಲಿ ತನಿಖೆ ಪೂರ್ಣವಾಗಿಲ್ಲದಿದ್ದರೆ.

ಆ) 60 ದಿನಗಳಲ್ಲಿ ತನಿಖೆ ಪೂರ್ಣವಾಗಿಲ್ಲದಿದ್ದರೆ.

ಸಿ) 180 ದಿನಗಳಲ್ಲಿ ತನಿಖೆ ಪೂರ್ಣವಾಗಿಲ್ಲದಿದ್ದರೆ [ನಾರ್ಕೋಟಿಕ್ ಡ್ರಗ್ಸ್ ಮತ್ತು ಸೈಕೋಟ್ರೋಪಿಕ್ಸ್ ಸಬ್‌ಸ್ಟೆನ್ಸ್ ಆ್ಯಕ್ಟ್, 1985 ರ ಸೆಕ್ಷನ್167 R/W 36 ಎ (ವಾಣಿಜ್ಯ ಪ್ರಮಾಣದಲ್ಲಿ ಒಳಗೊಂಡ ಅಪರಾಧದ ಸೆಕ್ಷನ್ 19 ಅಥವಾ ಸೆಕ್ಷನ್ 24 ಅಥವಾ ಸೆಕ್ಷನ್ 27ಎ ಅಡಿಯಲ್ಲಿ ಆರೋಪಿತರಾದ ವ್ಯಕ್ತಿಗಳು)].

v. ತ. 1973ರ ದಂಡ ಪ್ರಕ್ರಿಯಾ ಸಂಹಿತೆಯ (CrPC) ಸೆಕ್ಷನ್ 107, 108, 109 ಮತ್ತು 151 ರ ಅಡಿಯಲ್ಲಿನ ಕಮಿಷನ್ ಆಫ್ ಅಪ್ರೆಹೆನ್ಷನ್ ಮೇಲೆ ಬಂಧಿತರಾದ ವಿಚಾರಣಾ ಬಂದಿಗಳು.

vi. ಪ್ರೋಬೇಷನ್ ಆಫ್ ಅಫೆಂಡರ್ಸ್ ಆ್ಯಕ್ಟ್ ಸೆಕ್ಷನ್ 3 ರಲ್ಲಿ ಅಥವಾ 1860ರ ಭಾರತ ದಂಡ ಸಂಹಿತೆಯ (IPC) ಸೆಕ್ಷನ್ 379, 380, 381, 404, 420 ರ ಅಡಿಯಲ್ಲಿ ಅಥವಾ ಎರಡು ವರ್ಷಗಳಿಗಿಂತ ಹೆಚ್ಚಿರದ ಸೆರೆವಾಸಕ್ಕೆ ಒಳಪಡಬಹುದಾದ ಅಪರಾಧ ಕೃತ್ಯ ಎಸಗಿದ ವಿಚಾರಣಾ ಬಂದಿಗಳು.

vii. ಶುಲ್ಕದಿಂದ ವಿನಾಯಿತಿ ಕೊಡಬಹುದಾದ (ಕಾಂಪೌಂಡಬಲ್) ಉಲ್ಲಂಘನೆಯಲ್ಲಿ ಅಪರಾಧಿತರಾದ ವಿಚಾರಣಾ ಬಂದಿಗಳು.

viii. ಪ್ರೋಬೇಷನ್ ಆಫ್ ಅಫೆಂಡರ್ಸ್ ಆ್ಯಕ್ಟ್– 1958 ರ ಅಡಿಯಲ್ಲಿ ಗರಿಷ್ಠ ಎರಡು ವರ್ಷ ಶಿಕ್ಷೆಗೆ ಒಳಲ್ಪಡುವಂತಹ ಅಪರಾಧ ಪ್ರಕರಣಗಳಿದ್ದರೆ ಅಂತವರನ್ನು ಬಿಡುಗಡೆಗೆ ಪರಿಗಣಿಸಬೇಕು.

ix. ಮಹಿಳಾ ವಿಚಾರಣಾ ಬಂದಿಗಳು.

x. ವಿಶೇಷ ವೈದ್ಯಕೀಯ ಸೇವೆ ಅಗತ್ಯವಿರುವ ಅಶಕ್ತ ಅಥವಾ ಅನಾರೋಗ್ಯ ಪೀಡಿತ ವಿಚಾರಣಾ ಬಂದಿಗಳನ್ನು 1973 ರ ದಂಡ ಪ್ರಕ್ರಿಯಾ ಸಂಹಿತೆಯ (CrPC) ಸೆಕ್ಷನ್ 437 ಅಡಿಯಲ್ಲಿ ಬಿಡುಗಡೆಗೆ ಪರಿಗಣಿಸಬಹುದು.

xi. ಮಾನಸಿಕ ರೋಗಿಗಳಾಗಿರುವ ವಿಚಾರಣಾ ಬಂದಿಗಳು.


xii. ಮೊದಲ ಬಾರಿಗೆ ಅಪರಾಧ ಎಸಗಿದವರು, 19 ಮತ್ತು 21 ವಯಸ್ಸಿನ ನಡುವೆ ಇರುವವರು, 7 ವರ್ಷಕ್ಕಿಂತ ಕಡಿಮೆ ಶಿಕ್ಷೆಯನ್ನು ಪಡೆಯುವಂತಹ ಅಪರಾಧಕ್ಕಾಗಿ ಬಂಧನಕ್ಕೆ ಒಳಪಟ್ಟವರನ್ನು ಮತ್ತು ಗರಿಷ್ಠ ಶಿಕ್ಷಾವಧಿಯಲ್ಲಿ 1/4 ಭಾಗವನ್ನು ಪೂರೈಸಿದವರನ್ನು ಪ್ರೋಬೇಷನ್ ಆಫ್ ಅಫೆಂಡರ್ಸ್ ಆ್ಯಕ್ಟ್– 1958 ರ ಅನ್ವಯ ಬಿಡುಗಡೆಗೆ ಪರಿಗಣಿಸಬೇಕು.

xiii. ನ್ಯಾಯಾಧೀಶರಿಂದ ವಿಚಾರಣೆ ಮಾಡಬಹುದಾದ ಪ್ರಕರಣಗಳನ್ನೆಸಗಿದ ವಿಚಾರಣಾ ಬಂದಿಗಳು, ಸಾಕ್ಷಿ ಆಧಾರಗಳನ್ನು 1973ರ ದಂಡ ಪ್ರಕ್ರಿಯಾ ಸಂಹಿತೆಯ (CrPC) ಸೆಕ್ಷನ್ 437 (6) ಪಡೆಯಲು ನಿಗದಿಪಡಿಸಿದ ದಿನಾಂಕದಿಂದ 60 ದಿನಗಳ ಅವಧಿಯೊಳಗೆ ಜಾಮೀನು ನೀಡಲಾಗದ ಅಪರಾಧದ ವಿಚಾರಣೆ ಆಗದಿದ್ದಲ್ಲಿ.

xiv. ಶಿಕ್ಷಾವಧಿ ಪೂರ್ಣಗೊಳಿಸಿದ ಅಥವಾ ಶಿಕ್ಷಾವಧಿಯಲ್ಲಿ ಮಾಫಿಗೆ ಒಳಪಟ್ಟ ಬಂದಿ.

**70. ಕಾರಾಗೃಹಗಳ ಮೇಲ್ವಿಚಾರಣೆಗೆ ನ್ಯಾಯಾಂಗವು ಜವಾಬ್ದಾರಿಯಾಗಿರುತ್ತದೆಯೇ?**

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ನ್ಯಾಯಾಂಗದ ಮೇಲ್ವಿಚಾರಕರು. ಇವರು ಕಾರಾಗೃಹಗಳನ್ನು ನಿಯತಕಾಲಿಕವಾಗಿ ಪರಿವೀಕ್ಷಣೆ ಮಾಡಲು ಅಧಿಕಾರವುಳ್ಳವರಾಗಿರುತ್ತಾರೆ ಮತ್ತು ಇವರು ಅಂತಹ ಇಲಾಖಾ ಮೇಲ್ವಿಚಾರಣೆಯ ಮುಖ್ಯ ಕಾರ್ಯನಿಯೋಜಕರಾಗಿರುತ್ತಾರೆ. ಕಾರಾಗೃಹದಲ್ಲಿನ ಆರೋಗ್ಯ, ಅಕ್ರಮ ಬಂಧನ, ಬಂದಿಗಳ ಅಹವಾಲು ಮತ್ತು ಕಾರಾಗೃಹದೊಳಗೆ ನಡೆಯುವಂತಹ ಮರಣ, ಗಾಯ ಮತ್ತು ಕಾರಾಗೃಹಗಳ ಶಿಕ್ಷೆಗಳು ಮುಂತಾದವುಗಳನ್ನು ವಿಚಾರಿಸಿ, ವರದಿ ಮಾಡುವುದು ಇವರ ಹಾಗೂ ಪರಿಶೀಲನಾ ಸಮಿತಿಯ ಮುಖ್ಯ ಕರ್ತವ್ಯವಾಗಿರುತ್ತದೆ. ಕಾರಾಗೃಹಗಳ ವಶಕ್ಕೆ ಒಪ್ಪಿಸಲ್ಪಟ್ಟ ಬಂದಿಗಳು ನ್ಯಾಯಾಂಗ ಬಂಧನದಲ್ಲಿರುತ್ತಾರೆ ಮತ್ತು ನ್ಯಾಯಾಯಲಯಗಳೇ ಅವರ ಸುಪರ್ದು (ರಕ್ಷಕ) ದಾರರಾಗಿರುವುದರಿಂದ ನ್ಯಾಯಾಂಗವು ಬಂದಿಗಳ ಯೋಗಕ್ಷೇಮವನ್ನು ಖಾತರಿಪಡಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ಪಡೆದಿರುತ್ತದೆ. ಸಮರ್ಪಕ ಕಾರಾಗೃಹ ಆಡಳಿತ ನಿರ್ವಹಣೆಯ ಉದ್ದೇಶ ಬಂದಿಗಳಿಗೆ ನೀಡಲಾಗುವ ಕಾರಾಗೃಹ ಶಿಕ್ಷೆಗಳ ರೀತಿ ಅದರಲ್ಲೂ ವಿಶೇಷವಾಗಿ ಅಶಕ್ತ ಗುಂಪುಗಳು ಮತ್ತು ಕಾರಾಗೃಹ ಆಡಳಿತವು ಕಾನೂನು ಪ್ರಕ್ರಿಯೆಗಳಿಗೆ ತನ್ನನ್ನು ಒದಗಿಸಿಕೊಳ್ಳುವಿಕೆ ಮುಂತಾದವುಗಳನ್ನು ವೀಕ್ಷಿಸಿ ಪರಿಶೀಲಿಸಬಹುದು.



## ಪೆರೋಲ್ (ನಂಬಿಕೆಯ ವಾಗ್ದಾನದ ಮೇಲೆ ಬಿಡುಗಡೆ), ಫರ್ಲೋ, ಶಿಕ್ಷಾವಧಿ ಕಡಿತ ಮತ್ತು ಅವಧಿ ಪೂರ್ವ ಬಿಡುಗಡೆ

**71. ಪೆರೋಲ್ ಎಂದರೇನು?**

ಪೆರೋಲ್ ಎಂದರೆ, ಒಬ್ಬ ಬಂದಿಯನ್ನು ತನ್ನ ಕುಟುಂಬ ಹಾಗೂ ಸಮುದಾಯಗಳೊಂದಿಗೆ ಸಾಮಾಜಿಕ ಸಂಬಂಧಗಳನ್ನು ನಿರ್ವಹಿಸಲು ಮತ್ತು ಕುಟುಂಬ ಹಾಗೂ ಸಾಮಾಜಿಕ ಕರ್ತವ್ಯ/ಜವಾಬ್ದಾರಿಗಳನ್ನು ಪೂರೈಸಲು ಅನುಕೂಲವಾಗುವಂತೆ ಸ್ವಲ್ಪ ಅವಧಿಗೆ ಮಾತ್ರ ನಂಬಿಕೆಯ ವಾಗ್ದಾನದ ಮೇಲೆ ಬಿಡುಗಡೆ ಮಾಡುವುದು. ಕಾರಾಗೃಹದ ಹೊರಗೆ ಕಳೆದ ಈ ಬಿಡುಗಡೆಯ ಅವಧಿಯನ್ನು 'ಶಿಕ್ಷಾವಧಿಯ ಭಾಗ' ಎಂಬುದಾಗಿ ಪರಿಗಣಿಸುವುದಿಲ್ಲ. ಬಂದಿಯು ಕಾರಾಗೃಹದ ಹೊರಗೆ ಕಳೆದ ಅವಧಿಯನ್ನು ಮತ್ತೆ ಕಾರಾಗೃಹದಲ್ಲಿ ಹೆಚ್ಚುವರಿಯಾಗಿ ಶಿಕ್ಷಾವಧಿಯನ್ನು ಪೂರ್ಣಗೊಳಿಸಬೇಕು.

**72. ಫರ್ಲೋ ಎಂದರೇನು?**

'ಫರ್ಲೋ' ಎಂದರೆ ಬಂಧಿತನನ್ನು ಸ್ವಲ್ಪ ಸಮಯ ಬಿಡುಗಡೆ ಮಾಡುವುದು. ಇದಕ್ಕೆ ಬಂದಿಯು ಕಾರಾಗೃಹದಲ್ಲಿ ಒಂದು ನಿರ್ದಿಷ್ಟದ ಅವಧಿಯ ಶಿಕ್ಷೆಯನ್ನು ಕಾರಾಗೃಹದಲ್ಲಿ ಪೂರ್ಣ ಮಾಡಿರಬೇಕು ಮತ್ತು ಇದು ಬಂದಿಯ ಸನ್ನಡತೆ ಹಾಗೂ ಶಿಸ್ತುಗಳನ್ನು ಅವಲಂಬಿಸಿರುತ್ತದೆ. ಈ ರೀತಿಯಾಗಿ ನೀಡುವ ರಜಾ (ಫರ್ಲೋ) ಬಂದಿಗೆ ನೀಡುವ ಉತ್ತೇಜಕ ಸವಲತ್ತುಗಳಾಗಿದೆ. ಈ ರಜೆಯಲ್ಲಿ ಬಂದಿಯು ಕಾರಾಗೃಹದ ಹೊರಗೆ ಕಳೆದ ದಿನಗಳನ್ನು (ಅವಧಿಯನ್ನು) ಶಿಕ್ಷಾವಧಿಗೆ ಸೇರಿಸಿಕೊಳ್ಳಲಾಗುತ್ತದೆ.

**73. ಕೌಟುಂಬಿಕ ತುರ್ತು ಪರಿಸ್ಥಿತಿಗಳಲ್ಲಿ ತಾತ್ಕಾಲಿಕ ಬಿಡುಗಡೆಯನ್ನು ಕೋರಬಹುದೇ?**

ಕಾರಾಗೃಹ ಇಲಾಖೆಯ ಮುಖ್ಯಸ್ಥರು, ಕೌಟುಂಬಿಕ ತುರ್ತು ಪರಿಸ್ಥಿತಿಗಳ ಸಮಯದಲ್ಲಿ ತಾತ್ಕಾಲಿಕ ರಜೆ ಅಥವಾ ತುರ್ತು ಪೆರೋಲ್ ಅನ್ನು ನೀಡಬಹುದು. ಸಾಮಾನ್ಯವಾಗಿ ಈ ಕೆಳಗಿನ ಕಾರಣಗಳಿಗಾಗಿ ಬಂದಿಯು ರಜೆಯನ್ನು ಕೋರಬಹುದು:

i. ಬಂದಿಯ ಕುಟುಂಬದ ಯಾವುದೇ ಒಬ್ಬ ಸದಸ್ಯರ ಮರಣ ಅಥವಾ ಗಂಭೀರವಾದ ಖಾಯಿಲೆ ಅಥವಾ ಬಂದಿಯೇ ಗಂಭೀರವಾಗಿ ಖಾಯಿಲೆಯಲ್ಲಿ ಬಿದ್ದಾಗ.
ii. ಬಂದಿ ಅಥವಾ ಬಂದಿಯ ಬಹಳ ನಿಕಟ ಸಂಬಂಧಿಯ ಮದುವೆ ಜರುಗುವಾಗ.
iii. ಕೃಷಿ ಕಾರ್ಯಗಳಾದ ಉತ್ತುವಿಕೆ, ಬಿತ್ತುವಿಕೆ ಅಥವಾ ಫಸಲು ಮಾಡುವ ಸಂದರ್ಭ ಅಥವಾ
iv. ಇನ್ನಾವುದೇ ಇತರೆ ಸಾಕಷ್ಟು ಕಾರಣಗಳು ಇದ್ದಾಗ.

**74. ತಾತ್ಕಾಲಿಕ ಬಿಡುಗಡೆಗೆ ಅರ್ಜಿ ಸಲ್ಲಿಸಲು ಕ್ರಮಗಳೇನು?**

ತಾತ್ಕಾಲಿಕ ಬಿಡುಗಡೆ ಬಯಸುವ ಬಂದಿಯು ಕಾರಾಗೃಹದ ಉಸ್ತುವಾರಿ ಅಧಿಕಾರಿಗೆ ಅರ್ಜಿಯನ್ನು ಸಲ್ಲಿಸಬೇಕು. ಉಸ್ತುವಾರಿ ಅಧಿಕಾರಿಯು ಬಂದಿಯ ಅರ್ಹತೆ ಮುಂತಾದವುಗಳನ್ನು ಪರೀಕ್ಷಿಸಿ, ತತ್ಸಂಬಂಧಿತ ಅಧಿಕಾರಿಗೆ ಅರ್ಜಿಯನ್ನು ರವಾನಿಸುತ್ತಾರೆ. ಈ ಮೇಲಧಿಕಾರಿಯು ಜಿಲ್ಲಾ ನ್ಯಾಯಾಧೀಶರ ಮುಖಾಂತರ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಅರ್ಜಿಯನ್ನು ರವಾನಿಸುತ್ತಾರೆ. ಜಿಲ್ಲಾ ಪೊಲೀಸ್ ಅಧೀಕ್ಷಕರು, ಜಿಲ್ಲಾ ನ್ಯಾಯಾಧೀಶರ ಮುಖಾಂತರ ತತ್ಸಂಬಂಧಿತ ಅಧಿಕಾರಿಗೆ ತನ್ನ ವರದಿಯನ್ನು ಸಲ್ಲಿಸುತ್ತಾರೆ. ಒಂದು ಪಕ್ಷ ಪ್ರಸ್ತಾಪಿತ ಬಂದಿಯ ಬಿಡುಗಡೆಗೆ ಅಸಮ್ಮತಿ ಇದ್ದಲ್ಲಿ ಅದಕ್ಕೆ ಸೂಕ್ತ ಕಾರಣಗಳನ್ನು ಕೊಡಬೇಕು. ತತ್ಸಂಬಂಧಿತ ಅಧಿಕಾರಿ ತದನಂತರ ಅರ್ಜಿಗೆ ಸಂಬಂಧಿಸಿದಂತೆ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುತ್ತಾರೆ.

ಬಂದಿಯು ತನ್ನ ಅರ್ಜಿಗೆ ಸಂಬಂಧಿಸಿದಂತೆ ಎಲ್ಲಾ ನಿರ್ಧಾರಗಳನ್ನು ಸ್ಪಷ್ಟವಾಗಿ ತಿಳಿಸಿರಬೇಕು. ಒಂದು ಪಕ್ಷ ಸಂಬಂಧಪಟ್ಟವರು ರಜೆಯನ್ನು ನಿರಾಕರಿಸಿದ್ದಲ್ಲಿ ಅದಕ್ಕೆ ಕಾರಣವನ್ನು ತಿಳಿಸಬೇಕು. ರಜೆ ಮಂಜೂರಾದ ನಂತರ ಬಂದಿಯು ಕೆಲವು ನಿರ್ದಿಷ್ಟ ಕರಾರುಗಳನ್ನು ಅಂದರೆ– ನಗದು ರಕ್ಷಣೆ, ವ್ಯಕ್ತಿಗತ ಕರಾರು ಪತ್ರ, ನಿಗಧಿತ ಸ್ಥಳದಲ್ಲೇ ವಾಸಿಸುವ ಕರಾರು, ರಜೆ ಕಾಲದಲ್ಲಿ ಉತ್ತಮ ನಡತೆ, ರಜೆ ಮುಗಿದ ಮೇಲೆ ಕಾರಾಗೃಹಕ್ಕೆ ಹಿಂತಿರುಗುವ ಒಪ್ಪಂದ ಮುಂತಾದವುಗಳಿಗೆ ಒಪ್ಪಿಕೊಂಡಿದ್ದಾನೆಯೇ ಎಂಬುದನ್ನು ಸಂಬಂಧಪಟ್ಟವರು ಖಚಿತಪಡಿಸಿಕೊಂಡಿರಬೇಕು.

**75. ಮಾಫಿ ಎಂದರೇನು?**

ಕಾರಾಗೃಹದ ನಿಯಮಗಳ ಬದ್ಧತೆ ಮತ್ತು ಉತ್ತಮ ನಡತೆಗಾಗಿ ಬಂದಿಗೆ ಕೆಲವು ದಿನಗಳನ್ನು ಅಥವಾ ಅರ್ಜಿತ ವಿಶೇಷ ಅಂಶಗಳನ್ನು ಬಂದಿಗೆ ನೀಡುವ ವ್ಯವಸ್ಥೆಯೇ ಮಾಫಿ (ರೆಮಿಶನ್). ಇಂತಹ ಆರ್ಜಿತ ಅಂಶಗಳ ಸಂಪಾದನೆಗೆ ಬಂದಿಯ ಶಿಕ್ಷಾವಧಿಯನ್ನು ಕಡಿಮೆಗೊಳಿಸಲಾಗುತ್ತದೆ. ಅಂದರೆ, ವಾಸ್ತವ ಶಿಕ್ಷಾ ಅವಧಿಯನ್ನು ಕಡಿಮೆಗೊಳಿಸಲಾಗುತ್ತದೆ. ಉತ್ತಮ ನಡತೆಗಾಗಿ ಪ್ರತಿ ತಿಂಗಳು ಬಂದಿಯು ತನ್ನ ಖಾತೆಗೆ ಕೆಲವು ದಿನಗಳ ಮಾಫಿಯನ್ನು ಪಡೆಯಬಹುದು. ಈ ಮಾಫಿಯು ಗರಿಷ್ಠ ಒಬ್ಬ ಬಂದಿಗೆ ನಿಗದಿಪಡಿಸಿದ ಶಿಕ್ಷಾವಧಿಯ 1/3 ಭಾಗದಷ್ಟು ಮಾಫಿ ಮೂಲಕ ಅರ್ಜಿಸಬಹುದು.

**76. ಮಾಫಿಯ ವಿವಿಧ ರೀತಿಗಳಾವುವು?**

ಮಾಫಿಯಲ್ಲಿ ಮೂರು ವಿಧಗಳಿವೆ.

a. 1984 ರ ಕಾರಾಗೃಹ ಅಧಿನಿಯಮದ ನಿಬಂಧನೆ ಅಡಿಯಲ್ಲಿ ಅಥವಾ ಆಯಾ ರಾಜ್ಯ ಕಾರಾಗೃಹದ ವಿಧಿಗಳಡಿಯಲ್ಲಿ ಅಥವಾ ಇನ್ನಾವುದೇ ನಿಯಮಗಳಡಿಯಲ್ಲಿ ಮಾಫಿ ಕೊಡಬಹುದು.

b. ಛ. ವಿಭಾಗ 432 CrPC ಅಡಿಯಲ್ಲಿ ಸರ್ಕಾರ ಮಂಜೂರು ಮಾಡಲಾದ ಶಿಕ್ಷಾವಧಿಯಲ್ಲಿ ಮಾಫಿ ಕೊಡಬಹುದು.

c. ಛಿ. 1950ರ ಭಾರತದ ಸಂವಿಧಾನದ ಮೇರೆಗೆ ಆರ್ಟಿಕಲ್ 72 ಅಥವಾ 161 ರ ಪ್ರಕಾರ ರಾಜ್ಯಪಾಲರು ಮಾಫಿಯನ್ನು ಕೊಡಬಹುದು.

**77. ಕಾರಾಗೃಹದ ಅಧಿಕಾರಿಗಳು ಎಂತಹ ಮಾಫಿಯನ್ನು ಮಂಜೂರು ಮಾಡುತ್ತಾರೆ?**

ಕಾರಾಗೃಹದ ಅಧಿಕಾರಿಗಳು ಮಂಜೂರು ಮಾಡುವ ಮಾಫಿಯು ಈ ಕೆಳಕಂಡ ರೀತಿಗಳಲ್ಲಿರುತ್ತವೆ:

a. **ಸಾಧಾರಣ ಮಾಫಿ:** ಕಾರಾಗೃಹದ ಅಧೀಕ್ಷಕರು ಅಥವಾ ಆತನ ಪರವಾಗಿ ನೇಮಿಸಲ್ಪಟ್ಟ ಯಾವುದೇ ಅಧಿಕಾರಿಯು ಮಾಫಿಯನ್ನು ಮಂಜೂರು ಮಾಡಬಹುದು. ಮಾಫಿಗೆ ಅರ್ಹತೆ ಮತ್ತು ಮಾನದಂಡಗಳನ್ನು ಆಯಾ ರಾಜ್ಯಗಳ ಕಾರಾಗೃಹ ಕೈಪಿಡಿಯಲ್ಲಿ ಒದಗಿಸಲಾಗಿರುತ್ತದೆ. ಸಾಮಾನ್ಯವಾಗಿ ಒಟ್ಟಾರೆ ಎರಡು ತಿಂಗಳು ಅಥವಾ ಅದಕ್ಕಿಂತ ಹೆಚ್ಚಿನ ಶಿಕ್ಷಾವಧಿ ಇದ್ದರೆ ಸಾಧಾರಣ ಮಾಫಿ ಮಂಜೂರು ಮಾಡಬಹುದು. ಉತ್ತಮ ನಡತೆಗಾಗಿ ತಿಂಗಳಿಗೆ ಮೂರು ದಿನಗಳು, ಉತ್ತಮ ಕಾರ್ಯನಿರ್ವಹಣೆಗಾಗಿ ಮೂರು ದಿನಗಳು, ರಾತ್ರಿ ಪಾಳಿಯಲ್ಲಿ ಕಾವಲುಗಾರನ ಕಾರ್ಯಕ್ಕಾಗಿ ಎಂಟು ದಿನಗಳು, ಇಡೀ ವರ್ಷದಲ್ಲಿ ಕಾರಾಗೃಹ ನಿಯಮಾವಳಿಗಳ ಉಲ್ಲಂಘನೆ/ಯಾವುದೇ ರೀತಿಯ ಅಪರಾಧ ಮಾಡದಿರುವುದಕ್ಕಾಗಿ ವಾರ್ಷಿಕ ಮೂವತ್ತು ದಿನಗಳು ಹೀಗೆ ಶಿಕ್ಷೆಯ ಕಡಿತದ ಮಾನದಂಡವನ್ನು ವೃದ್ಧಿಸಬಹುದು ಅಥವಾ ಮಾಫಿಯನ್ನು ನೀಡಬಹುದು.

b. **ವಿಶೇಷ ಮಾಫಿ:** ಕಾರಾಗೃಹದ ಅಧೀಕ್ಷಕರ ಶಿಫಾರಸ್ಸಿನ ಮೇರೆಗೆ, ಕಾರಾಗೃಹ ಇಲಾಖೆಯ ಮುಖ್ಯಸ್ಥರಿಂದ ಈ ರೀತಿಯ ಮಾಫಿಯನ್ನು ಮಂಜೂರು ಮಾಡಬಹುದು. ಇದಕ್ಕೆ ಅರ್ಹತೆ ಮತ್ತು ಮಾನದಂಡಗಳನ್ನು ಆಯಾ ರಾಜ್ಯಗಳ

ಕಾರಾಗೃಹ ಕೈಪಿಡಿಯಲ್ಲಿ ಮಾಹಿತಿಯನ್ನು ವಿವರಿಸಲಾಗಿದೆ. ಸಾಮಾನ್ಯವಾಗಿ, ಬಂದಿಯ ಉತ್ಕೃಷ್ಟ/ಶ್ಲಾಘನೀಯ ಕಾರ್ಯಗಳಿಗಾಗಿ ವಿಶೇಷ ಮಾಫಿಯನ್ನು ಬಹುಮಾನವಾಗಿ ಕೊಡಲಾಗುತ್ತದೆ. ಇವುಗಳಲ್ಲಿ ಸರ್ಕಾರಿ ನೌಕರನ ಅಥವಾ ಕಾರಾಗೃಹ ಭೇಟಿಗಾರರನ್ನು ಅಥವಾ ಸಹ–ಬಂದಿಗಳ ಜೀವ ಉಳಿಸಿದ್ದಕ್ಕಾಗಿ, ಬಂದಿಗಳು ಕಾರಾಗೃಹದಿಂದ ಪರಾರಿಯಾಗುವುದನ್ನು ತಡೆದುದ್ದಕ್ಕಾಗಿ ಅಥವಾ ಕಾರಾಗೃಹದ ತುರ್ತುಪರಿಸ್ಥಿತಿಗಳಾದ ಬೆಂಕಿ ಅನಾಹುತ, ಗಲಭೆ, ದೊಂಬಿ, ಮುಷ್ಕರ, ಗುಂಪುಗೂಡುವಿಕೆಯನ್ನು ತಡೆಯಲು ಕಾರಾಗೃಹ ಸಿಬ್ಬಂದಿಗಳಿಗೆ ಸಹಾಯಕರಾಗಿದ್ದಕ್ಕಾಗಿ, ಸಾಂಸ್ಕೃತಿಕ ಚಟುವಟಿಕೆ, ಶೈಕ್ಷಣಿಕ ಚಟುವಟಿಕೆ, ಕೈಗಾರಿಕೆ ಚಟುವಟಿಕೆ, ಕೃಷಿ ಚಟುವಟಿಕೆ ಮುಂತಾದ ಕ್ಷೇತ್ರಗಳಲ್ಲಿ ವಿಶೇಷ ಹಾಗೂ ಶ್ಲಾಘನೀಯ ಕಾರ್ಯಕ್ಕಾಗಿ ಅಥವಾ ಇನ್ನಾವುದೇ ಬೆಳವಣಿಗೆಯ ಕಾರ್ಯದಲ್ಲಿ ಅಥವಾ ಕಾರಾಗೃಹದ ಔದ್ಯೋಗಿಕ ತರಬೇತಿಯಲ್ಲಿ ವಿಶೇಷ ಕೊಡುಗೆ ನೀಡಿದ್ದಕ್ಕಾಗಿ ವಿಶೇಷ ಮಾಫಿಯನ್ನು ಮಂಜೂರು ಮಾಡಬಹುದು. ಸಾಮಾನ್ಯವಾಗಿ ವಿಶೇಷ ಮಾಫಿಯು ಒಂದು ಕ್ಯಾಲಂಡರ್ ವರ್ಷದಲ್ಲಿ ಮೂವತ್ತು ದಿನಗಳನ್ನು ಮೀರುವಂತಿಲ್ಲ.

**78. ಅವಧಿ ಪೂರ್ವ ಬಿಡುಗಡೆ ಎಂದರೇನು?**

ಅವಧಿಪೂರ್ವ ಬಿಡುಗಡೆ ಎಂದರೆ, ಬಂದಿಗಳನ್ನು ತಮ್ಮ ಶಿಕ್ಷಾವಧಿಯನ್ನು ಪೂರ್ಣಗೊಳಿಸುವ ಮೊದಲೇ ಬಿಡುಗಡೆ ಮಾಡುವುದು. ಇದು ಈ ಕೆಳಕಂಡ ರೀತಿಗಳಲ್ಲಿರಬಹುದು:

a. CrPC ಯ ಸೆಕ್ಷನ್ 433 ರ ಅಡಿಯಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಬಂದಿ ಅಥವಾ ಬೇರೆ ಬಂದಿಗಳಿಗೆ ಶಿಕ್ಷಾವಧಿಯನ್ನು ಕಡಿತಗೊಳಿಸುವುದರ ಮೂಲಕ.
b. CrPC ಯ ಸೆಕ್ಷನ್ 432 ರ ಅಡಿಯಲ್ಲಿ ಬಂದಿಯ ಶಿಕ್ಷಾವಧಿಯನ್ನು ಕಡಿಮೆಗೊಳಿಸುವುದರ ಮೂಲಕ.
c. ಭಾರತದ ಸಂವಿಧಾನದ 72 ಅಥವಾ 16 ರ ವಿಧಿ ಅಡಿಯಲ್ಲಿ ರಾಜ್ಯದ ರಾಜ್ಯಪಾಲರ ಆದೇಶದ ಚಾಲನೆಯಿಂದಾಗಿ.
d. ಬಂದಿಗಳು ತಮ್ಮ ಶಿಕ್ಷಾವಧಿಯ ಒಂದು ನಿರ್ದಿಷ್ಟ ಭಾಗದಷ್ಟು ಪೂರ್ಣ ಮಾಡಿದ ನಂತರ ಅವರ ಉತ್ತಮ ನಡತೆಗಾಗಿ ರಾಜ್ಯ ಒದಗಿಸುವ ವಿಶೇಷ ನಿಯಮದ ಅಡಿಯಲ್ಲಿ ಬಿಡುಗಡೆಯಾಗುವುದು.

**79. ಅವಧಿಪೂರ್ವ ಬಿಡುಗಡೆಯನ್ನು ಮಂಜೂರು ಮಾಡುವ ಪ್ರಕ್ರಿಯೆಯು ಯಾವ ರೀತಿಯಲ್ಲಾಗಿರುತ್ತದೆ?**

ಯುಕ್ತ ಪ್ರಸಂಗಗಳಲ್ಲಿ ಬಂದಿಯನ್ನು ಅವಧಿಪೂರ್ವದಲ್ಲೇ ಬಿಡುಗಡೆಗೆ ಶಿಫಾರಸ್ಸು ಮಾಡಲು ಪ್ರತಿ ರಾಜ್ಯವೂ ಒಂದು ಸಮಿತಿಯನ್ನು ಹೊಂದಿರುತ್ತದೆ. ಈ ಸಮಿತಿಗಳು ವಿವಿಧ ಹೆಸರುಗಳಿಂದ ಗುರ್ತಿಸಲ್ಪಟ್ಟಿವೆ. ಅವುಗಳೆಂದರೆ, ಶಿಕ್ಷಾ ಪುನರ್‌ಪರಿಶೀಲನಾ ಪ್ರಾಧಿಕಾರ, ರಾಜ್ಯಮಟ್ಟದ ಸಮಿತಿಗಳು ಇವುಗಳಲ್ಲಿ ಹೆಸರಿಸುವಂತಹ ಈ ಸಮಿತಿಗಳ ನಿಯೋಜಿಸುವಿಕೆ ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸವಾಗುತ್ತದೆ. ಸಾಮಾನ್ಯವಾಗಿ ಇವುಗಳಲ್ಲಿ ಕಾರಾಗೃಹ ಇಲಾಖೆಯ ಮುಖ್ಯಸ್ಥರು, ಒಬ್ಬ ಹಿರಿಯ ಪೊಲೀಸ್ ಅಧಿಕಾರಿಗಳು, ಕಾರಾಗೃಹಗಳ ಪ್ರಧಾನ ಮುಖ್ಯ ಕಾರ್ಯದರ್ಶಿಗಳು (Principle Secretary Incharge Prisons) ಮತ್ತು ಅಪರಾಧಿಗಳ ಮುಖ್ಯ ಮೇಲ್ವಿಚಾರಣಾ ಅಧಿಕಾರಿಗಳು. ಈ ಸಮಿತಿಯು ನಿಯತಕಾಲಿಕವಾಗಿ ಸಭೆ ಸೇರಿ ಅರ್ಹರಿರುವಂತಹ ಬಂದಿಗಳನ್ನು ಬಿಡುಗಡೆಗೆ ಪರಿಗಣಿಸಬೇಕು.

ಕಾರಾಗೃಹದ ಉನ್ನತ ಅಧಿಕಾರಿಯೂ ಅವಧಿ ಪೂರ್ವ ಬಿಡುಗಡೆಗೆ ಅರ್ಹವಿರುವಂತಹ ಬಂದಿಗಳ ಪಟ್ಟಿಯನ್ನು ಸಿದ್ಧಪಡಿಸುವುದರ ಮೂಲಕ ಪ್ರಕ್ರಿಯೆಗಳನ್ನು ಪ್ರಾರಂಭಿಸಿ, ಅಂತಹ ಬಂದಿಗಳ ಒಂದು ವಿಸ್ತೃತವಾದ ವರದಿಯನ್ನು ಸಿದ್ದಪಡಿಸಬೇಕು. ಈ ವರದಿಯಲ್ಲಿ ಬಂದಿಯ ಆರ್ಥಿಕ ಸ್ಥಿತಿ, ಕೌಟುಂಬಿಕ ಸ್ಥಿತಿ ಮತ್ತು ಸಾಮಾಜಿಕ ಹಿನ್ನೆಲೆಗಳನ್ನು ನಮೂದಿಸಿರಬೇಕು ಮತ್ತು ಆ ಬಂದಿಯು ಮಾಡಿರಬಹುದಾದ ಇತರೆ ಅಪರಾಧಗಳು, ಆ ಅಪರಾಧಗಳ ಹಿನ್ನೆಲೆ ಮುಂತಾದವುಗಳನ್ನು ಸ್ಪಷ್ಟವಾಗಿ ನಮೂದಿಸಿರಬೇಕು. ಈ ವರದಿಯಲ್ಲಿ ಬಂದಿಯು ಕಾರಾಗೃಹದಲ್ಲಿರುವಾಗಿನ ಆತನ ನಡತೆ, ವರ್ತನೆ ಹಾಗೂ ಆತನ ದೈಹಿಕ ಮತ್ತು ಮಾನಸಿಕ ಆರೋಗ್ಯಗಳನ್ನು ಪ್ರತಿಬಿಂಬಿಸುವಂತಿರಬೇಕು.

**80. ಎಲ್ಲಾ ಬಂದಿಗಳೂ ಅವಧಿಪೂರ್ವ ಬಿಡುಗಡೆಗೆ ಹಕ್ಕನ್ನು ಪಡೆದಿರುತ್ತಾರೆಯೇ?**

ಇಲ್ಲ, ಎಲ್ಲಾ ಬಂದಿಗಳೂ ಅವಧಿ ಪೂರ್ವ ಬಿಡುಗಡೆಗೆ ಹಕ್ಕನ್ನು ಹೊಂದಿರುವುದಿಲ್ಲ. ಆದರೂ ಸಹ ಕಾರಾಗೃಹ ವಾಸದ ಒಂದು ನಿರ್ದಿಷ್ಟ ಅವಧಿಯನ್ನು ಪೂರೈಸಿದ ಮೇಲೆ ಅಂದರೆ 14 ಮತ್ತು 20 ವರ್ಷಗಳು (ಜೀವಿತಾವಧಿ ಶಿಕ್ಷೆಗಳಲ್ಲಿ) ಅಥವಾ ಶಿಕ್ಷಾವಧಿಯ ಒಂದು ನಿರ್ದಿಷ್ಟ ಭಾಗವನ್ನು ಪೂರ್ಣಗೊಳಿಸಿದ ನಂತರ, ಆಯಾ ರಾಜ್ಯದ ನಿಯಮಾನುಸಾರ ಅವಧಿಪೂರ್ವ ಬಿಡುಗಡೆಗೆ ಬಂದಿಗಳು ಹಕ್ಕನ್ನು ಪಡೆಯುತ್ತಾರೆ.



## ಶಿಕ್ಷೆಯನ್ನು ಜಾರಿಗೊಳಿಸುವಿಕೆ, ವರ್ಗಾವಣೆ ಮತ್ತು ಬಿಡುಗಡ

**81. ಕಾರಾಗೃಹ ವಾಸದ ಶಿಕ್ಷೆಯನ್ನು ಹೇಗೆ ಲೆಕ್ಕಾಚಾರ ಮಾಡಲಾಗುತ್ತದೆ?**

ಶಿಕ್ಷಾವಧಿಯನ್ನು ಕ್ಯಾಲೆಂಡರ್‌ನ ದಿನಗಳು, ತಿಂಗಳುಗಳು ಮತ್ತು ವರ್ಷಗಳಲ್ಲಿ ಲೆಕ್ಕಾಚಾರ ಮಾಡಲಾಗುತ್ತದೆ. ಜೀವಿತಾವಧಿ ಶಿಕ್ಷೆ ಎಂದರೆ, ಒಬ್ಬ ಅಪರಾಧಿಯು ಇಡೀ ಜೀವನ ಕಾರಾಗೃಹ ವಾಸದಲ್ಲಿರುವುದು, ಬಂದಿಯ ಶಿಕ್ಷೆಯ ಅವಧಿಯ ಮುಕ್ತಾಯವನ್ನು ಲೆಕ್ಕಾಚಾರ ಮಾಡುವಾಗ, ಶಿಕ್ಷೆಯನ್ನು ಜಾರಿ ಮಾಡಿದ (ಹೊರಡಿಸಿದ) ದಿನ ಮತ್ತು ಬಿಡುಗಡೆಯ ದಿನಗಳೆರಡನ್ನೂ ಸೆರೆವಾಸದ ದಿನಗಳೆಂದು ಸೇರಿಸಲಾಗುತ್ತದೆ. ಉದಾಹರಣೆಗೆ, ಒಬ್ಬ ಬಂಧಿತನನ್ನು ಜನವರಿ 1 ರಂದು, ಒಂದು ತಿಂಗಳ ಕಾಲ ಕಾರಾಗೃಹ ವಾಸದ ಶಿಕ್ಷೆಗೆ ಗುರಿ ಪಡಿಸಿದ್ದರೆ, ಆತನ ಬಿಡುಗಡೆ ಜನವರಿ 31 ರಂದೇ ಆಗುತ್ತದೆ ಹೊರತು ಫೆಬ್ರವರಿ 01 ರಂದು ಅಲ್ಲ, ಯಾವುದೇ ಸಂದರ್ಭದಲ್ಲಿಯೂ ಬಂಧಿತನನ್ನು ನ್ಯಾಯಾಲಯ ಸೂಚಿಸಿದ ಅಧಿಪತ್ರದಲ್ಲಿನ ಕಾಲವನ್ನು ಮೀರಿ ಬಂಧನದಲ್ಲಿ ಇರಿಸಿಕೊಳ್ಳಬಾರದು.

**82. ಏಕ(ಸಮ)ಕಾಲೀನ (Concurrent) ಮತ್ತು ಅನುಕ್ರಮ (Consecution) ಕಾಲದ ಶಿಕ್ಷೆಗಳು ಎಂದರೇನು?**

ಬಹು ಅಪರಾಧಗಳಿಗಾಗಿ ಶಿಕ್ಷೆಯನ್ನು ವಿಧಿಸಲಾದ ಬಂದಿಗಳಿಗೆ, ನ್ಯಾಯಾಲಯವು ಶಿಕ್ಷೆಯನ್ನು, ಪ್ರತಿಯೊಂದಕ್ಕೂ ಒಂದೊಂದಾಗಿ (ಪ್ರತ್ಯೇಕವಾಗಿ) ಅಥವಾ ಎಲ್ಲವನ್ನೂ ಒಟ್ಟುಪಡಿಸಿ ಶಿಕ್ಷೆಯನ್ನು ಜಾರಿಮಾಡಬಹುದು. ಮೊದಲನೆಯ ರೀತಿಯ ಶಿಕ್ಷೆಯಲ್ಲಿ, ಎಲ್ಲಾ ಶಿಕ್ಷೆಗಳು ಅನುಕ್ರಮವಾಗಿ ಜರುಗುತ್ತವೆ. ಆದರೆ ಎರಡನೇ ರೀತಿ ಶಿಕ್ಷೆಯಲ್ಲಿ, ಶಿಕ್ಷೆಯನ್ನು ಒಟ್ಟಾಗಿ ಆದೇಶಿಸಲಾಗುತ್ತದೆ. ಉದಾಹರಣೆಗೆ– ಒಬ್ಬ ಬಂಧಿತನಿಗೆ ಐದು ಮತ್ತು ಏಳು ವರ್ಷಗಳ ಕಾಲ ಶಿಕ್ಷಾವಧಿ ಜಾರಿಯಾಗಿದ್ದರೆ, ಏಕಕಾಲೀನ ಶಿಕ್ಷಾ ಕ್ರಮದ

ರೀತಿಯಲ್ಲಿ 07 ವರ್ಷಗಳ ಕಾಲ ಕಾರಾಗೃಹವಾಸ ಜಾರಿಯಾಗುತ್ತದೆ ಮತ್ತು ಅನುಕ್ರಮ ಶಿಕ್ಷಾ ಕ್ರಮದ ರೀತಿಯಲ್ಲಿ 12 ವರ್ಷಗಳ ಕಾಲ ಕಾರಾಗೃಹವಾಸ ಜಾರಿಯಾಗುತ್ತದೆ. ಸಾಮಾನ್ಯವಾಗಿ ಜುಲ್ಮಾನೆಗಳನ್ನು ಪಾವತಿಸಲು ತಪ್ಪಿದ್ದಲ್ಲಿ ಕಾರಾಗೃಹ ವಾಸವು ಅನುಕ್ರಮ ರೀತಿಯಲ್ಲಿ ಜಾರಿಯಾಗುವುದಿಲ್ಲ.

**83. ಒಬ್ಬ ಬಂದಿಯನ್ನು ಮತ್ತೊಂದು ಕಾರಾಗೃಹಕ್ಕೆ ಯಾವಾಗ ವರ್ಗಾಯಿಸಬಹುದು?**

ಬಂದಿಯನ್ನು ಒಂದು ಕಾರಾಗೃಹದಿಂದ ಮತ್ತೊಂದು ಕಾರಾಗೃಹಕ್ಕೆ ವಿವಿಧ ಕಾರಣಗಳಿಗಾಗಿ ವರ್ಗಾಯಿಸಬಹುದು. ಅವುಗಳೆಂದರೆ,

a. ವೈದ್ಯಕೀಯ ಕಾರಣಗಳು.

b. ಸಾಕ್ಷಿ ಒದಗಿಸಲು ಅಥವಾ ವಿಚಾರಣೆ ಎದುರಿಸಲು ನ್ಯಾಯಾಲಯಕ್ಕೆ ಹಾಜರಾಗಬೇಕಾದಾಗ.

c. ತಮ್ಮ ಕುಟುಂಬಸ್ಥರ ವಾಸಸ್ಥಳದ ಜಿಲ್ಲೆಗೆ ಸಮೀಪದಲ್ಲಿರಲು.

d. ಕಾರಾಗೃಹಗಳ ಭದ್ರತೆ ಮತ್ತು ಆಡಳಿತಾತ್ಮಕ ಹಿತದೃಷ್ಟಿ ಇತ್ಯಾದಿಗಳು...


e. ಮಾನವೀಯತೆಯ ಆಧಾರದ ಮೇಲೆ ಅವರ ಪುನರ್ವಸತಿಯ ಕಾರಣಗಳಿಂದಾಗಿ.

**84. ಕಾರಾಗೃಹದಿಂದ ಬಂದಿಯನ್ನು ಬಿಡುಗಡೆ ಮಾಡಿದ ಮೇಲೆ ಏನಾಗುತ್ತದೆ?**

ಬಿಡುಗಡೆಯಾಗುವ ದಿನಾಂಕದಂದು ಬಂದಿಯ ಗುರುತನ್ನು ದಾಖಲಾತಿ ಪುಸ್ತಕದಲ್ಲಿ ನಮೂದಿಸಲಾಗಿರುವ ವಿವರಗಳೊಂದಿಗೆ ಹಾಗೂ ಕಾರಾಗೃಹ ನಿರ್ವಹಣಾ ಪುಸ್ತಕದೊಂದಿಗೆ ವಿವರವಾಗಿ ಪರಿಶೀಲಿಸಲಾಗುತ್ತದೆ. ಆನಂತರ ಬಿಡುಗಡೆಯಾದ ಬಂದಿಯ ನಗದು, ಒಡವೆ, ವಸ್ತ್ರ ಮತ್ತು ಅವರು ದಾಖಲಾದ ಸಮಯದಲ್ಲಿ ಹೊಂದಿದ್ದ ಅವರ ಸ್ವತ್ತುಗಳನ್ನು ಹಿಂದಿರುಗಿಸಲಾಗುತ್ತದೆ. ಸಂಬಂಧಿತ ದಾಖಲಾತಿಗಳನ್ನು ಅಂದರೆ ಪಾಸ್‌ಬುಕ್, ಚೆಕ್ಕ್‌ಬುಕ್ ಇತರೆಗಳನ್ನು ಹಿಂದಿರುಗಿಸಲಾಗುತ್ತದೆ. ಬಂದಿಯ ಕಾರಾಗೃಹ ವಾಸದ ಅವಧಿಯಲ್ಲಿ ಸಂಪಾದಿಸಿದ ಮಜೂರಿಯನ್ನು (ವೇತನ) ಸಾಮಾನ್ಯವಾಗಿ ಆತನ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ. ಒಂದು ವೇಳೆ ಹಾಗಾಗದಿದ್ದರೆ ಸಂಪೂರ್ಣವಾದ ಮೊತ್ತವನ್ನು ಬಿಡುಗಡೆ ಸಮಯದಲ್ಲಿ ಬಂದಿಗೆ ಕೊಡಲಾಗುತ್ತದೆ.

**85. ಶಿಕ್ಷಾವಧಿಯನ್ನು ಪೂರ್ಣಗೊಳಿಸಿದ ನಂತರವೂ ಬಂದಿಯನ್ನು ಬಿಡುಗಡೆ ಮಾಡದಿದ್ದಲ್ಲಿ ಆತನು ಯಾರ ಬಳಿ ದೂರನ್ನು ನೀಡಬಹುದು?**

ಬಂದಿಯು ತಕ್ಷಣ ಕಾರಾಗೃಹ ಅಧಿಕಾರಿಗಳಿಗೆ, ತಮ್ಮ ವಕೀಲರಿಗೆ ಅಥವಾ ಕಾನೂನು ಸಹಾಯಕ ಅಧಿಕಾರಿಗಳಿಗೆ ಮತ್ತು ಕುಟುಂಬದ ಸದಸ್ಯರಿಗೆ ತಮ್ಮ ಶಿಕ್ಷಾವಧಿ ಪೂರ್ಣಗೊಂಡ ನಂತರವೂ ಬಿಡುಗಡೆ ಮಾಡದಿದ್ದಲ್ಲಿ ಮಾಹಿತಿಯನ್ನು ನೀಡಬೇಕು. ಒಬ್ಬ ಬಂದಿಯು ಕಾರಾಗೃಹದ ಅಧೀಕ್ಷಕರಿಗೆ ತನ್ನನ್ನು ಬಿಡುಗಡೆ ಮಾಡಲು ವಿಳಂಬವಾಗಿರುವುದಕ್ಕೆ ಕಾರಣಗಳನ್ನು ಕೇಳಿ ಒಂದು ಅಹವಾಲು/ಮನವಿಯನ್ನು ಕೊಡಬಹುದು. ಶಿಕ್ಷಾವಧಿ ಪೂರೈಸಿದ ನಂತರವೂ ಬಿಡುಗಡೆ ಮಾಡದಿದ್ದಲ್ಲಿ ಬಂದಿಯು ಕಾರಾಗೃಹಕ್ಕೆ ಭೇಟಿ ನೀಡುವಂತಹ ನ್ಯಾಯಾಂಗ ಅಧಿಕಾರಿಗಳಲ್ಲಿ (ನ್ಯಾಯಾಧೀಶರಲ್ಲಿ) ಅಥವಾ ವಿಚಾರಣಾಬಂದಿ ಪುನರ್‌ಪರಿಶೀಲನಾ ಸಮಿತಿಯ ಸದಸ್ಯರಲ್ಲಿ ಮನವಿಯನ್ನು ಸಲ್ಲಿಸಬಹುದು ಅಥವಾ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ಪತ್ರವನ್ನು ಬರೆಯಬಹುದು.



## ವಿಶೇಷ ಅಗತ್ಯಗಳಿರುವಂತಹ ಬಂದಿಗಳು

**86. ಕಾರಾಗೃಹದಲ್ಲಿ ಯಾವ ಗುಂಪುಗಳನ್ನು ದುರ್ಬಲ ಗುಂಪುಗಳೆಂದು ಕರೆಯುವರು?**

ಕಾರಾಗೃಹದಲ್ಲಿ ವಿಶೇಷವಾಗಿ ಕೆಲವು ನಿರ್ದಿಷ್ಟ ಗುಂಪುಗಳು ದುರ್ಬಲರಾಗಿರುತ್ತಾರೆ ಮತ್ತು ಅವರಿಗೆ ಹೆಚ್ಚುವರಿ ರಕ್ಷಣೆ ಮತ್ತು ಪಾಲನೆಯ ಅಗತ್ಯವಿರುತ್ತದೆ. ಕೆಲವರು ಅಸಮರ್ಪಕ ಸೌಲಭ್ಯಗಳ ಕಾರಣದಿಂದಾಗಿ ಕಾರಾಗೃಹವಾಸದಲ್ಲಿರುವಾಗ ಹೆಚ್ಚಿನ ಸಮಸ್ಯೆ, ನೋವು ಮತ್ತು ಹಾನಿಗಳನ್ನು ಅನುಭವಿಸುತ್ತಾರೆ, ಇಂತಹವರಿಗೆ ವಿಶೇಷ ಸವಲತ್ತುಗಳು ಮತ್ತು ವಿಶೇಷ ಅಗತ್ಯಗಳು ಅನಿವಾರ್ಯವಾಗಿರುತ್ತವೆ. ಇಂತಹ ಗುಂಪುಗಳು ಅವಮಾನ/ತೇಜೋವಧೆ, ದೈಹಿಕ ಮತ್ತು ಮಾನಸಿಕ ನಿಂದನೆ/ದುರ್ಬಳಕೆಗೆ ಬಲಿಯಾಗುತ್ತಾರೆ ಮತ್ತು ಅವರ ಜಾತಿ, ಜನಾಂಗ, ರಾಷ್ಟ್ರೀಯತೆ, ಅಸಮರ್ಥತೆ, ಲಿಂಗ, ಲೈಂಗಿಕ ಮನೋಧರ್ಮ ಮುಂತಾದವುಗಳಿಂದಾಗಿ ದುರ್ಬಲರಾಗಿರುತ್ತಾರೆ. ಇಂತಹ ದುರ್ಬಲ ಗುಂಪಿನಲ್ಲಿ ಮಹಿಳೆಯರು, ಮಕ್ಕಳು, ವಿದೇಶಿ ಬಂದಿಗಳು, ಮರಣಾವಸ್ಥೆಯಲ್ಲಿರುವ ಬಂದಿಗಳು, ಯುವ ಅಪರಾಧಿಗಳು, ದೈಹಿಕವಾಗಿ ಅಥವಾ ಮಾನಸಿಕವಾಗಿ ದುರ್ಬಲರಾದ/ವಿಕಲಚೇತನರಾಗಿರುವ, ತೀರಾ ವಯಸ್ಸಾದ ಹಾಗೂ ಅಸ್ವಸ್ಥ ಬಂದಿಗಳು ಇರುತ್ತಾರೆ.

**87. ಪ್ರತಿ ದುರ್ಬಲ ಗುಂಪಿಗೂ ಎಂತಹ ವಿಶೇಷ ಗಮನ (ನಿಗಾ) ಕೊಡಬಹುದು?**

**A) ಮಹಿಳಾ ಬಂದಿಗಳು:**

a. ಮಹಿಳಾ ಬಂದಿಗಳನ್ನು ಪ್ರತ್ಯೇಕ ಕೊಠಡಿಗಳಲ್ಲಿ ಬಂಧಿಸಿದ್ದು, ಮಹಿಳಾ ಸಿಬ್ಬಂದಿಗಳಿಂದ ಮಾತ್ರ ನಿಗಾವಹಿಸುವಂತಿರಬೇಕು.

b. ಕಾರಾಗೃಹದಲ್ಲಿ ದಾಖಲಾತಿ ಮಾಡಿಕೊಳ್ಳುವ ಸಮಯದಲ್ಲಿ ಮಹಿಳಾ ಬಂದಿಯನ್ನು ಒಬ್ಬ ಮಹಿಳಾ ವೈದ್ಯರಿಂದ ಪರಿಶೀಲನೆ ಮಾಡಿಸಿ, ಮಹಿಳಾ ಸಿಬ್ಬಂದಿವರ್ಗದಿಂದ ಕೂಲಂಕಷವಾಗಿ ತಪಾಸಣೆಗೆ ಒಳಪಡಿಸಬೇಕು. ದಾಖಲಾತಿ ಸಮಯದಲ್ಲಿ, ಮಹಿಳಾ ಬಂದಿಯು ಗರ್ಭಿಣಿ ಎಂದು ತಿಳಿದು ಬಂದರೆ, ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞ ವೈದ್ಯರಿಂದ ಕೂಲಂಕಷವಾಗಿ ವೈದ್ಯಕೀಯ ಪರೀಕ್ಷೆ ಮಾಡಿಸಬೇಕು. ಇಂತಹ ಮಹಿಳಾ ಬಂದಿಗಳಿಗೆ ಪ್ರಸವ ಪೂರ್ವ, ಪ್ರಸವ ಮತ್ತು ಪ್ರಸವೋತ್ತರ ಶುಶ್ರೂಷೆಗಳನ್ನು ಒದಗಿಸಬೇಕು. ಅಂತಹ ಬಂದಿಗೆ ವಿಶೇಷವಾದ ಆಹಾರವನ್ನು ಒದಗಿಸಬೇಕು.

c. ಮಹಿಳೆಯರ ಉತ್ತಮ ಆರೋಗ್ಯಕ್ಕೆ, ಕಾರಾಗೃಹದ ನೈರ್ಮಲ್ಯ ಮತ್ತು ಅರೋಗ್ಯಕರ ವಾತಾವರಣ ಬಹಳ ಮುಖ್ಯ. ಆದ್ದರಿಂದ ಅವುಗಳನ್ನು ಒದಗಿಸುವುದೂ ಮಾತ್ರವಲ್ಲದೆ ಅವರ ಖಾಸಗೀತನಕ್ಕೂ ಕಾರಾಗೃಹದಲ್ಲಿ ವ್ಯವಸ್ಥೆಯನ್ನು ಮಾಡಬೇಕು.

**B) ಬಂದಿಗಳ ಮಕ್ಕಳು:**

a. ಕಾರಾಗೃಹದಲ್ಲಿ ಜನಿಸಿದ ಮಗುವಿನ ಜನನವನ್ನು, ಪ್ರಾಂತೀಯ ಜನನ ದಾಖಲಾತಿಯ ಕಛೇರಿಯಲ್ಲಿ ಕಾರಾಗೃಹದಲ್ಲಿ ಜನಿಸಿದ ಮಗು ಎಂಬುದನ್ನು ನಮೂದಿಸದೆ ದಾಖಲಿಸಬೇಕು.

b. ಮಗು ಕಾರಾಗೃಹದಲ್ಲಿ ತನ್ನ ತಾಯಿಯೊಂದಿಗೆ ಇರಬಹುದು ಅಥವಾ ಅಪರೂಪದ ಸಂದರ್ಭಗಳಲ್ಲಿ ತಂದೆಯೊಂದಿಗೂ ಇರಬಹುದು. ಹೀಗೆ ಆರು ವರ್ಷಗಳ ತನಕ ಇರಬಹುದು. ತದನಂತರದ ಅವರ ಮನೆಗೆ ಅಥವಾ ಪಾಲನಾ ಗೃಹಕ್ಕೆ (ಮಗುವಿಗೆ ಇನ್ನಾವುದೇ ವಾಸಸ್ಥಳ ಇಲ್ಲದಿದ್ದಲ್ಲಿ) ಕಳುಹಿಸಬೇಕು.

c. ಕಾರಾಗೃಹದಲ್ಲಿನ ಮಕ್ಕಳಿಗೆ ಆಯಾ ಪ್ರಾಂತೀಯ ಹವಾಗುಣಕ್ಕನುಗುಣವಾಗಿ ವಸ್ತ್ರಗಳನ್ನು ಒದಗಿಸಬೇಕು. ಮಕ್ಕಳ ವಯಸ್ಸಿಗನುಗುಣವಾದ ಕ್ಯಾಲೋರಿ ಯುಕ್ತ ಆಹಾರವನ್ನು ಕೊಡಬೇಕು ಮತ್ತು ಪೊಲಿಯೋ ರೋಗಕ್ಕೂ ಸೇರಿಸಿ ಇತರೆ ರೋಗಗಳ ವಿರುದ್ಧ ಲಸಿಕೆಗಳನ್ನು (Vaccinatin) ಕೊಡಿಸಬೇಕು.

d. ಮಹಿಳಾ ಬಂದಿಯ ಮಕ್ಕಳಿಗೆ ಯುಕ್ತ ಶಿಕ್ಷಣ ಮತ್ತು ಮನರಂಜನಾ ಚಟುವಟಿಕೆಗಳನ್ನು ಕೊಡಬೇಕು. ಇಂತಹ ಮಕ್ಕಳ ತಾಯಂದಿರು ಕಾರಾಗೃಹದಲ್ಲಿ ಕೆಲಸ ಮಾಡುತ್ತಿರುವಾಗ ಅವರ ಮಕ್ಕಳನ್ನು ಶಿಶುಧಾಮ/ಶಿಶುಪಾಲನ ಕೇಂದ್ರಗಳಲ್ಲಿ ಇರಿಸಬೇಕು. ಈ ಮಕ್ಕಳನ್ನು ಮಹಿಳಾ ಪಾಲಕಿ ಅಥವಾ ದಾದಿಯ ಪಾಲನೆಯಲ್ಲಿ ಇರಿಸಬೇಕು.

**C) ಯುವ ಅಪರಾಧಿಗಳು:**

a. ಚಿ. 18 ಮತ್ತು 21 ವರ್ಷಗಳ ನಡುವಿನ ಅಪರಾಧಿಗಳನ್ನು ಪ್ರತ್ಯೇಕವಾಗಿರಿಸಬೇಕು. ಇತರೆ ಬಂದಿಗಳ ಸಂಪರ್ಕ/ಸಹವಾಸದಲ್ಲಿ ಇರಿಸಬಾರದು.

b. 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಯಾವುದೇ ವ್ಯಕ್ತಿಯನ್ನು ಕಾರಾಗೃಹದಲ್ಲಿ ಇರಿಸಬಾರದು. ಒಂದು ಪಕ್ಷ ಬಂದಿಯು 18 ವರ್ಷ ವಯಸ್ಸಿಗಿಂತ ಕಡಿಮೆ ಎಂದು ಕಂಡುಬಂದರೆ ಅಥವಾ ಹೇಳಿಕೊಂಡರೆ, ತಕ್ಷಣವೇ ಕಾನೂನು ಸೇವಾ ಪ್ರಾಧಿಕಾರದ ಅಧಿಕಾರಿಗಳಿಗೆ, ಸಂಬಂಧಪಟ್ಟ ನ್ಯಾಯಾಲಯಕ್ಕೆ ತಿಳಿಸಿದ ನಂತರ ಪ್ರಾಂತೀಯ ಮಕ್ಕಳ ಕಲ್ಯಾಣ ಸಮಿತಿಗೆ ಕಳುಹಿಸಬೇಕು.

c. ಇಂತಹವರ ಬೆಳವಣಿಗೆಗೆ ತಕ್ಕಂತಹ ಆಹಾರವನ್ನು ಒದಗಿಸಬೇಕು.

d. ಯುವ ಅಪರಾಧಿಗಳ ಶೈಕ್ಷಣಿಕ ಅಗತ್ಯಗಳನ್ನು ಯುಕ್ತ ರೀತಿಯಲ್ಲಿ ಪೂರೈಸಿ ಅವರ ವೈಯಕ್ತಿಕ ಆರೋಗ್ಯ, ಶೈಕ್ಷಣಿಕ, ಸಾಮಾಜಿಕ ಮತ್ತು ನೈತಿಕ ಶಿಕ್ಷಣ, ಔದ್ಯೋಗಿಕ ಶಿಕ್ಷಣ, ಕಲೆ ಮತ್ತು ಕರಕುಶಲತೆಯ ಶಿಕ್ಷಣಗಳನ್ನು ಒದಗಿಸಬೇಕು.

**D) ವಿದೇಶಿ ಬಂದಿಗಳು:**

a. ಇಂತಹವರನ್ನು ಕಾರಾಗೃಹಕ್ಕೆ ದಾಖಲಾತಿ ಮಾಡಿಕೊಂಡ ಕೂಡಲೇ ಅಧೀಕ್ಷಕರು ಸಮುಚಿತ ಮಾರ್ಗದ ಮೂಲಕ ಸಂಬಂಧಪಟ್ಟ ರಾಯಭಾರಿ ಕಛೇರಿಗೆ (Embassy) ತಿಳಿಸಬೇಕು.

b. ವಿದೇಶಿ ಬಂದಿಗಳಿಗೆ (FNPs) ಅವರು ತಮ್ಮ ದೂತಾವಾಸ (ಕಾನ್ಸುಲೇಟ್)

ಕಚೇರಿ ಸಿಬ್ಬಂದಿಯವರೊಂದಿಗೆ ಯುಕ್ತವಾದ ರೀತಿಯಲ್ಲಿ ಸಂಪರ್ಕಿಸಲು ವ್ಯವಸ್ಥೆಯನ್ನು ಕಲ್ಪಿಸಬೇಕು.

c. ಅವರು ತಮ್ಮ ದೇಶದಲ್ಲಿರುವ ಕುಟುಂಬ, ಮಿತ್ರರು, ಸಂಬಂಧಿಕರುಗಳೊಂದಿಗೆ ಪತ್ರ ಮುಖೇನ ಸಂಪರ್ಕಿಸಲು ಅಗತ್ಯವಾದ ಅಂಚೆಪತ್ರ ಮತ್ತು ಸ್ಟ್ಯಾಂಪ್‌ಗಳನ್ನು ಕೊಂಡುಕೊಳ್ಳಲು ಅನುಮತಿಸಬೇಕು. ಒಂದು ಪಕ್ಷ ಅವರಲ್ಲಿ ಅವುಗಳನ್ನು ಕೊಂಡುಕೊಳ್ಳುವಷ್ಟು ಹಣವನ್ನು ಜಮಾ ಮಾಡಿಲ್ಲದಿದ್ದರೆ ಕಾರಾಗೃಹವೇ ಆ ಮೊತ್ತವನ್ನು ಒದಗಿಸಬೇಕು.

d. ವಿದೇಶಿ ಬಂದಿಗಳಿಗೆ (FNPs) ಅಗತ್ಯ ಸಂರಕ್ಷಣಾ ಕ್ರಮಗಳನ್ನು ಪಾಲಿಸಿ ವೀಡಿಯೊ ಕಾನ್ಫರೆನ್ಸ್ ಅಥವಾ ಇ-ಮೇಲ್ ಸೌಲಭ್ಯದ ಮೂಲಕ ಅವರ ಕುಟುಂಬದವರನ್ನು ಸಂಪರ್ಕಿಸಲು ಅನುವು ಮಾಡಿಕೊಡಬೇಕು.

**E) ವಿಶೇಷ ಚೇತನ ಮತ್ತು ಮಾನಸಿಕ ಅಸ್ವಸ್ಥ ಬಂದಿಗಳು:**

a. ವಿಶೇಷ ಚೇತನ ಬಂದಿಗಳು ಕಾರಾಗೃಹಗಳಲ್ಲಿ ದೊರೆಯುವಂತಹ ಯಾವುದೇ ಪ್ರಕಾರದ ಸೌಲಭ್ಯಗಳು, ಕಾರ್ಯಕ್ರಮಗಳು, ಯೋಜನೆಗಳು ಮತ್ತು ಸೇವೆಗಳಿಗೆ ಇತರ ಬಂದಿಗಳಂತೆ ಸಮಾನ ಹಕ್ಕುಗಳನ್ನು/ಅವಕಾಶಗಳನ್ನು ಪಡೆದಿರುತ್ತಾರೆ.

b. ಶ್ರವಣ ದೋಷ ಇರುವ ಬಂದಿಗಳಿಗೆ, ಶೈಕ್ಷಣಿಕ ಮತ್ತು ಔದ್ಯೋಗಿಕ ಕಾರ್ಯಕ್ರಮಗಳಲ್ಲಿ ವರ್ಗೀಕೃತ ಶ್ರವಣ ವ್ಯವಸ್ಥೆ (Classified Hearing) ಹಾಗೂ ನ್ಯಾಯಾಲಯದ ವಿಚಾರಣೆಗಳ ಸಮಯದಲ್ಲಿ ಸಾಂಕೇತಿಕ ಭಾಷಾ ನಿರೂಪಕರನ್ನು ಒದಗಿಸಬೇಕು.

c. ಮಾನಸಿಕ ಅಸ್ವಸ್ಥ ಬಂದಿಗಳಿಗೆ ಸೂಕ್ತ ಶುಶ್ರೂಷೆ ಮತ್ತು ಚಿಕಿತ್ಸೆಗಳನ್ನು ಒದಗಿಸಬೇಕು. ಅವರ ಸಮಸ್ಯೆಗಳನ್ನು ನಿಯತಕಾಲಿಕವಾಗಿ ಪರೀಕ್ಷಿಸಿ, ಬಹಳ ದೀರ್ಘಕಾಲಿಕ ಅಥವಾ ಅನಿಶ್ಚಿತಕಾಲಿಕ ಕಾರಾಗೃಹ ವಾಸವನ್ನು ತಪ್ಪಿಸಬೇಕು.

**F) ಮರಣ ದಂಡನೆ ಬಂದಿಗಳು:**

a. ಇಂತಹ ಬಂದಿಗಳು ತಮ್ಮ ಕುಟುಂಬ, ಮಿತ್ರರ, ಸಂಬಂಧಿಕರ, ವಕೀಲರ ಜೊತೆ ಸಂದರ್ಶಿಸಲು ವಾರಕ್ಕೊಮ್ಮೆ ಅಥವಾ ಅಗತ್ಯವಿದ್ದಲ್ಲಿ ಇನ್ನೂ ಹೆಚ್ಚಿನ ಸಂದರ್ಶನಕ್ಕೆ ಒಬ್ಬ ಕಾರಾಗೃಹ ಅಧಿಕಾರಿಯ ಸಮಕ್ಷಮದಲ್ಲಿ ಅನುಮತಿಸಬೇಕು.

b. ಇಂತಹ ಬಂದಿಗಳು ತಾವು ಆಚರಿಸುವ ಅಥವಾ ಅನುಸರಿಸುವಂತಹ ಅವರ ನಂಬಿಕೆಯ ಧಾರ್ಮಿಕ ಗುರುಗಳನ್ನು/ವ್ಯಕ್ತಿಗಳನ್ನು ಭೇಟಿ ಮಾಡಲು ಅನುಮತಿಸಬೇಕು.

c. ಇಂತಹ ಬಂದಿಗಳಿಗೆ ಧಾರ್ಮಿಕ ಪುಸ್ತಕಗಳು, ಚಿತ್ರಗಳು, ಸಂಕೇತಗಳು, ವೃತ್ತಪತ್ರಿಕೆಗಳು ಮತ್ತು ಪುಸ್ತಕಗಳನ್ನು ಒದಲು ಅವಕಾಶವನ್ನು ಕಲ್ಪಿಸಬೇಕು ಹಾಗೂ ಅಗತ್ಯವಿದ್ದಲ್ಲಿ ಲೇಖನ ಸಾಮಗ್ರಿಗಳು ಮುಂತಾದವುಗಳನ್ನು ಒದಗಿಸಬೇಕು.

d. ಇಂತಹ ಬಂದಿಗಳನ್ನು ಪ್ರತ್ಯೇಕ ಕೋಣೆಯಲ್ಲಿ ಇರಿಸಬೇಕು ಮತ್ತು ಸಾಕಷ್ಟು ಗಾಳಿ, ಬೆಳಕು ಇರುವಂತಹ ಕೋಣೆಯಲ್ಲಿ ಹಗಲು ಮತ್ತು ರಾತ್ರಿ ಒಬ್ಬ ಪಾಲಕನ ಸುಪರ್ದಿನಲ್ಲಿ ಇರಿಸಬೇಕು.

# ಅಪರಾಧ ವಿಚಾರಣೆಯ ಹಂತಗಳು

**88. ವಿಚಾರಣೆ ಎಂದರೇನು?**

ಯಾವುದೇ ಒಂದು ಪ್ರಕರಣಕ್ಕೆ ಸಂಬಂಧಿಸಿದ ಅಂಶಗಳನ್ನು, ಸಾಕ್ಷಿ ಆಧಾರಗಳನ್ನು ಪರೀಕ್ಷಿಸುವ ಪ್ರಕ್ರಿಯೆಗೆ ವಿಚಾರಣೆ ಎನ್ನುತ್ತಾರೆ. ಇದು ಕಾನೂನು ಕ್ರಮಗಳನ್ನು ಹಾಗೂ ವಾದ–ಪ್ರತಿವಾದಗಳನ್ನು ಮಂಡಿಸುವ ಪ್ರಕ್ರಿಯೆಯಾಗಿದೆ ಮತ್ತು ಇವುಗಳನ್ನಾಧರಿಸಿ ನ್ಯಾಯಾಧೀಶರು ಕೈಗೊಳ್ಳುವ ಒಂದು ತೀರ್ಮಾನವಾಗಿರುತ್ತದೆ.

**89. ವಿಚಾರಣೆಯ ವಿವಿಧ ಹಂತಗಳು ಯಾವುವು?**

**1**

**ಬಂಧನ:**

ಯಾವುದೇ ಒಂದು ವ್ಯಕ್ತಿ ಅಪರಾಧವನ್ನು ಮಾಡಿದ್ದಾನೆ ಅಥವಾ ಮಾಡಲಿದ್ದಾನೆ ಎಂಬುದಕ್ಕೆ ಸಾಕಷ್ಟು ಆಧಾರಗಳಿದ್ದರೆ ಅವನನ್ನು ಬಂಧಿಸಬಹುದು. ಅವನನ್ನು/ಅವಳನ್ನು ಬಂಧಿಸಿದ ನಂತರ ಪೊಲೀಸ್ ಠಾಣೆಗೆ ಕರೆದೊಯ್ಯಲಾಗುತ್ತದೆ. ಒಂದು ಪಕ್ಷ ಅಪರಾಧವು ಜಾಮೀನು ನೀಡುವಂತಹ ಅಪರಾಧವಾಗಿದ್ದರೆ ಆ ವ್ಯಕ್ತಿಯು ಸಂಬಂಧಿತ ಪೊಲೀಸ್ ಠಾಣೆಯಿಂದಲೇ ಜಾಮೀನನ್ನು ಪಡೆಯಬಹುದು.

**2**

**ಹಾಜರುಪಡಿಸುವಿಕೆ:**

ಪೋಲಿಸರು ಒಬ್ಬ ಆರೋಪಿಯನ್ನು ಬಂಧಿಸಿದ 24 ಗಂಟೆಯೊಳಗೆ ನ್ಯಾಯಾಧೀಶರ ಮುಂದೆ ಅವನನ್ನು/ಅವಳನ್ನು ಹಾಜರುಪಡಿಸಬೇಕು. ನ್ಯಾಯಾಲಯದಲ್ಲಿ ಪೊಲೀಸರು ಪ್ರಕರಣಕ್ಕೆ ಸಂಬಂಧಿಸಿದ ತನಿಖಾ ಪತ್ರಗಳನ್ನು ಸಲ್ಲಿಸುತಾರೆ. ಪೊಲೀಸರು ಹೆಚ್ಚಿನ ತನಿಖೆಗಾಗಿ ಅವನನ್ನು/ಅವಳನ್ನು ತಮ್ಮ ಸುಪರ್ದಿಗೆಯೆಲ್ಲಿ ಇನ್ನೂ ಹೆಚ್ಚಿನ ಸಮಯಾವಕಾಶಕ್ಕಾಗಿ ಮನವಿಯನ್ನು ಮಾಡಿಕೊಳ್ಳಬಹುದು. ನ್ಯಾಯಾಧೀಶರರು ಪೋಲಿಸರು ಒದಗಿಸಿರುವಂತಹ ಸಾಕ್ಷಿ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಅವನನ್ನು/ಅವಳನ್ನು ಪೊಲೀಸ್ ಸುಪರ್ದಿಗೆ ಮರಳಿ ಕೊಡಬಹುದು ಅಥವಾ ಕಾರಾಗೃಹಕ್ಕೆ (ನ್ಯಾಯಾಂಗ ಬಂಧನಕ್ಕೆ) ಕಳುಹಿಸಬಹುದು ಅಥವಾ ಜಾಮೀನನ್ನು ಮಂಜೂರು ಮಾಡಬಹುದು ಅಥವಾ ಅವನನ್ನು/ಅವಳನ್ನು ಆರೋಪಗಳಿಂದ ಮುಕ್ತಗೊಳಿಸಿ ಬಿಡುಗಡೆ ಮಾಡಬಹುದು.

**3**

**ಆಪಾಧನೆ/ಆರೋಪಣಾ ಪಟ್ಟಿ:** ಆರೋಪ ಎಂದರೆ ಅವನು/ಅವಳು ಮಾಡಿರಬಹುದಾದ ಅಪರಾಧಕ್ಕೆ ಸಂಬಂಧಿಸಿದ ಔಪಚಾರಿಕ ಸೂಚನಾ ಪತ್ರ. ತನಿಖೆಯನ್ನು ಪೂರ್ಣಗೊಳಿಸಿದ ನಂತರ ಪೊಲೀಸರು ನ್ಯಾಯಾಲಯದಲ್ಲಿ ಆಪಾದನೆ/ಆರೋಪಣಾ ಪಟ್ಟಿಯನ್ನು ಸಲ್ಲಿಸುತ್ತಾರೆ. ಆರೋಪಣಾ ಪಟ್ಟಿ ಪರಿಶೀಲಿಸಿದ ನಂತರ ನ್ಯಾಯಾಲಯವು ಆರೋಪಣೆಗಳ ಸ್ಪಷ್ಟನೆ ನೀಡಿ ಅವನನ್ನು/ಅವಳನ್ನು ಅಪರಾಧವನ್ನು ಎಸಗಿದ್ದಾರೆ ಎಂಬುದನ್ನು ನಿರ್ಧರಿಸಲು ಅವನು/ಅವಳಿಗೆ ತಾವು ತಪ್ಪಿತಸ್ಥರೂ ಅಥವಾ ತಪ್ಪಿತಸ್ಥರಲ್ಲ ಎಂಬುದನ್ನು ಮನವಿ ಮಾಡಿಕೊಳ್ಳಲು ಅವಕಾಶ ಇರುವಂತೆ ಸ್ಪಷ್ಟವಾಗಿ ಆಪಾದನೆ/ಆರೋಪಗಳನ್ನು ಓದಲಾಗುವುದು.

**4**

**ವಿಚಾರಣೆ:**

ಅವನು/ಅವಳು ತಾವು ತಪ್ಪಿತಸ್ಥರಲ್ಲ ಎಂಬುದನ್ನು ಸಮರ್ಥಿಸಿಕೊಳ್ಳುವಿಕೆಯಾಗಿದೆ. ಒಂದು ವಿಚಾರಣೆಯು ಈ ಕೆಳಕಂಡ ಹಂತಗಳನ್ನು ಹೊಂದಿದೆ:

1. ದಂಡ ಪ್ರಕ್ರಿಯಾ ಸಂಹಿತೆ (CrPC) U/S 313 ನಲ್ಲಿ ಆಪಾದಿತನ ಹೇಳಿಕೆ.
2. ಮೌಖಿಕ ಮತ್ತು ಸಾಕ್ಷಿ ಆಧಾರಗಳ ದಾಖಲೆ.
3. ಪರ–ವಿರೋಧ ವಕೀಲರ ವಾದಗಳು.
4. ನ್ಯಾಯಾ ತೀರ್ಮಾನದ ಘೋಷಣೆ.

**5**

**ಸಜೆ ಅಥವಾ ಬಿಡುಗಡೆ:**

ವಿಚಾರಣೆ ಪೂರ್ಣಗೊಂಡ ನಂತರ ನ್ಯಾಯಾಲಯವು ಅವನು/ಅವಳು ತಪ್ಪಿತಸ್ಥರಲ್ಲ ಎಂದು ಕಂಡುಬಂದರೆ ಬಿಡುಗಡೆ ಮಾಡಬಹುದು (ನ್ಯಾಯಾಂಗ ಬಂಧನದಲ್ಲಿದ್ದರೆ ಬಂಧ ಮುಕ್ತಗೊಳಿಸಬಹುದು). ಒಂದು ವೇಳೆ ಅವನು/ಅವಳು ತಪ್ಪಿತಸ್ಥರು ಎಂದು ಕಂಡುಬಂದರೆ ಅವನಿಗೆ/ಅವಳಿಗೆ ದಂಡಾದೇಶ (ಸಜೆ) ನೀಡಲಾಗುತ್ತದೆ.

**6**

**ಮೇಲ್ಮನವಿ:**

ದಂಡಾದೇಶದ ತೀರ್ಮಾನದಿಂದ ಅಥವಾ ಬಿಡುಗಡೆ/ಸಜೆ/ಶಿಕ್ಷೆಯ ಕಡಿತ ಮುಂತಾದವುಗಳಿಗೆ ಸಂಬಂಧಿಸಿದಂತೆ ಅನ್ಯಾಯಕ್ಕೊಳಗಾದ/ಅಪರಾಧಿ ಒಂದು ನಿರ್ದಿಷ್ಟ ಕಾಲ ಮಿತಿಯಲ್ಲಿ ತನ್ನ ಮೇಲ್ಮನವಿಯನ್ನು ಸಲ್ಲಿಸಬಹುದು. ಮೇಲ್ಮನವಿಯ ವಿಚಾರಣೆಯನ್ನು ಕಾಯ್ದಿರಿಸಿ ನ್ಯಾಯಾಲಯವು ಅವನಿಗೆ/ಅವಳಿಗೆ ಶಿಕ್ಷೆಯ ಅಮಾನತ್ತನ್ನು ಮಂಜೂರು ಮಾಡಬಹುದು.

**90. ಪ್ರಕರಣಗಳ ವಿಚಾರಣಾ ದಿನದಂದು ಬಂದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾರು ಜವಾಬ್ದಾರರು?**

ವಿಚಾರಣಾ ದಿನದಂದು ಬಂದಿಯು ನ್ಯಾಯಾಲಯದಲ್ಲಿ ಹಾಜರಿಬೇಕು. ಅಂದರೆ, ಆರೋಪಣಾ ಪಟ್ಟಿಯನ್ನು ಮಂಡಿಸುವ ಮೊದಲು ಬಂದಿಯು ನ್ಯಾಯಾಲಯದ ವಿಚಾರಣೆಗೆ ಕಾರಾಗೃಹದಲ್ಲಿಯೇ ವೀಡಿಯೊ ಕಾನ್ಫರೆನ್ಸಿಂಗ್ ಮೂಲಕ ಹಾಜರಾಗಲು ಅನುಮತಿಯಿದೆ. ಹೀಗಿದ್ದರೂ ಆರೋಪಿಯ ಭೌತಿಕ ಇರುವಿಕೆಯ ಅಗತ್ಯವಿದ್ದಲ್ಲಿ ಅಥವಾ ನ್ಯಾಯಾಲಯದ ವಿವರಣೆಗೆ ಭೌತಿಕವಾಗಿ ಹಾಜರಾಗಬೇಕಾದಲ್ಲಿ ಪೊಲೀಸರು ಕಾರಾಗೃಹದಿಂದ ನ್ಯಾಯಾಲಯಕ್ಕೆ ಬಂಧಿತರನ್ನು ಬೆಂಗಾವಲಿನಲ್ಲಿ ಕರೆದುಕೊಂಡು ಹೋಗಬೇಕು.

ಹೀಗೆ ಬೆಂಗಾವಲಿನಲ್ಲಿ ಕರೆದುಕೊಂಡು ಹೋಗಿಬರಲು ಸಾಕಾಗುವಷ್ಟು ಪೊಲೀಸ್ ಸಿಬ್ಬಂದಿವರ್ಗದವರ ಸಂಖ್ಯೆಯನ್ನು ಕಾರಾಗೃಹ ಆಡಳಿತವು ಮುಂಚಿತವಾಗಿಯೇ ಅವಶ್ಯಕತೆಗೆ ತಕ್ಕಂತೆ ಸಿದ್ಧತೆಯನ್ನು ಮಾಡಿಕೊಳ್ಳಬೇಕು.

**91. ಸಾಕಷ್ಟು ಸಿಬ್ಬಂದಿಯ ಕೊರತೆಯಿಂದಾಗಿ ಅಥವಾ ಆಡಳಿತಾತ್ಮಕ ಕಾರಣಗಳಿಂದಾಗಿ ಬಂದಿಗಳನ್ನು ವಿಚಾರಣೆಯ ಸಮಯದಲ್ಲಿ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಲು ಸಾಧ್ಯವಾಗದಿದ್ದರೆ/ಕರೆದುಕೊಂಡು ಹೋಗದಿದ್ದರೆ ಬಂದಿಯು ಏನು ಮಾಡಬಹುದು? ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದರೂ ಕೂಡ ನ್ಯಾಯಾಲಯದಲ್ಲಿನ ಬಂಧನ ಗೃಹದಲ್ಲಿರಿಸಿ, ನ್ಯಾಯಾಧೀಶರ ಮುಂದೆ ಭೌತಿಕವಾಗಿ ಹಾಜರುಪಡಿಸದಿದ್ದರೆ ಏನು ಮಾಡಬೇಕು? ವೀಡಿಯೊ ಕಾನ್ಫರೆನ್ಸಿಂಗ್ ಮೂಲಕ ಹಾಜರುಪಡಿಸಿದ್ದಾಗ್ಯೂ, ಕಾನೂನು ಅಧಿಕಾರಿಗಳ ಜೊತೆ ಸಂಪರ್ಕಿಸಲು ಅವಕಾಶ ಕೊಡದಿದ್ದಲ್ಲಿ ಬಂದಿಯು ಏನು ಮಾಡಬೇಕು?**

ಇಂತಹ ಪ್ರಸಂಗಗಳಲ್ಲಿ ಬಂದಿಯು ತನ್ನ ವಕೀಲರು ಅಥವಾ ಕಾರಾಗೃಹದ ಕಾನೂನು ಸಹಾಯ ಕೇಂದ್ರದ ಸದಸ್ಯರ ಮೂಲಕ ನ್ಯಾಯಾಲಯಕ್ಕೆ ತನ್ನನ್ನು ಭೌತಿಕವಾಗಿ ಹಾಜರುಪಡಿಸದೇ ಇರುವುದರ ಬಗ್ಗೆ ತಿಳಿಸಿ ಆದಷ್ಟು ಶೀಘ್ರವಾಗಿ ನ್ಯಾಯಾಲಯದ ಮುಂದೆ ತನ್ನನ್ನು ಭೌತಿಕವಾಗಿ ಹಾಜರುಪಡಿಸುವಂತೆ ಮನವಿ ಮಾಡಿಕೊಳ್ಳಬಹುದು.

**92. ಸಂಜ್ಞೆಯ ಅಪರಾಧ ಮತ್ತು ಅಸಂಜ್ಞೆಯ ಅಪರಾಧಗಳು ಎಂದರೇನು?**

**ಸಂಜ್ಞೆಯ ಅಪರಾಧಗಳು:** ಯಾವುದೇ ಒಂದು ಪ್ರಕರಣದಲ್ಲಿ ಯಾವುದೇ ವಿಚಾರಣಾ ಅಧಿಪತ್ರವಿಲ್ಲದೆ ಪೊಲೀಸ್ ಅಧಿಕಾರಿಯೂ ಒಬ್ಬ ವ್ಯಕ್ತಿಯನ್ನು ಬಂಧಿಸಬಹುದಾದಂತಹ ಅಪರಾಧಗಳು. ಸಾಮಾನ್ಯವಾಗಿ ಇಂತಹ ಅಪರಾಧಗಳು ಕೊಲೆ, ಬಲಾತ್ಕಾರ, ಅತ್ಯಾಚಾರ, ಅಪಹರಣ, ವ್ಯಪಹರಣ ಮುಂತಾದಂತಹ ಅಪರಾಧಗಳಾಗಿರುತ್ತದೆ.

**ಅಸಂಜ್ಞೆಯ ಅಪರಾಧಗಳು:** ಯಾವುದೇ ವಿಚಾರಣಾ ಅಧಿಪತ್ರಗಳಿಲ್ಲದೆ ಒಬ್ಬ ವ್ಯಕ್ತಿಯನ್ನು ಬಂಧಿಸಲು ಪೊಲೀಸ್ ಅಧಿಕಾರಿಗೆ ಯಾವುದೇ ಅಧಿಕಾರ ಇರುವುದಿಲ್ಲ. ಇಂತಹ ಅಪರಾಧಗಳು ಸಾಮಾನ್ಯವಾಗಿ ಬಹಳ ಗಂಭೀರ ಸ್ವರೂಪದ್ದಾಗಿರುವುದಿಲ್ಲ. ಹೊಡೆದಾಟ, ವಂಚನೆ, ಕಿಡಿಗೇಡಿತನ ಮುಂತಾದಂತಹ ಅಪರಾಧಗಳಾಗಿರುತ್ತವೆ. ನ್ಯಾಯಾಧೀಶರಿಂದ ಅನುಮತಿಯನ್ನು ಪಡೆಯುವುದು ಪೊಲೀಸ್ ಅಧಿಕಾರಿಗಳಿಗೆ ಒಂದು ವಿಧಿವತ್ತಾದದ್ದು.

**93. ಜಾಮೀನು ಸಹಿತ ಮತ್ತು ಜಾಮೀನು ರಹಿತ ಅಪರಾಧಿಗಳು ಎಂದರೇನು?**

ದಂಡ ಪ್ರಕ್ರಿಯಾ ಸಂಹಿತೆ (ಅಡಿಕಅ) ಯ ಅಡಿಯಲ್ಲಿ ಅಪರಾಧಗಳನ್ನು ಜಾಮೀನು ಸಹಿತ ಅಥವಾ ಜಾಮೀನು ರಹಿತ ಅಪರಾಧಗಳೆಂದು ವರ್ಗೀಕರಿಸಲಾಗಿದೆ. ಜಾಮೀನು ಸಹಿತ ಅಪರಾಧಗಳು ಬಹಳ ಕಡಿಮೆ ಗಂಭೀರ ಸ್ವರೂಪದ್ದಾಗಿದ್ದರೆ, ಜಾಮೀನು ರಹಿತ ಅಪರಾಧಗಳು ಗಂಭೀರ ಸ್ವರೂಪದ ಅಪರಾಧಗಳಾಗಿರುತ್ತದೆ. ಒಬ್ಬ ಆಪಾದಿತನನ್ನು ಜಾಮೀನು ರಹಿತ ಆಪಾದನೆಯ ಅಡಿಯಲ್ಲಿ ಆರೋಪಿಸಲಾಗಿದ್ದರೂ ಸಹ ಜಾಮೀನನ್ನು ನೀಡಬಹುದು. ಆದರೆ ಇದು ನ್ಯಾಯಾಲಯದ ನಿರ್ಧಾರಕ್ಕೆ (ವಿವೇಚನೆಗೆ) ಬಿಟ್ಟದ್ದು. ಅಸಂಜ್ಞೆಯ ಅಪರಾಧಗಳಲ್ಲಾದರೆ, ಆಪಾದಿತನು ವೈಯಕ್ತಿಕ ಕರಾರು ಪತ್ರವನ್ನು ಅಥವಾ ಇನ್ನಾವುದಾದರೂ ಖಾತರಿಗಳನ್ನು ನೀಡಿದರೆ ಬಿಡುಗಡೆ ಹಕ್ಕನ್ನು ಪಡೆಯುತ್ತಾನೆ.

**94. ಜಾಮೀನು ಎಂದರೇನು? ಜಾಮೀನುದಾರಿಕೆ ಮತ್ತು ಕರಾರು ಪತ್ರಗಳು ಎಂದರೇನು?**

ವಿಚಾರಣೆಗಾಗಿ ಕಾಯ್ದಿರುವ ಬಂದಿಯ ತಾತ್ಕಾಲಿಕ ಬಿಡುಗಡೆಯೇ ಜಾಮೀನು. ಜಾಮೀನಿನಲ್ಲಿ ಬಿಡುಗಡೆಯು ನಿರ್ಬಂಧಿತವಾಗಿರಬಹುದು ಅಥವಾ ಅನಿರ್ಬಂಧಿತವಾಗಿಯೂ ಇರಬಹುದು. ಜಾಮೀನಿನ ಮೇಲೆ ಒಬ್ಬ ವ್ಯಕ್ತಿಯನ್ನು ಬಿಡುಗಡೆ ಮಾಡುವ ಮೊದಲು ಅಥವಾ ಸ್ವಂತ ಕರಾರು ಪತ್ರದ ಮೇಲೆ ಬಿಡುಗಡೆ ಮಾಡುವ ಮೊದಲು ಆ ವ್ಯಕ್ತಿಯಿಂದ ಬಿಡುಗಡೆಗೆ ಸರಿಹೊಂದುವಂತಹ ಹಣದ

ಮೊತ್ತವನ್ನು ಅಂದರೆ ನ್ಯಾಯಾಲಯ ತೀರ್ಮಾನಿಸಿದ ಹಣದ ಮೊತ್ತವನ್ನು ಪಡೆದು ಸಲ್ಲಿಸಿರಬೇಕು. ತದನಂತರ ವ್ಯಕ್ತಿಯನ್ನು ಒಂದು ಅಥವಾ ಅದಕ್ಕಿಂತ ಹೆಚ್ಚಿನ ಖಾತರಿ ಮತ್ತು ನಿಬಂಧನೆಗಳೊಂದಿಗೆ ಕರಾರು ಪತ್ರದಲ್ಲಿ ಸೂಚಿಸಿರುವಂತಹ ಸಮಯ ಮತ್ತು ಸ್ಥಳಗಳಲ್ಲಿ ಹಾಜರಿರಲು ಮತ್ತು ನ್ಯಾಯಾಲಯ ತೀರ್ಮಾನಿಸಿದಂತೆ ಹಾಜರಿರಲು ಒಪ್ಪಿಗೆಯನ್ನು ಖಾತರಿಪಡಿಸಿಕೊಂಡ ನಂತರವೇ ಬಿಡುಗಡೆ ಮಾಡಲಾಗುತ್ತದೆ. 'ಖಾತರಿ' ಎಂದರೆ ಒಂದು ಪ್ರಮಾಣವನ್ನು ಸ್ವೀಕರಿಸಿ ಅದಕ್ಕನುಗುಣವಾಗಿ ನಡೆದುಕೊಳ್ಳುವುದು ಅಥವಾ ಇನ್ನೊಬ್ಬನ ಪರವಾಗಿ ಅಂದರೆ ತಪ್ಪಿತಸ್ಥರ ಪರವಾಗಿ ಹಾಮಿ ಇರುವ ಪ್ರಮಾಣಪತ್ರ, ವ್ಯಕ್ತಿಗತ ಕರಾರುಪತ್ರ/ಪ್ರಮಾಣಪತ್ರವು ಸಂಬಂಧಪಟ್ಟ ವ್ಯಕ್ತಿಯು ಕೆಲವು ನಿರ್ದಿಷ್ಟ ಚಟುವಟಿಕೆಗಳನ್ನು ಪೂರೈಸಲು ಅಥವಾ ಅವುಗಳಿಂದ ದೂರವಿರಲು ಒಪ್ಪಿಕೊಂಡಿರುವುದಕ್ಕೆ ಔಪಚಾರಿಕವಾಗಿ ಲಿಖಿತರೂಪದಲ್ಲಿ ಕೊಡುವ ಕರಾರುಪತ್ರ. ಒಂದು ಪಕ್ಷ ಇದನ್ನು ಪೂರೈಸಲು ವಿಫಲವಾದರೆ ಹೆಚ್ಚಿನ ಜುಲ್ಮಾನೆಯನ್ನು ನೀಡಬೇಕಾಗುತ್ತದೆ.

**95. ಜಾಮೀನು ಮೊತ್ತವನ್ನು/ಖಾತರಿಯನ್ನು ಒದಗಿಸಲು ಬಂದಿಯು ಅಸಮರ್ಥರಾದರೆ ಏನಾಗುತ್ತದೆ?**

ಜಾಮೀನು ಸಹಿತ ಪ್ರಕರಣಗಳಲ್ಲಿ ಒಂದು ಪಕ್ಷ ಆಪಾದಿತನು ಜಾಮೀನು/ಕರಾರು ಹಣವನ್ನು ಸಲ್ಲಿಸಲು ಅಥವಾ ಸಾಕಷ್ಟು ಖಾತರಿಯನ್ನು ಒದಗಿಸಲು ಅಸಮರ್ಥನಾಗಿದ್ದರೆ ಮತ್ತು ಬಂಧನದಲ್ಲಿ 07 ದಿನಗಳನ್ನು ಕಳೆದಿದ್ದರೆ ಅಂತಹವರನ್ನು ನಿರ್ಗತಿಕ/ಬಡವ (Indigenet) ಎಂದು ಪರಿಗಣಿಸಿ ಒಂದು ವ್ಯಕ್ತಿಗತ ಕರಾರು ಪತ್ರದ ಮೇಲೆ ತಕ್ಷಣವೇ ಬಿಡುಗಡೆ ಮಾಡಬೇಕು. ಜಾಮೀನು ರಹಿತ ಅಪರಾಧ ಪ್ರಕರಣಗಳಲ್ಲಿ ಬಂಧಿತನ ವಕೀಲನು ಜಾಮೀನಿನ ಮೊತ್ತವನ್ನು ಕಡಿಮೆ ಮಾಡಲು ನ್ಯಾಯಾಲಯವನ್ನು ಕೇಳಿಕೊಳ್ಳಬಹುದು. ಒಂದು ಪಕ್ಷ ಬಂದಿಯು ವಕೀಲರನ್ನು ಹೊಂದಿಲ್ಲದೆ ಇದ್ದರೆ ತನ್ನ ಸಹಾಯಕ್ಕಾಗಿ ಕಾರಾಗೃಹ ಕಾನೂನು ಸೇವಾ ಕೇಂದ್ರವನ್ನು ಸಂಪರ್ಕಿಸಬಹುದು. ಇಂತಹ ಎಲ್ಲಾ ಪ್ರಕರಣಗಳೂ ಸಹ ವಿಚಾರಣಾಬಂದಿ ಪುನರ್‌ಪರಿಶೀಲನಾ ಸಮಿತಿಯಿಂದ ಪುನರ್ ಪರಿಶೀಲನೆಗೆ ಅರ್ಹವಾಗಿರುತ್ತದೆ.

**96. ಜಾಮೀನಿನ ನಿಬಂಧನೆಗಳಿಗೆ ವ್ಯಕ್ತಿಯು ಬದ್ಧನಾಗಿರದಿದ್ದರೆ ಏನಾಗುತ್ತದೆ?**

ಸಾಕಷ್ಟು ಕಾರಣಗಳನ್ನು ಒದಗಿಸದೆ ನ್ಯಾಯಾಲಯದ ವಿಚಾರಣೆಗೆ ಹಾಜರಾಗುವಿಕೆಯನ್ನು ತಪ್ಪಿಸಿಕೊಂಡಿದ್ದನ್ನು 'ಜಾಮೀನಿನಿಂದ ತಲೆ ತಪ್ಪಿಸಿಕೊಳ್ಳುವಿಕೆ' ಎಂದು ಪರಿಗಣಿಸಲಾಗುತ್ತದೆ. ಒಬ್ಬ ವ್ಯಕ್ತಿ ಒಂದು ಪಕ್ಷ ತನ್ನ ಜಾಮೀನಿನ ಮೇಲೆ ಬಿಡುಗಡೆಯ ಯಾವುದೇ ನಿಬಂಧನೆಗಳನ್ನು ಉಲ್ಲಂಘಿಸಿದರೆ ಅವನನ್ನು ಪುನಃ ಬಂಧಿಸಲಾಗುತ್ತದೆ ಮತ್ತು ಅವನಿಂದ ಪಡೆಯಲಾದ ಜಾಮೀನು ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಅಥವಾ ಅವರ ಖಾತರಿಗಳಿಂದ ಪಡೆಯಲಾಗುತ್ತದೆ.

**97. ಯಾವುದೇ ಸಂದರ್ಭಗಳಲ್ಲಿ ಜಾಮೀನನ್ನು ಒಂದು ಹಕ್ಕು ಎಂದು ಪರಿಗಣಿಸಿ ಮಂಜೂರು ಮಾಡಬಹುದೇ?**

ಹೌದು, ದಂಡ ಪ್ರಕ್ರಿಯಾ ಸಂಹಿತೆಯ ಪ್ರಕಾರ ಕೆಲವು ನಿರ್ದಿಷ್ಟ ಸನ್ನಿವೇಶಗಳಲ್ಲಿ ಒಬ್ಬ ಬಂಧಿತನು ಶಾಸನ ವಿಧಿತವಾದ ಜಾಮೀನಿಗೆ ಅರ್ಹನಿರುತ್ತಾನೆ:

a. ಪೊಲೀಸ್ ಅಧಿಕಾರಿ ಅಥವಾ ನ್ಯಾಯಾಧೀಶರಿಂದ ಜಾಮೀನು ಸಹಿತ ಪ್ರಕರಣಗಳಲ್ಲಿ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು (ದಂ.ಪ್ರ.ಸಂ. ಸೆಕ್ಷನ್ 436).

b. ಒಂದು ಪಕ್ಷ ನಿಗಧಿತ ಕಾಲಾವಧಿಯೊಳಗೆ ಪೊಲೀಸರು ಆಪಾದನಾ/ಆರೋಪಣಾ ಪಟ್ಟಿಯನ್ನು ಸಲ್ಲಿಸದೆ ಇದ್ದರೆ ಮತ್ತು ಆ ಅವಧಿಯಲ್ಲಿ ಪೊಲೀಸರು ಬೇರೆ ಅಪರಾಧಗಳಿಗಾಗಿ ತನಿಖೆಯನ್ನು ಪೂರ್ಣಗೊಳಿಸುವುದರ ನಿರೀಕ್ಷಣೆಯಲ್ಲಿದ್ದರೆ ಬಂಧಿತನನ್ನು ಜಾಮೀನ ಮೇಲೆ ಬಿಡುಗಡೆ ಮಾಡಲೇಬೇಕು [ದಂ.ಪ್ರ.ಸಂ. ಸೆಕ್ಷನ್ 167(2)].

c. ಒಬ್ಬ ಬಂದಿಯು ತನ್ನ ಶಿಕ್ಷಾವಧಿಯಲ್ಲಿ ಗರಿಷ್ಠ ಪ್ರಮಾಣ ಎಂದು ಪರಿಗಣಿಸಲ್ಪಡುವ ಅವಧಿಯನ್ನು ಕಾರಾಗೃಹದಲ್ಲಿಯೇ ಕಳೆದಿದ್ದರೆ ಅವನನ್ನು ಜಾಮೀನು ಮೇಲೆ ಬಿಡುಗಡೆ ಮಾಡಲೇಬೇಕು (ದಂ.ಪ್ರ.ಸಂ. ಸೆಕ್ಷನ್ 436ಎ).

d. ಒಬ್ಬ ಬಂದಿಯು ತನ್ನ ಶಿಕ್ಷಾವಧಿಯ ಅರ್ಧದಷ್ಟು ಕಾಲವನ್ನು ಬಂಧನದಲ್ಲಿಯೇ ಕಳೆದಿದ್ದರೆ ಅಂತಹ ಬಂದಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದು (ದಂ.ಪ್ರ.ಸಂ. ಸೆಕ್ಷನ್ 436ಎ).

**98. ಶಿಕ್ಷಾವಧಿಯನ್ನು ಘೋಷಿಸಿದ ನಂತರ ಏನಾಗುತ್ತದೆ?**

ಒಬ್ಬ ಆರೋಪಿಯು ತಪ್ಪಿತಸ್ಥನೆಂದು ನ್ಯಾಯಾಲಯಕ್ಕೆ ಕಂಡುಬಂದರೆ, ನ್ಯಾಯಾಧೀಶರು ಆರೋಪಿಗೆ ಶಿಕ್ಷೆಯನ್ನು ವಿಧಿಸುತ್ತಾರೆ. ಶಿಕ್ಷೆಯು 'ಎಚ್ಚರಿಕೆ ನೀಡುವಿಕೆ' (ಅಡ್ಮಾನಿಷ್) ಅಥವಾ 'ಪರೀಕ್ಷಾರ್ಥ ನಡತೆ' (ಪ್ರೊಬೇಷನ್) ಅಥವಾ 'ಜುಲ್ಮಾನೆ' ಅಥವಾ ಕಾರಾಗೃಹವಾಸ ಅಥವಾ ಮರಣದಂಡನೆ (ಉಚ್ಚ ನ್ಯಾಯಾಲಯದಿಂದ ಖಚಿತಪಡಿಸಿರಬೇಕು) ಮೊದಲಾದವುಗಳನ್ನು ಹೊಂದಿರುತ್ತದೆ. ಒಬ್ಬ ಅಪರಾಧಿಯು ಒಂದು ನಿರ್ದಿಷ್ಟ ಅವಧಿಯ ಸೆರೆವಾಸಕ್ಕೆ ಒಳಪಟ್ಟಿದ್ದರೆ ಅವನನ್ನು 'ಸಜಾ ಬಂದಿ' ಎಂದು ಕರೆಯಲಾಗುತ್ತದೆ. ಒಂದು ಪಕ್ಷ ನ್ಯಾಯಾಲಯಕ್ಕೆ ಬಂಧಿತನು ತಪ್ಪಿತಸ್ಥನಲ್ಲ ಎಂದು ಕಂಡುಬಂದರೆ ಅವನನ್ನು ತಕ್ಷಣವೇ ಬಿಡುಗಡೆ ಮಾಡಲಾಗುತ್ತದೆ. ಆತ ನೀಡಿದ ಕರಾರು ಪತ್ರಗಳು ಮತ್ತು ಖಾತರಿ ಪತ್ರಗಳನ್ನು ಹಿಂದಿರುಗಿಸಲಾಗುತ್ತದೆ.

**99. ಒಂದು ದಂಡಾದೇಶದ ವಿರುದ್ಧ ಒಬ್ಬ ವ್ಯಕ್ತಿ ಹೇಗೆ ಮೇಲ್ಮನವಿ ಮಾಡಿಕೊಳ್ಳಬಹುದು?**

ಮೇಲ್ಮನವಿಯನ್ನು ಸಲ್ಲಿಸಲು ಬಂದಿಗೆ ಅಥವಾ ಅವರ ಕುಟುಂಬದವರಿಗೆ ವಕೀಲರನ್ನು ನೇಮಿಸಿಕೊಳ್ಳಲು ಸಾಧ್ಯವಿಲ್ಲದಿದ್ದಾಗ, ಉಚ್ಚ ನ್ಯಾಯಾಲಯದ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಅಥವಾ ಸರ್ವೋಚ್ಚ ನ್ಯಾಯಾಲಯದ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ನೇರವಾಗಿ ಅಥವಾ ಕಾರಾಗೃಹ ಕಾನೂನು ಸೇವೆಗಳ ಸಹಾಯ ಕೇಂದ್ರಗಳ ಮೂಲಕ ಒಬ್ಬ ವಕೀಲನನ್ನು ನೇಮಿಸಿಕೊಳ್ಳಲು ಅರ್ಜಿಯನ್ನು ಸಲ್ಲಿಸಬಹುದು ಮತ್ತು ಮೇಲ್ಮನವಿಗಳನ್ನು ಸಲ್ಲಿಸಬಹುದು.

**100. ವಕೀಲರನ್ನು ನೇಮಿಸಿಕೊಳ್ಳಲು ಸಾಧ್ಯವಿಲ್ಲದ ಬಂದಿಗಳು ಹೇಗೆ ಮೇಲ್ಮನವಿಯನ್ನು ಮಾಡಿಕೊಳ್ಳಬಹುದು?**

ಮೇಲ್ಮನವಿಯನ್ನು ಸಲ್ಲಿಸಲು ಬಂದಿಗೆ ಅಥವಾ ಅವರ ಕುಟುಂಬದವರಿಗೆ ವಕೀಲರನ್ನು ನೇಮಿಸಿಕೊಳ್ಳಲು ಸಾಧ್ಯವಿಲ್ಲದಿದ್ದಾಗ, ಉಚ್ಚ ನ್ಯಾಯಾಲಯದ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಅಥವಾ ಸರ್ವೋಚ್ಚ ನ್ಯಾಯಾಲಯದ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ನೇರವಾಗಿ ಅಥವಾ ಕಾರಾಗೃಹ ಕಾನೂನು ಸೇವೆಗಳ ಸಹಾಯಕ ಕೇಂದ್ರಗಳ ಮೂಲಕ ಒಬ್ಬ ವಕೀಲನನ್ನು ನೇಮಿಸಿಕೊಳ್ಳಲು ಅರ್ಜಿಯನ್ನು ಸಲ್ಲಿಸಬಹುದು ಮತ್ತು ಮೇಲ್ಮನವಿಗಳನ್ನು ಸಲ್ಲಿಸಬಹುದು.

**101. ಒಬ್ಬ ಬಂದಿ ಅಥವಾ ಅವರ ಕುಟುಂಬದವರು ವಿಚಾರಣೆಯ ಸ್ಥಿತಿಗತಿಗಳ ಜಾಡನ್ನು ಹೇಗೆ ಅನುಸರಿಸಬಹುದು ಅಥವಾ ಬಂಧನದಲ್ಲಿರುವಾಗಲೇ ಮೇಲ್ಮನವಿಯನ್ನು ಹೇಗೆ ಮಾಡಿಕೊಳ್ಳಬಹುದು?**

ಪ್ರಕರಣದ ನಿಯತಕಾಲಿಕಾ ಸ್ಥಾನಮಾನಗಳನ್ನು ತಿಳಿದುಕೊಳ್ಳಲು ತಮ್ಮ ವಕೀಲರನ್ನು ಕೇಳುವುದೇ ಅಲ್ಲದೆ ಯಾವುದೇ ವ್ಯಕ್ತಿ ತನ್ನ ಪ್ರಕರಣದ ಅಥವಾ ವಿಚಾರಣೆಯ ಅಥವಾ ಮೇಲ್ಮನವಿಯ ಸ್ಥಾನಮಾನಗಳನ್ನು ಇ–ಕೋರ್ಟುಗಳ ಜಾಲತಾಣ (www.ecourts.gov.in./ecourts¬_home/) ಮೂಲಕ ಅದರ ಜಾಡನ್ನು ಹಿಡಿಯಬಹುದು. ಇ–ಜಾಲತಾಣದ ಮುಖಾಂತರ ಜಿಲ್ಲಾ ನ್ಯಾಯಾಲಯ, ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯಗಳಲ್ಲಿ ಜರುಗುತ್ತಿರುವ ಅಥವಾ ನಿರೀಕ್ಷಿಸುತ್ತಿರುವ ಯಾವುದೇ ಪ್ರಕರಣಗಳನ್ನು ಅನುಸರಿಸಬಹುದು (ಜಾಡು ಹಿಡಿಯಬಹುದು). ಇದಕ್ಕಾಗಿ ಕಾರಾಗೃಹದ ಸಿಬ್ಬಂದಿವರ್ಗದವರು, ಕಾನೂನು ಸ್ವಯಂ ಸೇವಕರು, ಕಾನೂನು ಸಹಾಯಕ ಅಧಿಕಾರಿಗಳು ಅಥವಾ ಇತರರಿಂದಲೂ ಈ ಜಾಲತಾಣಗಳನ್ನು ವೀಕ್ಷಿಸುವುದಕ್ಕೆ ಸಹಾಯವನ್ನು ಪಡೆಯಬಹುದು. ಒಬ್ಬ ವ್ಯಕ್ತಿ ತನ್ನ ಪ್ರಕರಣಕ್ಕೆ ಸಂಬಂಧಿಸಿದಂತೆ ಇತ್ತೀಚಿನ ಮಾಹಿತಿಯನ್ನು ಪಡೆಯಲು ಸಂಬಂಧಿತ ನ್ಯಾಯಾಲಯದ ಕಾನೂನು ಸೇವೆಗಳ ಸಂಸ್ಥೆಯ ಮುಖ್ಯ ಕಛೇರಿಯನ್ನು ಸಂಪರ್ಕಿಸಬಹುದು.

# ಬಂದಿಗಳ ಹಕ್ಕುಗಳು

ಕಾರಾಗೃಹ ವಾಸದ ಕಾರಣದಿಂದಾಗಿ ಹೊರತುಪಡಿಸಿದ ಕೆಲವು ಹಕ್ಕುಗಳ ಹೊರತು, ಭಾರತದ ಸಂವಿಧಾನದಲ್ಲಿ ಖಾತರಿಪಡಿಸಿದ ಎಲ್ಲಾ ಮೂಲಭೂತ ಹಕ್ಕುಗಳನ್ನೂ ಬಂದಿಗಳು ಕೂಡ ಹೊಂದಿರುತ್ತಾರೆ.

**ಮಾನವ ಘನತೆಯ ಹಕ್ಕುಗಳು:**

- ಪ್ರಾಥಮಿಕವಾಗಿ ಮಾನವ ಘನತೆಯೊಂದಿಗೆ ಸತ್ಕರಿಸಲ್ಪಡುವ ದೈಹಿಕ ಮತ್ತು ಮಾನಸಿಕ ಸಮಗ್ರತೆಗಳ (ನೈತಿಕ) ಹಕ್ಕು.
- ಹಿಂಸೆ ಅಥವಾ ಕ್ರೌರ್ಯದ ವಿರುದ್ಧದ ಹಕ್ಕು. ಅಮಾನವೀಯ ಅಥವಾ ಅವಮಾನಕರ ಸತ್ಕಾರ (ನಡೆಸಿಕೊಳ್ಳುವಿಕೆ) ಅಥವಾ ಶಿಕ್ಷೆ ಅಥವಾ ಇನ್ನಾವುದೇ ರೀತಿಯಾದ ದೌರ್ಜನ್ಯ, ದುರ್ಬಳಕೆ ಅಥವಾ ದಬ್ಬಾಳಿಕೆಗಳ ವಿರುದ್ಧದ ಹಕ್ಕು.
- ಕಾನೂನಿನಿಂದ ಸ್ಥಾಪಿಸಲ್ಪಟ್ಟಂತಹ ಒಪ್ಪತಕ್ಕ ನಿಬಂಧನೆಗಳಿಗೆ ಅನುಗುಣವಾಗಿ ಪ್ರಾಥಮಿಕ ಹಕ್ಕುಗಳನ್ನು ಪಡೆಯುವ ಹಕ್ಕು.
- ಸರಪಳಿ, ಬೇಡಿ ಮುಂತಾದ ಸಂಕೋಲೆಗಳ ವಿರುದ್ಧದ ಹಕ್ಕು.
- ದಾಖಲಾತಿಯ ಸಮಯದಲ್ಲಿ ವೈದ್ಯಕೀಯ ಪರೀಕ್ಷೆಯನ್ನು ಪಡೆಯುವ ಹಕ್ಕು.
- ಅನುಚಿತ ಭೇದಭಾವಗಳ ವಿರುದ್ಧದ ರಕ್ಷಣೆಯ ಹಕ್ಕು.
- ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಹಕ್ಕು.

**ಪ್ರಾಥಮಿಕ ಕನಿಷ್ಠ ಅಗತ್ಯತೆಗಳ ಹಕ್ಕು:**

- ಕಾನೂನು ಅಡಿಯಲ್ಲಿ ಅವಕಾಶವಿರುವಂತಹ ಬಂದಿಗಳ ಸವಲತ್ತುಗಳು ಮತ್ತು ಸೌಕರ್ಯಗಳ ಹಕ್ಕು.
- ಯುಕ್ತ ಆಹಾರ, ಆರೋಗ್ಯ ಪಾಲನೆ, ಶುದ್ಧವಾದ ಮತ್ತು ಕುಡಿಯಲು ಯೋಗ್ಯವಾದ ನೀರಿನ ಬಳಕೆಯ ಹಕ್ಕು.
- ಸ್ವಚ್ಛವಾದ ಮತ್ತು ಆರೋಗ್ಯಕರವಾದ ವಾಸಯುಕ್ತ ಸೌಲಭ್ಯಗಳು, ನೈರ್ಮಲ್ಯ ಮತ್ತು ವ್ಯಕ್ತಿಗತ ಆರೋಗ್ಯ ಪಾಲನೆಯ ಹಕ್ಕು.
- ಸಾಕಷ್ಟು ಬಟ್ಟೆ-ಬರೆ, ಹಾಸಿಗೆ ಮುಂತಾದವುಗಳಂತಹ ಪ್ರಾಥಮಿಕ ಸೌಕರ್ಯಗಳ ಹಕ್ಕು.
- ಕಾರಾಗೃಹದಲ್ಲಿ ಮಾಡಿದ ಕೆಲಸಗಳಿಗೆ ನಿಗದಿಪಡಿಸಿದ ದರ ಮತ್ತು ನಿಯಮಗಳ ಪ್ರಕಾರ ಮಜೂರಿಗಳನ್ನು ಪಡೆಯುವ ಹಕ್ಕು.
- ಒಬ್ಬ ವ್ಯಕ್ತಿಯು ತನ್ನ ಧರ್ಮವನ್ನು ಪರಿಪಾಲಿಸುವ, ಆದರೆ ಇವುಗಳನ್ನು ಕಾರಾಗೃಹದ ಸುರಕ್ಷತೆ ಮತ್ತು ಕಾನೂನು ಮುಂತಾದವುಗಳಿಗೆ ಒಪ್ಪತಕ್ಕಂತಹ ಮಿತಿಗಳಲ್ಲಿ ಪರಿಪಾಲಿಸುವ ಹಕ್ಕು

ಸಂವಹನದ ಹಕ್ಕು:

- ಬಾಹ್ಯ ಜಗತ್ತಿನೊಂದಿಗಿನ ಸಂವಹನದ ಹಕ್ಕು. ಕುಟುಂಬ, ಸ್ನೇಹಿತರು ಮತ್ತು ವಕೀಲರೊಂದಿಗೆ ನಿಯತಕಾಲಿಕವಾಗಿ ಸಂದರ್ಶಿಸುವ ಹಕ್ಕು.
- ತನ್ನ ಆರೋಗ್ಯ, ಅಸ್ವಸ್ಥತೆ, ಗಾಯಗಳು ಮುಂತಾದವುಗಳನ್ನು ಹಾಗೂ ಒಂದು ಕಾರಾಗೃಹದಿಂದ ಮತ್ತೊಂದು ಕಾರಾಗೃಹಕ್ಕೆ ತನ್ನನ್ನು ವರ್ಗಾವಣೆ ಮಾಡುವುದನ್ನು ಅಥವಾ ತನಗೆ ನೀಡಲಾದ ಸಜೆಯನ್ನು, ತನ್ನ ಕುಟುಂಬ ಅಥವಾ ಮಿತ್ರರಿಗೆ ತಿಳಿಸುವ ಹಕ್ಕು.
- ವಿದೇಶಿ ಬಂದಿಗಳು ತನ್ನ ರಾಯಭಾರಿ/ಕಾನ್ಸುಲೇಟ್/ರಾಜತಾಂತ್ರಿಕ ಸಂಸ್ಥೆಗಳಿಗೆ ತನ್ನ ಬಂಧನದ ಪೂರ್ಣ ಮಾಹಿತಿಯನ್ನು ತಿಳಿಸಲು, ಕಾನೂನು ಸಹಾಯವನ್ನು ಪಡೆಯಲು ಮತ್ತು ಸ್ವದೇಶಕ್ಕೆ ಹಿಂದಿರುಗುವಿಕೆಯ ಹಕ್ಕು.
- ಕಾರಾಗೃಹ ಗ್ರಂಥಾಲಯಗಳ ಮೂಲಕ ದಿನ ಪತ್ರಿಕೆಗಳು, ವಾರಪತ್ರಿಕೆಗಳು, ವೃತ್ತಪತ್ರಿಕೆಗಳು ಹಾಗೂ ನಿಯತಕಾಲಿಕೆಗಳು ಮುಂತಾದವುಗಳನ್ನು ಪಡೆಯುವ ಹಕ್ಕು.

ಮಹಿಳಾ ಬಂದಿಗಳು ಮತ್ತು ಕಾರಾಗೃಹದಲ್ಲಿನ ಮಕ್ಕಳ ಹಕ್ಕುಗಳು:

- ಪುರುಷ ಬಂದಿಗಳಿಂದ ಸಂಪೂರ್ಣವಾಗಿ ಪ್ರತ್ಯೇಕವಾಗಿ ಇರಿಸಲ್ಪಡುವ ಹಕ್ಕು.
- ತಮ್ಮ ಮಕ್ಕಳಿಗೆ 06 ವರ್ಷಗಳಾಗುವ ತನಕ ತಮ್ಮೊಂದಿಗೆ ಉಳಿಸಿಕೊಳ್ಳುವ ಮಹಿಳಾ ಬಂದಿಗಳ ಹಕ್ಕು.
- ಕೇವಲ ಮಹಿಳಾ ಸಿಬ್ಬಂದಿಗಳಿಂದ ಮಾತ್ರ ತಪಾಸಣೆ ಮತ್ತು ಮೇಲ್ವಿಚಾರಣೆಗಳ ಹಕ್ಕು.
- ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಯುಕ್ತ ಪ್ರಸೂತಿ ತಜ್ಞ ವೈದ್ಯರಿಂದ ನಿಯತಕಾಲಿಕವಾಗಿ ಪರೀಕ್ಷಿಸಿಕೊಳ್ಳುವ ಗರ್ಭಿಣಿ ಮಹಿಳೆಯ ಹಕ್ಕು.
- ಪ್ರಸವಪೂರ್ವ, ಪ್ರಸವ ಹಾಗೂ ಪ್ರಸವೋತ್ತರ ಶುಶ್ರೂಷೆಗೆ ಪ್ರಾಥಮಿಕ ಕನಿಷ್ಟ ಸವಲತ್ತುಗಳನ್ನು ಪಡೆಯುವ ಹಕ್ಕು.
- ಮಗು ಕಾರಾಗೃಹದಲ್ಲಿ ಹುಟ್ಟಿತೆಂದು ದಾಖಲು ಮಾಡದೆ ಇರುವಂತಹ ಜನನ ಪ್ರಮಾಣ ಪತ್ರ ಪಡೆಯುವ ಹಕ್ಕು.
- ಮಕ್ಕಳ ಆಹಾರ, ವಸತಿ, ವೈದ್ಯಕೀಯ ಪಾಲನೆ, ವಸ್ತ್ರ, ಶಿಕ್ಷಣ ಮತ್ತು ಮನರಂಜನಾ ಸೌಲಭ್ಯಗಳ ಹಕ್ಕು.
- ಮಹಿಳಾ ವೈದ್ಯಾಧಿಕಾರಿಯಿಂದ ನಿಯತಕಾಲಿಕವಾಗಿ ವೈದ್ಯಕೀಯ ಪರೀಕ್ಷೆ ಹಾಗೂ ಸಕಾಲದಲ್ಲಿ ಲಸಿಕೆಗಳನ್ನು (Vaccination) ಪಡೆಯುವ ಹಕ್ಕು.
- ಕಾರಾಗೃಹಕ್ಕೆ ಸೇರಿದಂತಹ ಮಕ್ಕಳಿಗೆ ಶಿಶುಧಾಮ ಮತ್ತು ಶಿಶುವಿಹಾರಗಳ ಸೌಲಭ್ಯಗಳನ್ನು ಒದಗಿಸುವ ಮಕ್ಕಳ ಹಕ್ಕು.

ಬಂದಿಗಳ ಕರ್ತವ್ಯಗಳು:

- ಕಾರಾಗೃಹದ ನೀತಿ ನಿಯಮಗಳಿಗೆ ವಿಧೇಯರಾಗಿರಿ ಮತ್ತು ತತ್ಸಂಬಂಧಿತ ಕಾರಾಗೃಹ ಅಧಿಕಾರಿಯು ನೀಡಿದಂತಹ ಸೂಚನೆಗಳನ್ನು/ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸಿ.
- ಕಾರಾಗೃಹ ಸಿಬ್ಬಂದಿಗಳಿಗೆ ತಮ್ಮ ಅಧಿಕೃತ ಕಾರ್ಯಗಳಾದ ಶಿಸ್ತುಪಾಲನೆ, ಬಂದಿಗಳ ನಿರ್ವಹಣೆ ಮತ್ತು ಉತ್ತಮ ನಡವಳಿಕೆಗಳ ಮೂಲಕ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಅವರಿಗೆ ನೆರವು ನೀಡಿ.
- ಕಾರಾಗೃಹದಲ್ಲಿ ಶಿಸ್ತಿನ ಜೀವನವನ್ನು ನಡೆಸುವುದು, ನೈರ್ಮಲ್ಯಕ್ಕೆ ಹೆಚ್ಚಿನ ಆದ್ಯತೆ ಮತ್ತು ಆರೋಗ್ಯದ ಮಟ್ಟಗಳನ್ನು ಕಾಪಾಡಲು ಸಹಕರಿಸಿ.
- ಕಾರಾಗೃಹದಲ್ಲಿ ಯಾವುದೇ ರೀತಿಯ ಅನುಚಿತ ಹಾಗೂ ಅಹಿತಕರ ಘಟನೆಗಳು ನಡೆದಲ್ಲಿ ಕಾರಾಗೃಹದ ಅಧಿಕಾರಿಗಳಿಗೆ ವರದಿ ಮಾಡಿ.
- ಅಹವಾಲು ಪರಿಹಾರ ವ್ಯವಸ್ಥೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಿ ಮತ್ತು ಇದನ್ನು ಬಳಸಿಕೊಳ್ಳಲು ಇತರರನ್ನು ಪ್ರೋತ್ಸಾಹಿಸಿ. ಆದರೆ ಸುಳ್ಳು-ಪೊಳ್ಳು ದೂರುಗಳನ್ನು ಮಾಡುವುದು ಅಥವಾ ಮುಷ್ಕರ, ಗಲಭೆ ಮುಂತಾದವುಗಳನ್ನು ಕಾರಾಗೃಹದಲ್ಲಿ ನಡೆಯಲು ಕರೆ ನೀಡುವುದು ಮುಂತಾದವುಗಳನ್ನು ಮಾಡಬೇಡಿ.
- ಪೆರೋಲ್ ಅಥವಾ ಫರ್ಲೋ ಅವಧಿಯು ಪೂರ್ಣಗೊಂಡ ತಕ್ಷಣವೇ ಕಾರಾಗೃಹಕ್ಕೆ ಹಿಂದಿರುಗಿ.
- ಕಾರಾಗೃಹದ ಬೀಗ, ಕಿಟಕಿ, ಬಾಗಿಲು ಅಥವಾ ಇನ್ನಾವುದೇ ಕಾರಾಗೃಹ ಉಪಕರಣ/ಸಲಕರಣೆಗಳನ್ನು ಹಾಳು ಮಾಡುವ ಪ್ರಯತ್ನಗಳನ್ನು ಅಚಾತುರ್ಯದಿಂದಾಗಿ ಅಥವಾ ಉದ್ದೇಶಪೂರ್ವಕವಾಗಿ ಮಾಡಲೇಬೇಡಿ ಹಾಗೂ ಸರ್ಕಾರಿ ಆಸ್ತಿಯನ್ನು ಸಾಕಷ್ಟು ಎಚ್ಚರಿಕೆಯಿಂದ ಬಳಸಿ.
- ಕಾರಾಗೃಹದಲ್ಲಿ ಬಂದಿಗಳಿಗೆ ಹಿತಕರವಾದ ತಿದ್ದುಪಡಿ/ಪರಿವರ್ತನಾ ವಾತಾವರಣವನ್ನು ರಕ್ಷಿಸಿ ಹಾಗೂ ಪೋಷಿಸಿ.
- ಕಾರಾಗೃಹದ ನಿಗದಿತ ಕಾರ್ಯಗಳನ್ನು ಶ್ರದ್ಧೆಯಿಂದ ಮಾಡಿ.
- ಕಾರಾಗೃಹದಲ್ಲಿನ ಸಹಬಂದಿಗಳ, ಸಿಬ್ಬಂದಿವರ್ಗದವರ, ಅಧಿಕಾರಿಗಳ ಹಾಗೂ ಇತರರ ಗೌರವ, ಘನತೆಗಳನ್ನು ಕಾಪಾಡಿ.
- ಇತರರ ಭಾವನೆ, ನಂಬಿಕೆ, ಶ್ರದ್ಧೆ ಮುಂತಾದವುಗಳನ್ನು ನೋಯಿಸಬೇಡಿ.

# CHRI ಕಾರ್ಯಕ್ರಮಗಳು

**(ಕಾಮನ್‌ವೆಲ್ತ್ ಮಾನವ ಹಕ್ಕುಗಳ ಉಪಕ್ರಮ)**

CHRI ನ ನಂಬಿಕೆ ಎಂದರೆ, ಕಾಮನ್‌ವೆಲ್ತ್ ಮತ್ತು ಅದರ ಸದಸ್ಯ ದೇಶಗಳು ತಮ್ಮ ಜವಾಬ್ದಾರಿ, ಕಾರ್ಯನಿರ್ವಹಣೆ ಮುಂತಾದವುಗಳಲ್ಲಿ ಉತ್ತಮ ಗುಣಮಟ್ಟವನ್ನು ಕಾಪಾಡಿಕೊಳ್ಳುವುದೇ ಅಲ್ಲದೆ ಅವುಗಳಿಗೆ ಜವಾಬ್ದಾರಿಯುತವಾಗಿರಬೇಕು. ಇದು ಮಾನವ ಹಕ್ಕುಗಳಿಗೆ, ಪಾರದರ್ಶಕತೆಗೆ, ಪ್ರಜಾಪ್ರಭುತ್ವಕ್ಕೆ ಹಾಗೂ ಸಾಧಿತವಾಗುವಂತಹ/ ಊರ್ಜಿತವಾಗಿಸುವಂತಹ/ ಸಮರ್ಥನೆಯ ವಿಕಾಸ ಗುರಿಗಳಿಗೆ (SDGs) ಅವಶ್ಯಕ. CHRI ವಿಶೇಷವಾಗಿ ಮಾನವ ಹಕ್ಕುಗಳಿಗೆ ಸಂಬಂಧಿಸಿದ ಉಪಕ್ರಮ ಮತ್ತು ವಕಾಲತ್ತುಗಳ ವ್ಯೂಹ/ತಂತ್ರದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತದೆ. ಮಾನವ ಹಕ್ಕುಗಳು ನ್ಯಾಯವನ್ನು ಪಡೆಯುವ ಅವಕಾಶ, ಮಾಹಿತಿಯನ್ನು ಪಡೆಯವ ಅವಕಾಶ ಮುಂತಾದವುಗಳನ್ನು ತನ್ನ ಗುರಿಯಾಗಿಸಿಕೊಂಡಿವೆ. CHRI ಈ ಕೆಳಗಿನ ಪ್ರಾಥಮಿಕ ಕಾರ್ಯಕ್ರಮಗಳ ಸಂಶೋಧನೆ, ಪ್ರಚಾರ, ಪ್ರಕಾಶನ ಕಾರ್ಯಗಾರ, ವಿಶ್ಲೇಷಣೆ, ಚಾಲನೆಗೊಳಿಸುವಿಕೆ, ಪ್ರಸರಣ (ಪ್ರಸಾರ) ಮತ್ತು ಮಾಹಿತಿಗಳ ಮೆಲೆ ತನ್ನ ಗಮನವನ್ನು ಕೇಂದ್ರೀಕರಿಸಿದೆ.

**1. ನ್ಯಾಯವನ್ನು ಪಡೆಯುವ ಅವಕಾಶ (ATJ):**

**ಪೊಲೀಸ್ ಸುಧಾರಣೆ:** ಅನೇಕ ದೇಶಗಳಲ್ಲಿ ಪೊಲಿಸರನ್ನು ದಬ್ಬಾಳಿಕೆ ನಡೆಸುವ, ಪೀಡಿಸುವ ಸರ್ಕಾರಿ ವ್ಯವಸ್ಥೆಯೆಂದೇ ಪರಿಗಣಿಸಿದ್ದಾರೆಯೇ ವಿನಃ ನಾಗರಿಕರ ಹಕ್ಕುಗಳನ್ನು ಕಾಪಾಡುವ ಜವಬ್ದಾರಿಯುತ ವ್ಯಕ್ತಿಗಳೆಂದು ಪರಿಗಣಿಸಿಲ್ಲ. ಇವರಿಂದಲೇ ಬಹುವ್ಯಾಪಕವಾದ ಮಾನವಹಕ್ಕುಗಳ ಉಲ್ಲಂಘನೆ, ನ್ಯಾಯದ ನಿರಾಕರಣೆ ಆಗುತ್ತವೆ ಎಂದೇ ತಿಳಿದಿದ್ದಾರೆ. CHRI ಪೊಲೀಸರನ್ನು, ಕಾನೂನಿನ ನಿಯಮಗಳನ್ನು ಹೇರುವಂತಹ ವರ್ಗ ಎಂದು ಬಿಂಬಿಸುವ ಬದಲು, ಅದನ್ನು ಎತ್ತಿ ಹಿಡಿಯುವಂತಹ ಸುಧಾರಿತ ವ್ಯವಸ್ಥೆ ಎಂದು ಬಿಂಬಿಸುವ ಪ್ರಯತ್ನವನ್ನು ಮಾಡುತ್ತಿದೆ. ಈ ನಿಟ್ಟಿನಲ್ಲಿ CHRI ನ ಕಾರ್ಯಕ್ರಮಗಳು, ಪೊಲೀಸ್ ಸುಧಾರಣೆಗೆ ಮತ್ತು ನಾಗರಿಕ ಸಮಾಜದ ಪರಿಹಾರ ಕಾರ್ಯಕ್ರಮಗಳನ್ನು ಬಲಪಡಿಸಲು ಈ ಮೂಲಕ ಸಾರ್ವಜನಿಕರ ನೆರವು ಪಡೆಯುವಿಕೆಯನ್ನು ತನ್ನ ಗುರಿಯಾಗಿಸಿಕೊಂಡಿದೆ. ಪೂರ್ವ ಆಫ್ರಿಕಾ ಮತ್ತು ಘಾನಾಗಳಲ್ಲಿ ಪೊಲೀಸ್ ಹೊಣೆಗಾರಿಕೆಗಳು ಮತ್ತು ರಾಜಕೀಯ ಹಸ್ತಕ್ಷೇಪಗಳನ್ನು ನಿರಂತರವಾಗಿ ಪರೀಕ್ಷಿಸುತ್ತಿದೆ.


- ಲಿಂಗಾಧಾರಿತ, ದೈಹಿಕ ಲಕ್ಷಣ, ಬಣ್ಣದ ಆಧಾರದ ಮೇಲೆ ಭೇದಭಾವಗಳ ವಿರುದ್ಧದ ಒಂದು ಇಲಾಖೆಯನ್ನು ಸ್ಥಾಪಿಸಲು ಪ್ರಯತ್ನಿಸಿದೆ.

- **ಕಾರಾಗೃಹಗಳ ಸುಧಾರಣೆ:** ಔಪಚಾರಿಕವಾಗಿ ಮುಚ್ಚಿದ ವ್ಯವಸ್ಥೆಯನ್ನು ಹೆಚ್ಚು ಪಾರದರ್ಶಕವಾಗಿಸುವ ಹಾಗೂ ಭ್ರಷ್ಟಾಚಾರ ಮುಂತಾದವುಗಳನ್ನು ಕಾರಾಗೃಹದಿಂದ ಮುಕ್ತಗೊಳಿಸಲು ಉದ್ದೇಶಿಸಿದೆ. ಕಾನೂನು ವ್ಯವಸ್ಥೆಯ ವೈಫಲ್ಯದ ಕಾರಣದಿಂದಾಗಿ ಕಾರಾಗೃಹಗಳಲ್ಲಿ ಬಂದಿಗಳ ಸಂಖ್ಯೆ ಅಧಿಕವಾಗಿದೆ. ಒಪ್ಪಲು ಸಾಧ್ಯವೇ ಇಲ್ಲದಂತಹ ವಿಚಾರಣಾ ಪೂರ್ವ ದೀರ್ಘ ಬಂಧನ ಮತ್ತು ಕಾರಾಗೃಹಗಳಲ್ಲಿ ಅನಗತ್ಯವಾಗಿ ಹೆಚ್ಚು ಕಾಲ ಉಳಿಸಿಕೊಳ್ಳುವಿಕೆ ಮುಂತಾದವುಗಳನ್ನು ವಿಶೇಷವಾಗಿ ಗಮನಿಸಿ ಅದಕ್ಕನುಗುಣವಾದ ಕಾನೂನಿನ ಹಸ್ತಕ್ಷೇಪ, ನೀತಿ ನಿಯಮಗಳಲ್ಲಿ ಬದಲಾವಣೆ ಹಾಗೂ ಕಾರಾಗೃಹಗಳಲ್ಲಾಗುವ ಅಚಾತುರ್ಯ ಮತ್ತು ಋಣಾತ್ಮಕ ವ್ಯವಸ್ಥೆಗಳ ತಿದ್ದುಪಡಿ ಮುಂತಾದವುಗಳನ್ನು ಗುರಿಯಾಗಿಸಿಕೊಂಡಿದೆ. ಈ ಕ್ಷೇತ್ರಗಳಿಗೆ ವಿಶೇಷ ಗಮನ ನೀಡುವುದರಿಂದ ಕಾರಾಗೃಹದ ಆಡಳಿತದಲ್ಲಿ, ನ್ಯಾಯದ ನಿಬಂಧನೆಗಳಲ್ಲಿ ಯುಕ್ತ ಸುಧಾರಣೆಗಳನ್ನು ತರಲು ಸಾಧ್ಯ.

**2. ಮಾಹಿತಿಯನ್ನು ಪಡೆಯುವ ಅವಕಾಶ:**

- ಮಾಹಿತಿಯನ್ನು ಪಡೆಯುವ ಅವಕಾಶಗಳನ್ನು ಪ್ರಚಾರ ಮಾಡುವ ಕಾರ್ಯದಲ್ಲಿ CHRI ಯನ್ನು ಒಂದು ಮುಖ್ಯ ಸಂಘಟನೆ ಎಂದೇ ಗುರುತಿಸಲಾಗಿದೆ. CHRI ಯು ನಿಯಮಾನುಸಾರ ಮಾಹಿತಿ ಪಡೆಯುವ ಅವಕಾಶಗಳ ಪರಿಣಾಮಕಾರಿ ಹಕ್ಕುಗಳ ಆಚರಣೆಯನ್ನು ಮತ್ತು ಅವುಗಳ ಪ್ರಚಾರವನ್ನು ಮಾಡಲು ಎಲ್ಲಾ ದೇಶಗಳನ್ನು ಉತ್ತೇಜಿಸುತ್ತದೆ. ನಿಯತಕಾಲಿಕವಾಗಿ ಕಾನೂನುಬದ್ಧವಾಗಿಸುವಿಕೆಯನ್ನು ಉತ್ತೇಜಿಸುವುದೇ ಅಲ್ಲದೆ ಭಾರತ, ಶ್ರೀಲಂಕಾ ಆಫ್ಘಾನಿಸ್ತಾನ, ಬಾಂಗ್ಲಾದೇಶ ಮತ್ತು ಇತ್ತೀಚೆಗೆ ಕೀನ್ಯಾದಲ್ಲಿ ಮಾಹಿತಿ ಪಡೆಯುವ ನಿಯಮ ಮತ್ತು ಆಚರಣೆಗಳನ್ನು ಪ್ರಚಾರ ಮಾಡುವಲ್ಲಿ CHRI ಬಹಳ ಯಶಸ್ವಿಯಾಗಿದೆ. CHRI ಯು ಘಾನಾದಲ್ಲಿ ಮಾಹಿತಿ ಹಕ್ಕಿಗಾಗಿ ನಾಗರೀಕ ಸಮಾಜ ಸಂಯೋಜನೆಯಲ್ಲಿ ಒಂದು ಸಚಿವಾಲಯವನ್ನೇ ಸ್ಥಾಪಿಸಿದೆ. ನಿಯತಕಾಲಿಕವಾಗಿ ನಾವು ಹೊಸ ಶಾಸನಗಳನ್ನು ವಿಮರ್ಶಿಸಿ ಸರ್ಕಾರದಲ್ಲಿ ಉತ್ತಮ ಆಚರಣೆಗಳನ್ನು ತರುವಲ್ಲಿ ಹಸ್ತಕ್ಷೇಪ ಮಾಡಿ ಹಲವಾರು ಬದಲಾವಣೆಗಳನ್ನು ತರುತ್ತಿದ್ದೇವೆ. ಇದನ್ನು ಸರ್ಕಾರಿ ಮತ್ತು ನಾಗರೀಕ ಸಮಾಜಕ್ಕೆ ಸಂಬಂಧಪಟ್ಟ ನಿಯಮಗಳನ್ನು ರಚಿಸುವ ಮತ್ತು ಅವುಗಳನ್ನು ಅಚರಣೆಗೆ ತರುವ ಕಾಲದಲ್ಲಿ ಇಂತಹ ಹಸ್ತಕ್ಷೇಪ ಪರಿಣಾಮಕಾರಿಯಾಗಿದೆ. ನಮಗೆ ಉದ್ರಿಕ್ತ ವಾತಾವರಣಗಳಲ್ಲಿ ಹಾಗೂ ಸಾಂಸ್ಕೃತಿಕವಾಗಿ ವ್ಯತ್ಯಾಸವಾದಂತಹ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಅನುಭವವಿದೆ. ಈ ಅನುಭವಗಳು ಮಾಹಿತಿ ಹಕ್ಕಿಗೆ ಸಂಬಂಧಿಸಿದಂತಹ ಹೊಸ ನಿಯಮಗಳನ್ನು ರೂಪಿಸುವಲ್ಲಿ ಉತ್ತಮ ಒಳನೋಟವನ್ನು ಕೊಡುತ್ತದೆ. ಉದಾಹರಣೆಗೆ– ಘಾನಾದಲ್ಲಿ ಮಾಹಿತಿಯನ್ನು ಪಡೆಯುವ ಮೌಲ್ಯಗಳ ತಿಳುವಳಿಕೆಗಳನ್ನು ಪ್ರಚಾರ ಮಾಡುವಲ್ಲಿ ಹಾಗೂ ಪರಿಣಾಮಕಾರಿಯಾದ ಹೊಸ ನಿಯಮಗಳನ್ನು ಪರಿಚಯಿಸುವಲ್ಲಿ ಬಹಳ ಯಶಸ್ವಿಯಾಗಿದ್ದೇವೆ.

- **ದಕ್ಷಿಣ ಏಷ್ಯಾದ ಮಾಧ್ಯಮ ರಕ್ಷಕರ ಜಾಲಕಾರ್ಯ** (South Asia Media Defender's Network-SAMDEN): ದಕ್ಷಿಣ ಏಷ್ಯಾದಲ್ಲಿ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಕ್ಷೇತ್ರಗಳಲ್ಲಿ ಅಭಿವ್ಯಕ್ತಿ ಮತ್ತು ವಾಕ್ ಸ್ವಾತಂತ್ರ್ಯದ ಮೇಲೆ ಒತ್ತಡ ಹೇರಿರುವ ಮಾಧ್ಯಮ ಕಾರ್ಯಕರ್ತರ ಮೇಲೆ ಹೆಚ್ಚುತ್ತಿರುವ ಹಲ್ಲೆಗಳ ಸಮಸ್ಯೆಗಳನ್ನು ಪರಿಹರಿಸಲು ಮಾಧ್ಯಮದ ವೃತ್ತಿಪರ ವಲಯ ಜಾಲಕಾರ್ಯಗಳನ್ನು CHRI ರಚಿಸಿದೆ. CHRI ಸ್ಥಾಪಿಸಿರುವಂತಹ ದಕ್ಷಿಣ ಏಷ್ಯಾದ ಮಾಧ್ಯಮ ರಕ್ಷಕರ ಜಾಲಕಾರ್ಯದ ಸ್ವಾತಂತ್ರ್ಯವು ಅವಿಭಾಜ್ಯವಾಗಿರುವುದೇ ಅಲ್ಲದೆ ಯಾವ ರಾಜಕೀಯ ಎಲ್ಲೆಗಳನ್ನು ತಿಳಿದಿರುವುದಿಲ್ಲ ಎಂಬುದನ್ನು ಗುರುತಿಸಿದೆ. ಭೇದಭಾವಗಳನ್ನು ಮತ್ತು ಬೆದರಿಕೆಗಳನ್ನು ಅನುಭವಿಸಿದಂತಹ ಮಾಧ್ಯಮದ ವೃತ್ತಿಪರರ ಒಂದು ಸಮೂಹ ಈ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದೆ. ಮಾಧ್ಯಮದ ಮೇಲೆ ಒತ್ತಡಗಳು, ಮಾಧ್ಯಮದ ಸ್ವಾತಂತ್ರ್ಯ ಹರಣ ಮತ್ತು ಅವಕಾಶಗಳ ಸಂಕುಚಿತತೆ ಮುಂತಾದ ಸಮಸ್ಯೆಗಳನ್ನು ಎತ್ತಿಹಿಡಿಯಲು ಈ ವೇದಿಕೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿದೆ. ಶಕ್ತಿ, ಸಹಕಾರ, ಸಂಯೋಜನೆ ಮೂಲಕ ಧನಾತ್ಮಕವಾಗಿ ಬೆಳೆಯಬಹುದು ಎಂಬುದನ್ನು ಮಾಧ್ಯಮಕ್ಕೆ ತಿಳಿಸುವ ಪ್ರಯತ್ನವನ್ನು ಮಾಡುತ್ತಿವೆ. ಸಮಷ್ಟಿಯ (ಸಮೂಹ) ಮುಖ್ಯ ಕಾರ್ಯಕ್ಷೇತ್ರವೆಂದರೆ, ಮಾಹಿತಿ ಚಳುವಳಿಯ ಹಕ್ಕುಗಳೊಂದಿಗೆ ದಕ್ಷಿಣ ಏಷ್ಯಾದ ಮಾಧ್ಯಮ ರಕ್ಷಕರ ಜಾಲಕಾರ್ಯ (South Asia Media Defender's Network- SAMDEN) ವನ್ನು ಬೆಸೆಯುವುದು.




Activity supported by the
Canada Fund for Local Initiatives
Activité réalisée avec l'appui du
Fonds canadien d'initiatives locales

Canada

ಕಾರಾಗೃಹಗಳು ಮುಚ್ಚಿದ ಸ್ಥಳವಾಗಿದೆ. ಬಂದಿಗಳ ದೈನಂದಿನ ಜೀವನ ಮತ್ತು ನಿತ್ಯಕರ್ಮಗಳಿಗೆ ಸಂಬಂಧಿಸಿದಂತೆ ಬಹಳಷ್ಟು ಕಡಿಮೆ ಮಾಹಿತಿಗಳು ಲಭ್ಯವಿರುವುದನ್ನು ಕಾಣಬಹುದು. ಮಾತ್ರವಲ್ಲದೆ ಕಾರಾಗೃಹ ಜೀವನದ ವಿವರಣೆಯನ್ನು ತಿಳಿಯಲು (ತಾವು ಅದರಲ್ಲಿ ಒಬ್ಬರು ಎಂಬುದನ್ನು ಹೊರತುಪಡಿಸಿದರೆ) ಬಹುತೇಕ ಜನರಿಗೆ ಅದು ಅನಾವಶ್ಯಕವಾದದ್ದು ಹಾಗೂ ನಿರಾಸಕ್ತವಾದದ್ದು. ಇದರ ಅರ್ಥ ಬಹುತೇಕ ಜನರಿಗೆ ಕಾರಾಗೃಹಗಳಿಗೆ ಸಂಬಂಧಿಸಿದಂತಹ ಹಲವು ಪ್ರಶ್ನೆಗಳು ಕೇವಲ ಕುತೂಹಲದಿಂದ ಅಥವಾ ಅನಿವಾರ್ಯದಿಂದ ತೋರಿದ ಪ್ರಶ್ನೆಗಳಾಗಿರುತ್ತವೆ ಮತ್ತು ಈ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಅವರಲ್ಲಿ ಉತ್ತರಗಳು ಇರುವುದಿಲ್ಲ. ಈ ಪುಸ್ತಕವು ಸಾಮಾನ್ಯರು ಪದೇ ಪದೇ ಕೇಳುವಂತಹ ಕಾರಾಗೃಹಗಳು ಮತ್ತು ಬಂದಿಗಳಿಗೆ ಸಂಬಂಧಿಸಿದ 101 ಪ್ರಶ್ನೆಗಳು ಹಾಗೂ ಉತ್ತರಗಳನ್ನು ಒಳಗೊಂಡಿದೆ.

**Commonwealth Human Rights Initiative**
55A, Third Floor, Siddharth Chambers, Kalu Sarai,
New Delhi 110 016, India
Tel: +91 11 4318 0200, Fax: +91 11 2686 4688
E-mail: info@humanrightsinitiative.org